

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಜುಲೈ 16 ಶನಿವಾರ 2022

ಸಂಪುಟ: 43 | ಸಂಚಿಕೆ: 91 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಸಿದ್ದರಾಮಯ್ಯ ತವರಲ್ಲೇ ಮೊಳಗಿತು ಮುಂದಿನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಘೋಷಣೆ



ಸಾರಿಗೆ ಬಸ್‌ನಲ್ಲಿ ಚಾಮುಂಡಿಬೆಟ್ಟಕ್ಕೆ ತೆರಳುತ್ತಿರುವ ಡಿ.ಕೆ.ಶಿವಕುಮಾರ್

ಸಾಮಾನ್ಯರಂತೆ ಸಾರಿಗೆ ಬಸ್‌ನಲ್ಲಿ ಚಾಮುಂಡಿಬೆಟ್ಟಕ್ಕೆ ತೆರಳಿ ಚಾಮುಂಡೇಶ್ವರಿ ದರ್ಶನ ಪಡೆದ ಡಿಕೆಶಿ

ಮೈಸೂರು, ಜು.15(ಎಂಟಿವೈ)– ವಿಪಕ್ಷ ನಾಯಕ ಸಿದ್ದರಾಮಯ್ಯ ಅವರ ತವರಿನಲ್ಲೇ 'ಮುಂದಿನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್' ಘೋಷಣೆ ಮೊಳಗಿದೆ. ಮೂರನೇ ಆಷಾಢ ಶುಕ್ರವಾರವಾದ ಇಂದು ಚಾಮುಂಡೇಶ್ವರಿ ದರ್ಶನಕ್ಕಾಗಿ ಚಾಮುಂಡಿ ಬೆಟ್ಟಕ್ಕೆ ಡಿ.ಕೆ.ಶಿವಕುಮಾರ್ ಆಗಮಿಸುತ್ತಿದ್ದಂತೆ ಅವರ ಬೆಂಬಲಿಗರು 'ಮುಂದಿನ ಮುಖ್ಯಮಂತ್ರಿ' ಘೋಷಣೆ ಕೂಗಿದರಾದರೂ ಡಿಕೆಶಿ ಅದಕ್ಕೆ ಯಾವುದೇ ರೀತಿಯ ಪ್ರತಿಕ್ರಿಯೆ ನೀಡದೇ ದೇವಸ್ಥಾನ ಪ್ರವೇಶಿಸಿದರು.

ಬೆಂಗಳೂರಿನಿಂದ ಪತ್ನಿ ಉಷಾ ಅವರೊಂದಿಗೆ ಇಂದು ಬೆಳಗ್ಗೆ ಮೈಸೂರಿಗೆ ಆಗಮಿಸಿದ ಡಿ.ಕೆ.ಶಿವಕುಮಾರ್, ಲಲಿತ ಮಹಲ್ ಪ್ಯಾಲೇಸ್ ಹೆಲಿಪ್ಯಾಡ್ ಬಳಿಯಿಂದ ಜಿಲ್ಲಾಡಳಿತ ವ್ಯವಸ್ಥೆ ಮಾಡಿದ್ದ ಉಚಿತ ಬಸ್‌ನಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ಮಾಜಿ ಶಾಸಕರಾದ ವಾಸು, ಎಂ.ಕೆ.ಸೋಮಶೇಖರ್,

▶ 8ನೇ ಪುಟಕ್ಕೆ



ಇನ್ನೆರಡು ತಿಂಗಳಲ್ಲಿ ಜನಪರ ತೀರ್ಮಾನ ಕೈಗೊಳ್ಳಿ

● 'ಚಿಂತನ ಮಂಥನ' ಸಭೆಯಲ್ಲಿ ಸಚಿವರುಗಳಿಗೆ ಬಿಜೆಪಿ, ಆರ್‌ಎಸ್‌ಎಸ್ ನಾಯಕರ ತಾಕೀತು ● ಅಕ್ರಮ ಮನೆ, ನಿವೇಶನ ಸಕ್ರಮಗೊಳಿಸಿ, ಅರಣ್ಯ ಭೂಮಿ ಸಾಗುವಳಿ ಮಾಡುತ್ತಿರುವವರಿಗೆ ಹಕ್ಕುಪತ್ರ ನೀಡಿ, ಬಡವರಿಗೆ ಮನೆ ನಿರ್ಮಿಸಿ ಕೊಡಿ ● ಪಕ್ಷ ಮತ್ತು ಸರ್ಕಾರದ ನಡುವೆ ಇನ್ನಾದರೂ ಸಮನ್ವಯತೆ ಸಾಧಿಸಿ

ಬೆಂಗಳೂರು, ಜು.15(ಕೆಎಂಶಿ)– ಕ್ಷೇತ್ರದಲ್ಲೇ ಜಾಂಡ ಹೂಡಬೇಡಿ, ರಾಜ್ಯ ಪ್ರವಾಸ ಕೈಗೊಳ್ಳಿ, ಇನ್ನೆರಡು ತಿಂಗಳಲ್ಲಿ ಜನಪರ ಕಡತಗಳಿಗೆ ಮೋಕ್ಷ ನೀಡಿ ಎಂದು ಸಚಿವರುಗಳಿಗೆ ಬಿಜೆಪಿ ಹಾಗೂ ಆರ್‌ಎಸ್‌ಎಸ್ ನಾಯಕರು ಚಾಟಿ ಬೀಸಿದ್ದಾರೆ.

ನಗರದ ಹೊರ ವಲಯದಲ್ಲಿ ನಡೆಯುತ್ತಿರುವ ಚಿಂತನ ಮಂಥನ ಸಭೆಯಲ್ಲಿ ಮುಂಬರುವ ವಿಧಾನಸಭಾ ಚುನಾವಣೆಯನ್ನೇ ಕೇಂದ್ರವಾಗಿಟ್ಟುಕೊಂಡು ಸುದೀರ್ಘ ಚರ್ಚೆ ಮಾಡಿದ ನಾಯಕರು ಕಳೆದ ಕೆಲವಾರು ವರ್ಷಗಳಿಂದ



ನೆನೆಗುದಿಗೆ ಬಿದ್ದಿರುವ ಕಾರ್ಯಕ್ರಮಗಳನ್ನು ತಕ್ಷಣವೇ ಅನುಷ್ಠಾನಗೊಳಿಸಿ, ಮತದಾರರ ಮನ ಗೆಲ್ಲಿ. ನಗರ

▶ 7ನೇ ಪುಟಕ್ಕೆ

ನಿಮ್ಮ ದುಡ್ಡು ಯಾರಿಗೆ ಬೇಕು, ನಮಗೆ ಶಾಂತಿ ಬೇಕು...

ಮಾಜಿ ಸಿಎಂ ಸಿದ್ದರಾಮಯ್ಯ ಕೊಟ್ಟ ಎರಡು ಲಕ್ಷ ರೂ. ಎಸೆದ ಮಹಿಳೆ!

ಬಾಗಲಕೋಟೆ, ಜು.15–ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ತಮ್ಮ ಕ್ಷೇತ್ರ ಬಾಗಲಕೋಟೆ ಜಿಲ್ಲೆಯ ಬಾದಾಮಿಗೆ ಇಂದು ಭೇಟಿ ನೀಡಿ ಕೆರೂರುಪಟ್ಟಣ ಹಿಂಸಾಚಾರದಲ್ಲಿ ಗಾಯಗೊಂಡವರ ಕುಟುಂಬಸ್ಥರಿಗೆ ಪರಿಹಾರ ನೀಡಲು ಹೋದ ವೇಳೆ ಮುಸ್ಲಿಂ ಮಹಿಳೆ ತರಾಟೆ ತೆಗೆದುಕೊಂಡು ಕೊಟ್ಟ 2 ಲಕ್ಷ



ರೂಪಾಯಿ ಹಣವನ್ನು ಅವರ ಕಾರಿನತ್ತ ಎಸೆದ ಪ್ರಸಂಗ ನಡೆದಿದೆ.

ಜುಲೈ 6ರಂದು ಎರಡು ಕೋಮಿನ ಯುವಕರ ಮಧ್ಯೆ, ಯುವತಿಯರನ್ನು ಚುಡಾಯಿಸಿದ ಕಾರಣಕ್ಕೆ ಗಲಾಟೆ ಆರಂಭವಾಗಿ ಅದು ಹಿಂಸಾಚಾರಕ್ಕೆ ತಿರುಗಿ ಸಾರ್ವಜನಿಕ ಆಸ್ತಿಪಾಸ್ತಿಗೆ ಕಿಡಿಗೇಡಿಗಳು ಬೆಂಕಿ ಹಚ್ಚಿದ್ದರು. ▶ 7ನೇ ಪುಟಕ್ಕೆ

ಪಾಪ, ಅವರಿಗೆ ದುಡ್ಡು ವಾಪಸ್ ಕೊಟ್ಟು ಕಳಿಸಿದ್ದೀವಿ

ಬಾಗಲಕೋಟೆ, ಜು.15– ಪಾಪ, ಅವರಿಗೆ ದುಡ್ಡು ವಾಪಸ್ ಕೊಟ್ಟು ಕಳಿಸಿದ್ದೀವಿ



ಎಂದು ಮಾಜಿ ಸಿಎಂ ಸಿದ್ದರಾಮಯ್ಯ ತಿಳಿಸಿದ್ದಾರೆ. ಪರಿಹಾರ ಹಣವನ್ನು ಮಹಿಳೆ ಎಸೆದ ಪ್ರಕರಣ ಕುರಿತು ಮಾತನಾಡಿದ ಅವರು, ಪಾಪ, ಅವರಿಗೆ ದುಡ್ಡು ವಾಪಸ್ ಕೊಟ್ಟು ಕಳಿಸಿದ್ದೀವಿ. ನೀವು ಪುನಃ ಹಣ ವಾಪಸ್ ಕೊಟ್ಟಿದ್ದು ಹೇಳೋದಿಲ್ಲ. ನಾವು ಮಾನವೀಯತೆ ದೃಷ್ಟಿಯಿಂದ ಕೊಟ್ಟಿದ್ದೇವೆ. ಅವರ ಕಷ್ಟಕ್ಕೆಲ್ಲಾ ಆಗುತ್ತೆ ಅಂತ ಅಲ್ಲ ಎಂದು ವಿವರಿಸಿದರು. ಏನಾದರೂ ಆದಾಗ ಸರ್ಕಾರದಿಂದ 1 ಲಕ್ಷ, 2 ಲಕ್ಷ ಪರಿಹಾರ ಕೊಡ್ತೀವಿ.

ಸತ್ತವರಿಗೂ ಪರಿಹಾರ ಕೊಟ್ಟಿದ್ದೇವೆ. ಸತ್ತೋದವರು ವಾಪಸ್ ಬರುತ್ತಾರಾ? ಮಾನವೀಯತೆಯಿಂದ ಪರಿಹಾರ ನೀಡಿದ್ದು ಇದೆ. ಕಷ್ಟದಲ್ಲಿರೋರಿಗೆ ಅನುಕೂಲ ಆಗಲಿ ಅಂತ ಮಾಡಿದ್ದೀವಿ ಎಂದು ಹೇಳಿದರು. ನನ್ನ ಪ್ರಕಾರ ಪರಿಹಾರ ಧನ ಒಪ್ಪಿಕೊಳ್ತಾರೆ ಅಂದುಕೊಂಡಿದ್ದೀನಿ. ಅವರಿಗೂ ಕೊಟ್ಟಿದ್ದೀನಿ, ಇನ್ನೊಬ್ಬ ಗಾಯಗೊಂಡ ಗೋಪಾಲನಿಗೆ ಕೊಟ್ಟಿದ್ದೇನೆ. ಎರಡೂ ಕಡೆ ಆಸ್ಪತ್ರೆಗೆ ಹೋಗಿ ಬಂದಿದ್ದೀನಿ ಎಂದರು.

ಕೊಡಗಲ್ಲಿ ಪ್ರವಾಹ ಭೀತಿ

ಜನರದ್ದು ದುಸ್ಥಿತಿ

● ನೀರಿನಲ್ಲಿ ಮುಳುಗಿದ ಕಾಫಿ, ಅಡಿಕೆ, ಬಾಳೆ ತೋಟಗಳು ● ಕಗ್ಗತ್ತಲಿನಲ್ಲಿ ಗ್ರಾಮಗಳು, ಸಂಚಾರ ಅಸ್ತವ್ಯಸ್ತ ● ಅಪಾಯದ ಮಲೆತಿರಿಕೆ ಬೆಟ್ಟ ತಪ್ಪಲ 68 ಕುಟುಂಬ ಸ್ಥಳಾಂತರ



ಪೊನ್ನಂಪೇಟೆ ನಾಲ್ಕೇರಿಯಲ್ಲಿ ಕಾಫಿ ತೋಟ ಮುಳುಗಡೆ



ಸಿದ್ದಾಪುರ ಸಮೀಪದ ಗುಹ್ಯ–ಕಕ್ಕಟ್ಟುಕಾಡು ಸಂಪರ್ಕ ರಸ್ತೆ ಮೇಲೆ ಹರಿಯುತ್ತಿರುವ ಕಾವೇರಿ ಪ್ರವಾಹದ ನೀರು.

ಮಡಿಕೇರಿ, ಜು.15– ಕೊಡಗು ಜಿಲ್ಲೆಯಲ್ಲಿ ಮಳೆ ಮುಂದುವರೆದಿದ್ದು, ಅಪಾರ ಹಾನಿ ಸಂಭವಿಸಿದೆ ಮಳೆಯ ಅಬ್ಬರಕ್ಕೆ ನದಿಗಳಲ್ಲಿ ಮತ್ತೆ ಪ್ರವಾಹ ತಲೆದೋರಿದ್ದು, ಹಲವು ಕಡೆಗಳಲ್ಲಿ ತಗ್ಗು ಪ್ರದೇಶಗಳಿಗೆ ನೀರು ನುಗ್ಗಿದ್ದು, ಗ್ರಾಮೀಣ ಜನರ ಬದುಕು ದುಸ್ತರವಾಗಿದೆ. ಕಾಫಿ, ಅಡಿಕೆ, ಬಾಳೆ ತೋಟಗಳು ನೀರಿನಲ್ಲಿ ಮುಳುಗಿದ್ದು, ಬೆಳೆ ನಷ್ಟ ಆತಂಕ ಬೆಳೆಗಾರರನ್ನು ಕಾಡುತ್ತಿದೆ. ಈ ನಡುವೆ ಶನಿವಾರ ಬೆಳಗಿನ 8.30 ಗಂಟೆವರೆಗೆ ಜಿಲ್ಲೆಯಲ್ಲಿ 'ಆರೆಂಜ್ ಅಲರ್ಟ್' ಘೋಷಣೆ ಮಾಡಲಾಗಿದೆ. ಭಾರೀ ಗಾಳಿ ಸಹಿತ ಮಳೆ ಸುರಿಯುತ್ತಿರುವ ಕಾರಣ ವಿವಿಧ ಕಡೆಗಳಲ್ಲಿ ಮರಗಳು ಮುರಿದು ಬಿದ್ದು ಜಿಲ್ಲೆಯಾದ್ಯಂತ ವಾಹನ ಸಂಚಾರ ವ್ಯವಸ್ಥೆ ಅಸ್ತವ್ಯಸ್ತವಾಗಿದೆ. ವಿದ್ಯುತ್ ಕಂಬಗಳು ಕೂಡ ಮುರಿದು ಬಿದ್ದಿದ್ದು, ದುರಸ್ಥಿ ಕಾರ್ಯ ನಡೆಸಲಾ ಗುತ್ತಿದೆ. ಆದರೆ ಗ್ರಾಮೀಣ ಭಾಗಗಳಲ್ಲಿ ವಿದ್ಯುತ್ ಸಂಪರ್ಕವಿಲ್ಲದೆ ಬಗ್ಗೆಯೂ ವರದಿಯಾಗಿದ್ದು ಹಲವು ಗ್ರಾಮಗಳು ಕಗ್ಗತ್ತಲಲ್ಲಿ ಮುಳುಗಿವೆ.

ಕುಟುಂಬಗಳ ಸ್ಥಳಾಂತರ: ವಿರಾಜಪೇಟೆ ಪಟ್ಟಣದ ಮಲೆತಿರಿಕೆ ಬೆಟ್ಟ ಮತ್ತು ನೆಹರೂ ನಗರ ಅಪಾಯದ ಸ್ಥಿತಿಯಲ್ಲಿದೆ. 2018, 2019ರಲ್ಲಿ ಈ ಭಾಗದಲ್ಲಿ ಸುರಿದ ಭಾರೀ ಮಳೆಯಿಂದ ಬೆಟ್ಟದಲ್ಲಿ ಭಾರೀ ಬಿರುಕುಗಳು

▶ 8ನೇ ಪುಟಕ್ಕೆ





ದೇಶದ ಪ್ರತಿಷ್ಠಿತ ಕಾಲೇಜುಗಳ ಸಾಲಿಗೆ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು ಸೇರ್ಪಡೆ



ಮೈಸೂರು: ದೇಶದ ಪ್ರತಿಷ್ಠಿತ ಸಂಸ್ಥೆ ಎನ್ಐಆರ್ಎಫ್ (NIRF) ಇಂದು ಬಿಡುಗಡೆ ಮಾಡಿರುವ ಅತ್ಯುತ್ತಮ ಇಂಜಿನಿಯರಿಂಗ್ ಕಾಲೇಜುಗಳ ರ್‍ಯಾಂಕ್ ಪಟ್ಟಿಯಲ್ಲಿ ರಾಜ್ಯದ ವಿದ್ಯಾವರ್ಧಕ ತಾಂತ್ರಿಕ ಮಹಾ ವಿದ್ಯಾಲಯ ಸ್ಥಾನ ಪಡೆದಿದೆ. ದೇಶದ ಮೊದಲ 300 ಉನ್ನತ ತಾಂತ್ರಿಕ ವಿದ್ಯಾಸಂಸ್ಥೆಗಳ ಪಟ್ಟಿಯಲ್ಲಿ ಮೈಸೂರಿನ ವಿದ್ಯಾವರ್ಧಕ ತಾಂತ್ರಿಕ ಮಹಾವಿದ್ಯಾಲಯವು ಕೂಡ ಸ್ಥಾನ ಗಳಿಸಿದೆ. ದೇಶದಲ್ಲಿರುವ ಸುಮಾರು 3500 ತಾಂತ್ರಿಕ ಕಾಲೇಜುಗಳಲ್ಲಿ ಮೊದಲ 300 ಸ್ಥಾನಗಳಲ್ಲಿ ನಮ್ಮ ಕಾಲೇಜಿಗೂ ಸ್ಥಾನ ದೊರಕಿರುವುದು ಹೆಮ್ಮೆಯ ವಿಚಾರ ಎಂದು ಪ್ರಾಂಶುಪಾಲರಾದ ಬಿ. ಸದಾಶಿವೇಗೌಡ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎನ್ಐಆರ್ಎಫ್ ಕಾಲೇಜುಗಳ ಬೋಧನೆ, ಕಲಿಕೆ, ಸಂಪನ್ಮೂಲಗಳು, ಸಂಶೋಧನೆ ಮತ್ತು ವೃತ್ತಿಪರ ಅಭ್ಯಾಸಗಳು ಹಾಗೂ ಪದವಿ ಫಲಿತಾಂಶಗಳು, ಮುಂತಾದ ಅಂಶಗಳನ್ನು ಗಮನಿಸಿ ಈ ಪಟ್ಟಿಯನ್ನು ಬಿಡುಗಡೆ ಮಾಡುತ್ತದೆ.

'ಹಿಂದಿ ಭಾಷಾ ಬೆಳವಣಿಗೆ ಹಂತಗಳು' ಕುರಿತು
ಜು.22, 23ರಂದು ರಾಷ್ಟ್ರೀಯ ವಿಚಾರ ಸಂಕಿರಣ

ಮೈಸೂರು, ಜು.15(ಆರ್‌ಕೆಬಿ)– ಮೈಸೂರಿನ ಬನ್ನಿಮಂಟಪದ ಸಂತ ಫಿಲೋಮಿನಾ ಕಾಲೇಜಿನ ಹಿಂದಿ ವಿಭಾಗದ ವತಿಯಿಂದ ಜು.22 ಮತ್ತು 23 ರಂದು ಕಾಲೇಜಿನ ಅಮೃತ ಮಹೋತ್ಸವ ಹಾಗೂ ಸ್ವಾತಂತ್ರ್ಯ ದಿನದ ಅಂಗವಾಗಿ 'ಹಿಂದಿ ಭಾಷಾ ಬೆಳವಣಿಗೆ ಹಂತಗಳು' ರಾಷ್ಟ್ರೀಯ ವಿಚಾರ ಸಂಕಿರಣ ಆಯೋಜಿಸಲಾಗಿದೆ ಎಂದು ಪ್ರಾಚಾರ್ಯ ಪ್ರೊ.ರವಿ ಡಿ.ಸೆಲ್ಡಾನ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿ ಯಲ್ಲಿ ಮಾತನಾಡಿದ ಅವರು, ಜು.22 ರಂದು ಬೆಳಗ್ಗೆ 9 ಗಂಟೆಗೆ ಕಾಲೇಜಿನ ಒಳಾಂಗಣ ಕ್ರೀಡಾಂಗಣದಲ್ಲಿ ವಿಚಾರ ಸಂಕಿರಣ ಉದ್ಘಾಟನೆಗೊಳ್ಳಲಿದೆ. ಇತ್ತೀಚಿನ ದಿನಗಳಲ್ಲಿ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ ಬಗ್ಗೆ ಗೊಂದಲಗಳುಂಟಾಗಿವೆ. ಇದನ್ನು ಇಲ್ಲಿ ಬಗೆಹರಿಸಲು ಯತ್ನಿಸಲಾಗುವುದು ಎಂದರು. ದೆಹಲಿ ಹಿಂದಿ ಸಾಹಿತ್ಯ ಸಮ್ಮೇಳನ, ಕೇಂದ್ರ ಹಿಂದಿ ಸಂಸ್ಥಾನ, ಭಾರತೀಯ ಭಾಷಾ ಸಂಸ್ಥಾನ ಮೊದಲಾದವು ಸಹಯೋಗ ನೀಡಿವೆ. ದುಬೈನಿಂದ ಮಾತ್ರವಲ್ಲದೆ, ದೇಶದ ವಿವಿಧ ರಾಜ್ಯ ಗಳಿಂದಲೂ ಪ್ರತಿನಿಧಿಗಳು ಪಾಲ್ಗೊಳ್ಳುತ್ತಿದ್ದಾರೆ. ರೆ.ಫಾ.ಡಾ. ಬರ್ನಾಡ್ ಪ್ರಕಾಶ್ ಬಾರ್ನಿಸ್ ಉದ್ಘಾಟಿಸಲಿದ್ದು, ಪ್ರೊ. ಬೀನಾ ಶರ್ಮ ಇನ್ನಿತರರು ಅತಿಥಿಯಾಗಿ ಭಾಗವಹಿಸುವರು ಎಂದು ತಿಳಿಸಿದರು.

ನಿಧನ

ಟಿ.ಹೆಚ್.ಗಣೇಶಯ್ಯ



ಮೈಸೂರು, ಜು.15– ನಿವೃತ್ತ ಡಿವೈಎಸ್ಪಿ ಹಾಗೂ ಮೈಸೂರಿನ ವಿಜಯನಗರ 2ನೇ ಹಂತದ ನಿವಾಸಿ ಟಿ.ಹೆಚ್. ಗಣೇಶಯ್ಯ (84) ಇಂದು ರಾತ್ರಿ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ಮೃತರು ಪತ್ನಿ ಶ್ರೀಮತಿ ರತ್ನಮ್ಮ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಶನಿವಾರ) ಮಧ್ಯಾಹ್ನ 3 ಗಂಟೆಗೆ ವಿಜಯನಗರ 4ನೇ ಹಂತದ ಮುಕ್ತಿಧಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಂ.ಎನ್. ಪೊನ್ನಮ್ಮ (ಸಚಿ)



ಮೈಸೂರು, ಜು.15–ಕೊಡಗು ಜಿಲ್ಲೆಯ ಗೋಣಿಕೊಪ್ಪ ಸಮೀಪದ ಕುಂದ ಗ್ರಾಮದ ನಿವಾಸಿ ಮನೆಯಪಂಡ ಸನ್ನಿ ನಂಜಪ್ಪ ಅವರ ಪುತ್ರಿ ಮನೆಯಪಂಡ ಎನ್.ಪೊನ್ನಮ್ಮ (ಸಚಿ) ಅವರು ಶುಕ್ರವಾರ ಬೆಳಗ್ಗೆ 8 ಗಂಟೆ ಸಮಯದಲ್ಲಿ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಅವರಿಗೆ 56 ವರ್ಷ ವಯಸ್ಸಾಗಿತ್ತು.

ಮೈಸೂರಿನ ಮೈಕಾ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಪೊನ್ನಮ್ಮ ಅವರು ಇಬ್ಬರು ಪುತ್ರರಾದ ಸುಯೋಗ್ ಮತ್ತು ಸಾತ್ವಿಕ್ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಪಾರ್ಥೀವ ಶರೀರವನ್ನು ಜಯಲಕ್ಷ್ಮೀಪುರಂನ ಅವರ ನಿವಾಸ (#2–ಬಿ, ಡೆಬಾನೇರ್ ರಿಜೆನ್ಸಿ, 7ನೇ ಮುಖ್ಯ/ಕ್ರಾಸ್, 3ನೇ ಬ್ಲಾಕ್)ದಲ್ಲಿ ಮಧ್ಯಾಹ್ನ 12 ಗಂಟೆವರೆಗೆ ಅಂತಿಮ ದರ್ಶನಕ್ಕೆ ಇಡಲಾಗಿತ್ತು. ಅಂತ್ಯಕ್ರಿಯೆ ಕೊಡಗಿನ ಕುಂದ ಎಸ್ಟೇಟ್‌ನಲ್ಲಿ ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.


ವಿನೋದ್ ಕುಮಾರ್



ಮೈಸೂರು, ಜು.15– ಮೈಸೂರಿನ ಸದರನ್ ರೈಲ್ವೆ ನೌಕರ, ಐಆರ್‌ಟಿಎಸ್‌ಎ, ದಕ್ಷಿಣ ರೈಲ್ವೆ ಸೆಂಟ್ರಲ್ ವರ್ಕ್‌ಶಾಪ್‌ನ ಕಾರ್ಯದರ್ಶಿ ಹಾಗೂ ಡಾ. ರಾಜಕುಮಾರ್ ರಸ್ತೆ ನಿವಾಸಿ ವಿನೋದ್ ಕುಮಾರ್ (54) ಜು.9ರಂದು ನಗರದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.


ಮೃತರು ಪತ್ನಿ, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಕೇರಳದ ತಿರುವನಂತಪುರಂನಲ್ಲಿ ಜು.10 ರಂದು ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹೆಚ್.ಬಿ. ರಾಮಕೃಷ್ಣೇಗೌಡ



ಮೈಸೂರು, ಜು.15– ಮೈಸೂರಿನ ನಿವಾಸಿ ಹೆಚ್.ಬಿ.ರಾಮಕೃಷ್ಣೇಗೌಡರು ಶುಕ್ರವಾರ ನಿಧನರಾದರು. ಮೃತರು ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆಯನ್ನು ಗದ್ದಿಗೆ ರಸ್ತೆಯ ಅಸ್ವಾಳ್ ಗ್ರಾಮದಲ್ಲಿರುವ ತೋಟದಲ್ಲಿ ಶನಿವಾರ ಮಧ್ಯಾಹ್ನ 1 ಗಂಟೆಗೆ ನೆರವೇರಿಸಲಾಗುವುದು ಎಂದು ಕುಟುಂಬ ಮೂಲಗಳು ತಿಳಿಸಿವೆ.

ಮಳೆಯಿಂದ ಭಾರೀ ಹಾನಿ: ಮೂಲ ಸೌಕರ್ಯಕ್ಕೆ
500 ಕೋಟಿ ಬಿಡುಗಡೆಗೆ ಸಿಎಂ ಆದೇಶ





ಬೆಂಗಳೂರು, ಜು.15(ಕೆಎಂಶಿ)–ಮಳೆ ಹಾಗೂ ನೆರೆ ಹಾವಳಿಯಿಂದ ಹಾಳಾಗಿರುವ ರಸ್ತೆ, ಸೇತುವೆ, ಶಾಲಾ ಕಟ್ಟಡ, ವಿದ್ಯುತ್ ಸಂಪರ್ಕ ಸೇರಿದಂತೆ ಮೂಲ ಸೌಕರ್ಯ ಕಲ್ಪಿಸಲು ಮುಖ್ಯ ಮಂತ್ರಿ ಬಸವರಾಜ ಬೊಮ್ಮಾಯಿ ಐದು ನೂರು ಕೋಟಿ ರೂ. ಇಂದು ಬಿಡುಗಡೆ ಮಾಡಿ ಆದೇಶ ಹೊರಡಿಸಿದ್ದಾರೆ.

ದೇವನಹಳ್ಳಿ ಬಳಿ ಪಕ್ಷ ಹಮ್ಮಿಕೊಂಡಿರುವ ಚಿಂತನ ಮಂಥನ ಸಭೆಯ ಮಧ್ಯೆಯೇ ನೆರೆ ಪೀಡಿತ ಜಿಲ್ಲಾಡಳಿತದೊಂದಿಗೆ ವಿಡಿಯೋ ಕಾನ್ಫರೆನ್ಸ್ ನಡೆಸಿ ಪರಿಸ್ಥಿತಿಯ ಅವಲೋಕನ ಮಾಡಿದ ನಂತರ ಹಣ ಬಿಡುಗಡೆ ಮಾಡಲು ನಿರ್ಧರಿಸಿದರು. ಬಿಳಿ ಹಾಳೆಯಲ್ಲಿ ಸರ್ಕಾರಿ ಸಂಖ್ಯೆ ನಮೂದಿಸಿ, ತಮ್ಮ ಕೈಬರಹದಿಂದಲೇ ಹಣಕಾಸು ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಿಗೆ ಪತ್ರ ಬರೆದು, ಒಂದು ಅಪರೂಪದ ವಿಶೇಷ ಆದೇಶ ಹೊರಡಿಸಿದರು.

ಪಂಚತಾರಾ ಹೊಟೇಲ್‌ನಲ್ಲಿ ಕುಳಿತು ಸಭೆ ಮಾಡಿ, ಅಲ್ಲಿರುವ ಮಾಹಿತಿ ತಂತ್ರಜ್ಞಾನವನ್ನು ಬಳಕೆ ಮಾಡಿಕೊಳ್ಳದೆ, ಕೈಬರಹದಲ್ಲಿ ಈ ದೊಡ್ಡ ಪ್ರಮಾಣದ ಹಣ ಬಿಡುಗಡೆಗೊಳಿಸುವಂತೆ ಆದೇಶಿಸಿದರು. ಕಳೆದ ಕೆಲ ದಿನಗಳಿಂದ ರಾಜ್ಯದ ಹಲವು ಜಿಲ್ಲೆಗಳಲ್ಲಿ ಸತತವಾಗಿ ಮಳೆ ಸುರಿಯುತ್ತಿದೆ. ಇದರಿಂದ ಹಲವಾರು ಜಿಲ್ಲೆಗಳಲ್ಲಿ ಸಮಸ್ಯೆಯಾಗಿದೆ. ಮೂಲಭೂತ ಸೌಕರ್ಯಗಳಾದ ರಸ್ತೆ, ಸೇತುವೆ, ಶಾಲೆ, ಅಂಗವಾಡಿ, ವಿದ್ಯುತ್ ಕಂಬ, ಪ್ರಾಥಮಿಕ ಆರೋಗ್ಯ ಕೇಂದ್ರ ಕಟ್ಟಡಗಳು ಹಾನಿಗೆ ಒಳಗಾಗಿರುವ ಬಗ್ಗೆ ಜಿಲ್ಲಾಧಿಕಾರಿಗಳು ನೀಡಿದ ಮಾಹಿತಿ ಆಧರಿಸಿ, ಪುನಃ ಮೂಲಸೌಕರ್ಯ ಕಲ್ಪಿಸಲು ಕೂಡಲೇ ಆದೇಶ ಮಾಡಿದರು. ನಾನು ಕೆಲ ಜಿಲ್ಲೆಗಳಲ್ಲಿ ಪ್ರವಾಸ ಮಾಡಿದ್ದೆ, ಆ ಸಂದರ್ಭದಲ್ಲಿ ಈ ಹಾನಿಯನ್ನು ನಾನು ಸ್ವತಃ ವೀಕ್ಷಣೆ ಮಾಡಿದ್ದೇನೆ. ತ್ವರಿತ ಗತಿಯಲ್ಲಿ ಮೂಲಭೂತ ಸೌಕರ್ಯಗಳನ್ನು ಯಥಾಸ್ಥಿತಿಗೆ ತರಬೇಕಾಗಿದೆ. ಇದಕ್ಕಾಗಿ ಹಲವಾರು ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿದೆ ಎಂದು ಸುದ್ದಿಗಾರರಿಗೆ ತಿಳಿಸಿದರು.

ಕ್ಯಾನ್ಸರ್ ಪೀಡಿತರಿಗೆ ಕೇಶದಾನಕ್ಕೆ ಮನವಿ



ಮೈಸೂರು, ಜು.15(ಆರ್‌ಕೆಬಿ)–ಕ್ಯಾನ್ಸರ್ ಪೀಡಿತ ಮಹಿಳೆಯರಿಗೆ ವಿಗ್ ದೇಣಿಗೆ ನೀಡುವ ನಿಟ್ಟಿನಲ್ಲಿ ಲೇಡೀಸ್ ಸರ್ಕಲ್ ಇಂಡಿಯಾ ವಲಯ 13ರ ವತಿಯಿಂದ ಜು.23 ರವರೆಗೆ ಕೇಶ ದಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಪದಾಧಿಕಾರಿ ಡಾ.ಪ್ರಿಯಾಂಕ ರವಿಕುಮಾರ್ ತಿಳಿಸಿದರು. ಮೈಸೂರು ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಶ್ವಾದ್ಯಂತ ಸಂಸ್ಥೆ ಹಮ್ಮಿಕೊಂಡಿರುವ ಕಾರ್ಯಕ್ರಮದ ಅಡಿಯಲ್ಲಿ ಈ ಕೇಶರಾಶಿ ಸಂಗ್ರಹ ನಡೆಯುತ್ತಿದೆ. ಅದರಂತೆ ಜು.24 ರಂದು ಸಂಜೆ 5 ಗಂಟೆಗೆ ಝೂಮ್ ಆ್ಯಪ್ ಮೂಲಕ ಕಾರ್ಯಕ್ರಮ ಪ್ರಸಾರವಾಗಲಿದೆ. ಯಾರು ಬೇಕಾದರೂ ತಮ್ಮ 12 ಇಂಚು ಕೇಶರಾಶಿ ದಾನ ಮಾಡಬಹುದಾಗಿದೆ. ಆದರೆ ಕೃತಕ ಬಣ್ಣ, ರಾಸಾಯನಿಕಗಳನ್ನು ಕೇಶಕ್ಕೆ ಬಳಸಿರಬಾರದು. ವಿಗ್ ಬಳಸುವ ಕ್ಯಾನ್ಸರ್ ಪೀಡಿತರಿಗೆ ಅಡ್ಡ ಪರಿಣಾಮ ಎದುರಾಗಬಾರದೆಂಬ ಮುನ್ನೆಚ್ಚರಿಕೆ ಇದಾಗಿದೆ. ಜಯಲಕ್ಷ್ಮಿಪುರಂ 5ನೇ ಅಡ್ಡ ರಸ್ತೆಯಲ್ಲಿನ ಕಿಮಾಯಾ ಸಲೂನ್‌ನಲ್ಲಿ ಕೇಶ ಸಂಗ್ರಹಿಸಲಾಗುತ್ತದೆ. ದಾನ ನೀಡಲಿಚ್ಛಿಸುವವರು ಮೊ– 8880060006 ಅಥವಾ 8880355149 ಅನ್ನು ಸಂಪರ್ಕಿಸಬಹುದಾಗಿದೆ ಎಂದರು. ಪದಾಧಿಕಾರಿಗಳಾದ ಅಪರ್ಣಾ ರಂಗ, ರೂಪಲ್ ಮೆಹ್ತಾ, ಶ್ರುತಿ ಪಾವನ್ ಶ್ರಾಫ್, ವಿನುತಾ ದತ್ ಉಪಸ್ಥಿತರಿದ್ದರು.

ಫೈರ್‌ಮನ್ ಹುದ್ದೆಗೆ ಆಯ್ಕೆಯಾದವರಿಗೆ ನೇಮಕಾತಿ ಪತ್ರ ನೀಡಲು ಗೃಹ ಸಚಿವರ ನಿರ್ದೇಶನ



ಬೆಂಗಳೂರು, ಜು.15(ಕೆಎಂಶಿ)–ರಾಜ್ಯ ಅಗ್ನಿಶಾಮಕ ಹಾಗೂ ತುರ್ತು ಸೇವೆಗಳ ಇಲಾಖೆಯಲ್ಲಿ ಖಾಲಿಯಿರುವ ಫೈರ್‌ಮನ್ ಹುದ್ದೆಗಳಿಗೆ ಆಯ್ಕೆಯಾಗಿ, ನೇಮಕಾತಿ ನಿರೀಕ್ಷೆಯಲ್ಲಿದ್ದ ಅಭ್ಯರ್ಥಿಗಳಿಗೆ ನೇಮಕಾತಿ ಪತ್ರ ವಿತರಿಸಲು, ರಾಜ್ಯ ಗೃಹ ಸಚಿವ ಆರಗ ಜ್ಞಾನೇಂದ್ರ ನಿರ್ದೇಶನ ನೀಡಿದ್ದಾರೆ. ಈ ಬಗ್ಗೆ, ರಾಜ್ಯ ಅಗ್ನಿಶಾಮಕ ಹಾಗೂ ತುರ್ತು ಸೇವೆಗಳ ಇಲಾಖೆಯು ಕ್ರಮ ಕೈಗೊಂಡಿದ್ದು, ಇದುವರೆಗೆ ಒಟ್ಟು 607 ಅಭ್ಯರ್ಥಿಗಳು ನೇಮಕಾತಿ ಆದೇಶ ಪಡೆದಿದ್ದಾರೆ. ಇನ್ನುಳಿದ ಅಭ್ಯರ್ಥಿಗಳ ಆಯ್ಕೆ ಸಿಂಧುತ್ವವನ್ನೂ ಪಡೆದಿದ್ದು, ನೇಮಕಾತಿ ಆದೇಶ ನೀಡುವ ಪ್ರಕ್ರಿಯೆ ನಡೆಯುತ್ತಿದೆ ಎಂದು ಸಚಿವರು ತಿಳಿಸಿದ್ದಾರೆ. ರಾಜ್ಯ ಸರಕಾರವು, ರಾಜ್ಯದ ಎಲ್ಲಾ ತಾಲೂಕು ಕೇಂದ್ರಗಳಲ್ಲಿ ಅಗ್ನಿಶಾಮಕ ಠಾಣೆಗಳನ್ನು ಆದ್ಯತೆ ಮೇರೆಗೆ ಸ್ಥಾಪಿಸಿದ್ದು, ಇದಕ್ಕೆ ಸಂಬಂಧಿಸಿದಂತೆ, ಹುದ್ದೆಗಳ ಭರ್ತಿಗೆ ಸಹ ಕ್ರಮ ಕೈಗೊಂಡಿದೆ.

ಇಲಾಖೆಯಲ್ಲಿ ಒಟ್ಟು 7057 ವಿವಿಧ ಶ್ರೇಣಿಯ ಹುದ್ದೆಗಳಿದ್ದು, 2021 ನೇ ವರ್ಷದ ಅಂತ್ಯಕ್ಕೆ, ಸುಮಾರು 2627 ಹುದ್ದೆಗಳು ಖಾಲಿಯಿದ್ದು, ಪ್ರಸ್ತುತ ವರ್ಷ 1567 ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿದೆ. ರಾಜ್ಯದ ಎಲ್ಲಾ ತಾಲೂಕು ಕೇಂದ್ರಗಳಲ್ಲಿ ಅಗ್ನಿಶಾಮಕ ಠಾಣೆಗಳ ಸ್ಥಾಪನೆಗೆ, ಸರಕಾರ ವಿಶೇಷ ಕ್ರಮ ಕೈಗೊಂಡು, ನೂತನ ಕಟ್ಟಡಗಳೂ ಹಾಗೂ ಇನ್ನಿತರ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ ಎಂದು ಸಚಿವರು ತಿಳಿಸಿದ್ದಾರೆ.

ಇಂದಿನಿಂದ ಪತ್ರಕರ್ತರಿಗೆ ನೇತ್ರ ತಪಾಸಣೆ

ಮೈಸೂರು, ಜು. 15(ಆರ್‌ಕೆ)– ಮೈಸೂರು ಜಿಲ್ಲಾ ಪತ್ರಕರ್ತರ ಸಂಘ ಹಾಗೂ ಎಎಸ್‌ಜಿ ಕಣ್ಣಿನ ಆಸ್ಪತ್ರೆ ಸಹಯೋಗದಲ್ಲಿ ನಾಳೆ (ಜು.16)ಯಿಂದ 4 ದಿನ ಮೈಸೂರಿನ ಸಿದ್ದಪ್ಪ ಸ್ಕ್ವೇರ್ ಬಳಿ ಇರುವ ಎಎಸ್‌ಜಿ ಕಣ್ಣಿನ ಆಸ್ಪತ್ರೆಯಲ್ಲಿ ಪತ್ರಕರ್ತರು ಹಾಗೂ ಕುಟುಂಬದ ಸದಸ್ಯರಿಗೆ ಉಚಿತ ನೇತ್ರ ಚಿಕಿತ್ಸಾ ಶಿಬಿರವನ್ನು ಏರ್ಪಡಿಸಲಾಗಿದೆ. ಮೈಸೂರು ನಗರ ಮತ್ತು ಜಿಲ್ಲೆಯ ಎಲ್ಲಾ ಪತ್ರಕರ್ತರು ಶಿಬಿರದ ಪ್ರಯೋಜನ ಪಡೆದುಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಆಸ್ಪತ್ರೆಯ ವಿಜಯ್ (9600232356) ಅವರನ್ನು ಸಂಪರ್ಕಿಸುವುದು.

ಪತ್ನಿ ಕೊಲೆಗೆ ಯತ್ನ: ಪತಿ ಬಂಧನ

ಮೈಸೂರು, ಜು.15– ಪತ್ನಿಯನ್ನು ಇರಿದು ಕೊಲೆ ಮಾಡಲು ಪ್ರಯತ್ನಿಸಿದ ಆರೋಪದ ಮೇರೆಗೆ ಹೆಚ್.ಡಿ.ಕೋಟೆ ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿಯ ಹೆಲ್ತ್ ಇನ್ಸ್‌ಪೆಕ್ಟರ್ ಅನ್ನು ನಜರ್‌ಬಾದ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಹೆಲ್ತ್ ಇನ್ಸ್‌ಪೆಕ್ಟರ್ ಶಶಿಕುಮಾರ್ ಬಂಧಿತನಾಗಿದ್ದು, ಮೈಸೂರಿನ ಕ್ಯಾತಮಾರನಹಳ್ಳಿ ನಿವಾಸಿ ಕೀರ್ತಿ ಅವರನ್ನು 11 ವರ್ಷದ ಹಿಂದೆ ಈತ ವಿವಾಹವಾಗಿದ್ದ. ಈ ದಂಪತಿಗೆ 5 ವರ್ಷದ ಮಗಳು ಇದ್ದಾಳೆ. ಪತಿ ಕಿರುಕುಳ ನೀಡುತ್ತಿದ್ದರಿಂದ ಬೇಸತ್ತು ಕೀರ್ತಿ ಕಳೆದ ನಾಲ್ಕು ವರ್ಷಗಳಿಂದ ಕ್ಯಾತಮಾರನಹಳ್ಳಿಯಲ್ಲಿರುವ ತವರು ಮನೆಯಲ್ಲಿ ವಾಸವಿದ್ದಾರೆ.

ಕೀರ್ತಿಯವರು ಪತಿಯ ವಿರುದ್ಧ ಕೌಟುಂಬಿಕ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ಮಗಳ ಜೀವನ ನಿರ್ವಹಣೆಗಾಗಿ ತಿಂಗಳಿಗೆ 10 ಸಾವಿರ ರೂ. ನೀಡುವಂತೆ ನ್ಯಾಯಾಲಯ ಶಶಿಕುಮಾರ್‌ಗೆ ಆದೇಶ ನೀಡಿತ್ತು. ಆದರೆ ಕಳೆದ 2 ವರ್ಷದಿಂದ ಆತ ಜೀವನಾಂಶದ ಹಣ ನೀಡದ ಕಾರಣ ನ್ಯಾಯಾಲಯವು ಹೆಚ್.ಡಿ.ಕೋಟೆ ಠಾಣೆ ಪೊಲೀಸರ ಮೂಲಕ ಆತನಿಗೆ ನೋಟೀಸ್ ಜಾರಿ ಮಾಡಿತ್ತು.

ಕೀರ್ತಿಯವರು ಜು.14ರಂದು ಬೆಳಗ್ಗೆ 11.15ರ ಸುಮಾರಿನಲ್ಲಿ ಟೆರಿಷಿಯನ್ ಕಾಲೇಜು ಮುಂಭಾಗವಿರುವ ಇಂಟೆನ್ಸ್ ಫಿಟ್ನೆಸ್ ಜಿಮ್‌ನಲ್ಲಿ ವ್ಯಾಯಾಮ ಮುಗಿಸಿ ಹೊರಬಂದಾಗ ಅಲ್ಲಿಗೆ ಆಗಮಿಸಿದ ಶಶಿಕುಮಾರ್ ತನ್ನ ಪತ್ನಿಯ ಕೆನ್ನೆಗೆ ಇರಿದಿದ್ದಾನೆ. ಈ ವೇಳೆ ಸಾರ್ವಜನಿಕರು ಆತನನ್ನು ಹಿಡಿಯಲು ಪ್ರಯತ್ನಿಸಿದಾಗ ಪಕ್ಕದ ಚರಂಡಿಯಲ್ಲಿ ಬಿದ್ದು ಗಾಯಗೊಂಡಿದ್ದಾನೆ. ಈ ಸಂಬಂಧ ನಜರ್‌ಬಾದ್ ಠಾಣೆ ಪೊಲೀಸರು ಶಶಿಕುಮಾರ್‌ನನ್ನು ಬಂಧಿಸಿ, ಕೀರ್ತಿ ನೀಡಿದ ದೂರಿನನ್ವಯ ಕೊಲೆ ಪ್ರಯತ್ನ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ನಾಳೆ ಬಿಲ್ಡರ್ಸ್ ಮಹಿಳಾ ಘಟಕದಿಂದ ವಿಶೇಷ ಎಕ್ಸ್‌ಪೋ



ಮೈಸೂರು, ಜು.15 (ಆರ್‌ಕೆಬಿ)– ಬಿಲ್ಡರ್ ಅಸೋಸಿಯೇಷನ್ ಆಫ್ ಇಂಡಿಯಾ ಸಂಸ್ಥೆಯ ಮಹಿಳಾ ಘಟಕವಾದ ಸ್ಫೂರ್ತಿ ವತಿಯಿಂದ ಜು.17 ರಂದು ಬೆಳಗ್ಗೆ 10 ರಿಂದ ರಾತ್ರಿ 8ರವರೆಗೆ ಕುವೆಂಪುನಗರದ ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪದಲ್ಲಿ ಮಹಿಳಾ ಉದ್ಯಮಿಗಳು ಪಾಲ್ಗೊಳ್ಳುವ ವಿಶೇಷ ಎಕ್ಸ್‌ಪೋ ಸ್ಫೂರ್ತಿ ಜಾತ್ರೆ ಆಯೋಜಿಸಲಾಗಿದೆ ಎಂದು ಅಧ್ಯಕ್ಷೆ ವಾಣಿ ಸುಬ್ರಹ್ಮಣ್ಯ ತಿಳಿಸಿದರು. ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವ್ಯಾಪಾರದಲ್ಲಿ ಮಹಿಳೆಯರನ್ನು ಉತ್ತೇಜಿಸಿ, ಅವರ ನಡುವೆ ಸಂಪರ್ಕ ಏರ್ಪಡಿಸುವುದು ಈ ಜಾತ್ರೆಯ ಉದ್ದೇಶವಾಗಿದೆ ಎಂದರು. ಜಾತ್ರೆಯಲ್ಲಿ ಉಡುಪುಗಳು, ಆಭರಣ, ಫ್ಯಾಷನ್ ಮತ್ತು ಸೌಂದರ್ಯ ಪರಿಕರ, ಗೃಹಾಲಂಕಾರ, ಸಜ್ಜುಗೊಳಿಸುವ ಪರಿಕಲ್ಪನೆ, ಕುಂಬಾರಿಕೆ, ಹಸಿರು ಪರಿಕಲ್ಪನೆ, ಉಡುಗೊರೆ, ಕಲಾಕೃತಿ, ಫುಡ್‌ಕೋರ್ಟ್ ಮೊದಲಾದವುಗಳನ್ನು ಒಳಗೊಂಡ ಸುಮಾರು 50 ಮಳಿಗೆಗಳು ಇರಲಿವೆ. ಅಂದು ಬೆಳಗ್ಗೆ 10ಕ್ಕೆ ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ ಉದ್ಘಾಟಿಸುವರು ಎಂದರು. ಸುದ್ದಿಗೋಷ್ಠಿಯಲ್ಲಿ ನಂದಾ ರತ್ನರಾಜ್, ರೇಖಾ ಯೋಗನರಸಿಂಹ, ಶ್ವೇತಾ ದಿನೇಶ್ ಉಪಸ್ಥಿತರಿದ್ದರು.

ಡಾ.ಶಿವರಾಜ್‌ಕುಮಾರ್ 60ನೇ ಹುಟ್ಟುಹಬ್ಬ: ನಾಳೆ 'ದೊಡ್ಮನೆ ದೊರೆ' ಸಂಗೀತ ಸಂಜೆ



ಮೈಸೂರು, ಜು.15(ಆರ್‌ಕೆಬಿ)– ನಟ ಡಾ. ಶಿವರಾಜ್‌ಕುಮಾರ್ ಅವರ 60ನೇ ಹುಟ್ಟುಹಬ್ಬದ ಅಂಗವಾಗಿ ಮೈಸೂರಿನ ಪಿಆರ್‌ಕೆ ಮ್ಯೂಸಿಕ್ ಆರ್ಕೆಸ್ಟ್ರಾ ವತಿಯಿಂದ ಜು.17ರಂದು ಸಂಜೆ 5 ಗಂಟೆಗೆ ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಂಗೀತ ಸಭಾದಲ್ಲಿ ದೊಡ್ಮನೆ ದೊರೆ ಶೀರ್ಷಿಕೆ ಅಡಿಯಲ್ಲಿ ಸಂಗೀತ ಸಂಜೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ತಂಡದ ಬಿ.ಎಸ್.ಜಯರಾಮ ರಾಜು ತಿಳಿಸಿದರು. ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಇದು ನೈಜವಾಗಿ ವಾದ್ಯಗಳನ್ನು ನುಡಿಸುವ ಕಾರ್ಯಕ್ರಮವಾಗಿದ್ದು, ಕೀಬೋರ್ಡ್‌ನಲ್ಲಿ ದೀಪಕ್ ಹಾಗೂ ಶರತ್, ತಬಲದಲ್ಲಿ ರೋಷನ್ ಸೂರ್ಯ ಇನ್ನಿತರರು ಪಾಲ್ಗೊಳ್ಳಲಿದ್ದಾರೆ. ತಾವು ಹಾಗೂ ಇತರ ಗಾಯಕರಾದ ಜಗದೀಶ್, ಚಂದ್ರಶೇಖರ್, ಸುರೇಶ್, ಸರ್ವಮಂಗಳ, ವಾಣಿ ಇನ್ನಿತರರು ಹಾಡಲಿದ್ದಾರೆ. ಕಾರ್ಯಕ್ರಮಕ್ಕೆ ಉಚಿತ ಪ್ರವೇಶವಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ತಂಡದ ಸುರೇಶ್, ಚಂದ್ರಶೇಖರ್, ಶ್ರೀಕಂಠರಾವ್, ಸುಧೀಂದ್ರ ಉಪಸ್ಥಿತರಿದ್ದರು.

ಮೈಸೂರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಜಯಂತಿ ಆಚರಣೆ




ಮೈಸೂರು, ಜು. 15(ಆರ್‌ಕೆ)– ಮೈಸೂರಿನ ಮಹಾರಾಜ ಜೂನಿಯರ್ ಕಾಲೇಜು ಆವರಣದಲ್ಲಿ ಶುಕ್ರವಾರ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಜಯಂತಿ ಆಚರಿಸಲಾಯಿತು.

ಕರ್ನಾಟಕ ಸೇನಾ ಪಡೆ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಹಾರಾಜ ಜೂನಿಯರ್ ಕಾಲೇಜು ಆವರಣದಲ್ಲಿರುವ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಪುತ್ಥಳಿಗೆ ಮಹಾರಾಜ ಕಾಲೇಜು ಹಳೇ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಶ್ರೀಧರ ರಾಜೇ ಅರಸ್ ಅವರು ಪುಷ್ಪಾರ್ಚನೆ ಮಾಡುವ ಮೂಲಕ ಮೈಸೂರು ಸಂಸ್ಥಾನದ ಮಹಾರಾಜರಿಗೆ ಗೌರವ ಸಮರ್ಪಿಸಿದರು.

ಕರ್ನಾಟಕ ಸೇನಾ ಪಡೆ ಜಿಲ್ಲಾಧ್ಯಕ್ಷ ತೇಜಸ್ ಲೋಕೇಶ್‌ಗೌಡ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಮಹಾರಾಜ ಕಾಲೇಜು ಪ್ರಾಂಶುಪಾಲ ಎಸ್. ಉದಯಶಂಕರ್, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿ ಕುಮಾರ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ವಲಯ ಉಪಾಧ್ಯಕ್ಷ ಡಾ. ಬಿ.ಆರ್. ನಟರಾಜ ಜೋಯಿಸ್, ಹಿರಿಯ ಸಮಾಜ ಸೇವಕ ಡಾ.ರಘುರಾಮ್ ಕೆ. ವಾಜಪೇಯಿ, ರಾಜ್ಯ ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ಹೆಚ್.ಕೆ. ರಾಮು, ಕಾಂಗ್ರೆಸ್ ಮುಖಂಡ ಎನ್.ಎಂ. ನವೀನ್‌ಕುಮಾರ್, ಸುರೇಶ್, ನರಸಿಂಹೇಗೌಡ, ಕುಮಾರಸ್ವಾಮಿ, ಶಾಂತರಾಜ್ ಅರಸ್, ಕೃಷ್ಣಪ್ಪ, ಅಂಬಾ ಅರಸ್, ಅನಿತಾ ಚೇತನ್ ಹಾಗೂ ಇತರರು ಪಾಲ್ಗೊಂಡು, ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ನಾಡಿಗೆ ನೀಡಿದ ಕೊಡುಗೆಯನ್ನು ಸ್ಮರಿಸಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

16.07.2022 ಶನಿವಾರ, ಮಳೆ ನಕ್ಷತ್ರ : ಪುನರ್ವಸು, 06.07.2022 ರಿಂದ 19.07.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಕೃಷ್ಣ ಪಕ್ಷ
ತಿಥಿ: ತೃತೀಯ, ನಕ್ಷತ್ರ : ಧನಿಷ್ಠ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿಯವರಿಂದ 19ನೇ ಚಾತುರ್ಮಾಸ್ಯ ವ್ರತದೀಕ್ಷಾ ಮಹೋತ್ಸವಗಳು, ಬೆಳಗ್ಗೆ 7.30ಕ್ಕೆ ಸಂಕಷ್ಟಹರ ಚತುರ್ಥಿ, ಶ್ರೀಚಕ್ರ ಪೂಜೆ, ಮಹಾಗಣಪತಿ ಪೂಜೆ, ಯೋಗ ವಾಸಿಷ್ಠ ಪ್ರವಚನ, ಸಂಜೆ 6ಕ್ಕೆ ಶ್ರೀ ಗುರುಗೀತಾ ಪಾರಾಯಣ, ಸಂಜೆ 7ಕ್ಕೆ ಚಾತುರ್ಮಾಸ್ಯ ಪ್ರವಚನ ಪ್ರಾರಂಭ, ಸ್ಥಳ: ವಿಶ್ವ ಪ್ರಾರ್ಥನಾ ಮಂದಿರ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.

■ **ಪ್ರಕೃತಿ ಆಯುರ್ವೇದ ಪ್ರತಿಷ್ಠಾನ:** ಆರೋಗ್ಯ ತಪಾಸಣೆ ಶಿಬಿರ, ಸ್ಥಳ: ಶ್ರೀರಂಗ ಆಯುರ್ವೇದ ಚಿಕಿತ್ಸಾ ಮಂದಿರ, ನೇತಾಜಿ ಸರ್ಕಲ್ ಹತ್ತಿರ, ಬೆಳಗ್ಗೆ 10 ರಿಂದ.

■ **ಇಂಡಿಯನ್ ಆರ್ಟ್ ಅಂಡ್ ಕ್ರಾಫ್ಟ್–ಹೌಸ್ ಅಂಡ್ ಫೆಸ್ಟಿ ವರ್ಲ್ಡ್ :** ಹ್ಯಾಂಡ್‌ಲೂಮ್ ಮತ್ತು ಹ್ಯಾಂಡಿಕ್ರಾಫ್ಟ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಅಪೊಲೋ ಆಸ್ಪತ್ರೆ ಬಳಿಯಿರುವ ಮೈದಾನದಲ್ಲಿ, ಆದಿ ಚುಂಚನಗಿರಿ ರಸ್ತೆ, ಕುವೆಂಪುನಗರ, ಬೆಳಗ್ಗೆ 10 ಗಂಟೆಯಿಂದ ರಾತ್ರಿ 9.30 ಗಂಟೆವರೆಗೆ.

■ **ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು:** ಸ್ನಾತಕೋತ್ತರ ವಿಭಾಗದ ಸಾಂಸ್ಕೃತಿಕ ಮತ್ತು ಕ್ರೀಡಾ ಸ್ಪರ್ಧೆಗಳು, ಬಹುಮಾನ ವಿತರಣಾ ಸಮಾರಂಭ, ಮುಖ್ಯ ಅತಿಥಿಗಳು: ಸಾಹಿತಿ ಡಾ.ಎಸ್.ಪಿ. ಉಮಾದೇವಿ, ಅಧ್ಯಕ್ಷತೆ: ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ.ಸಾಂಬಶಿವಯ್ಯ, ಉಪಸ್ಥಿತರು: ಕಾಲೇಜು ಪ್ರಿನ್ಸಿಪಾಲ್ ಪ್ರೊ.ಎಂ.ಪಿ. ವಿಜಯೇಂದ್ರಕುಮಾರ್, ಸ್ಥಳ:ಸುವರ್ಣ ಮಹೋತ್ಸವ ಸಭಾಂಗಣ, ನಂಜನಗೂಡು ರಸ್ತೆ, ಬೆಳಗ್ಗೆ 11ಕ್ಕೆ.

■ **ಮೈಸೂರು ವಿವಿ ಮಹಾರಾಜ ಕಾಲೇಜು:** ಪಿಎಚ್.ಡಿ ಕೋರ್ಸ್ ವರ್ಕ್ ವಿದ್ಯಾರ್ಥಿಗಳಿಗಾಗಿ ವಿಶೇಷ ಉಪನ್ಯಾಸ, ಉದ್ಘಾಟನೆ: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕರಾದ ಡಾ.ವಿಜಯಕುಮಾರಿ ಎಸ್.ಕರಿಕಲ್, ಅಧ್ಯಕ್ಷತೆ: ಕಾಲೇಜು ಪ್ರಿನ್ಸಿಪಾಲ್ ಪ್ರೊ.ಅನಿಟ ವಿಮ್ಲ ಬ್ರ್ಯಾಗ್ಸ್, ಜಾನಪದ ವಿಭಾಗದ ಪ್ರಾಧ್ಯಾಪಕ ಡಾ. ನಂಜಯ್ಯ ಹೊಂಗನೂರು ಅವರಿಂದ ಜಾನಪದ ಸಂಶೋಧನೆ: ಸ್ವರೂಪ ಮತ್ತು ಮಹತ್ವ ಕುರಿತು ಉಪನ್ಯಾಸ, ಸ್ಥಳ: ಪಿಎಚ್.ಡಿ ಸಂಶೋಧನಾ ಕೊಠಡಿ, ಮಹಾರಾಜ ಕಾಲೇಜು, ಬೆಳಗ್ಗೆ 11ಕ್ಕೆ.

■ **ಬಂಟರ ಸಂಘ ಹಾಗೂ ಬಂಟರ ಸಂಘ ಮೈಸೂರು ಚಾರಿಟಬಲ್ ಟ್ರಸ್ಟ್ :** ಪ್ರತಿಭಾ ಪುರಸ್ಕಾರ ಮತ್ತು ಸನ್ಮಾನ ಸಮಾರಂಭ, ಅಧ್ಯಕ್ಷತೆ: ಬಂಟರ ಸಂಘದ ಅಧ್ಯಕ್ಷ ಟಿ. ಪ್ರಭಾಕರ ಶೆಟ್ಟಿ, ಉಪಸ್ಥಿತರು: ಎಂಆರ್‌ಜಿ ಸಮೂಹ ಸಂಸ್ಥೆ ಅಧ್ಯಕ್ಷ ಕೆ.ಪ್ರಕಾಶ್ ಶೆಟ್ಟಿ, ಶಾಸಕ ಜಿ.ಟಿ. ದೇವೇಗೌಡ, ಮಾಜಿ ಸಚಿವ ಬಿ.ರಮಾನಾಥ ರೈ, ಮಾಜಿ ಶಾಸಕ ವಾಸು, ಸನ್ಮಾನಿತರು: ಡಾ. ಶ್ರೀನಿವಾಸ ಶೆಟ್ಟಿ, ಡಾ.ಜಗನ್ನಾಥ್ ಎಸ್.ಶೆಟ್ಟಿ, ಕೆ. ಗೋಪಾಲಶೆಟ್ಟಿ, ಪಟ್ಲ ಸತೀಶ್ ಶೆಟ್ಟಿ, ಸ್ಥಳ: ಆಶಾ ಪ್ರಕಾಶ್ ಶೆಟ್ಟಿ ಬಂಟ್ಸ್ ಕನ್ವೆನ್‌ಷನ್ ಹಾಲ್, ವಿಜಯನಗರ 3ನೇ ಹಂತ, ಮಧ್ಯಾಹ್ನ 12.30ಕ್ಕೆ

■ **ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘ :** ಎಸ್‌ಎಸ್‌ಎಲ್‌ಸಿಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಪ್ರತಿಭೋತ್ಸವ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಮುಖ್ಯ ಅತಿಥಿಗಳು : ಮುಡಾ ಅಧ್ಯಕ್ಷ ಹೆಚ್.ವಿ. ರಾಜೀವ್, ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಸ್ಥಳ: ಬಬ್ಬೂರು ಕಮ್ಮೆ ಸಭಾಂಗಣ, ಸಾಹುಕಾರ್ ಚೆನ್ನಯ್ಯ ರಸ್ತೆ, ಸಂಜೆ 4.30ಕ್ಕೆ.

■ **ರಾಗ ಮ್ಯೂಸಿಕ್ ಅಕಾಡೆಮಿ :** ವಿದ್ವಾನ್ ಜಿ.ಕೆ. ಮನಮೋಹನ್ ಅವರಿಂದ ಶಾಸ್ತ್ರೀಯ ಹಾಡುಗಾರಿಕೆ, ವಿದ್ವಾನ್ ಎಂ.ಕೇಶವ (ವಯೋಲಿನ್), ವಿದ್ವಾನ್ ಎ. ರಾಧೇಶ್ (ಮೃದಂಗ), ಸ್ಥಳ: ಶ್ರೀ ಬಿಡಾರಂ ಕೃಷ್ಣಪ್ಪನವರ ಪ್ರಸನ್ನ ಸೀತಾರಾಮ ಮಂದಿರ, ನಾರಾಯಣಶಾಸ್ತ್ರಿ ರಸ್ತೆ, ಸಂಜೆ 5.30ಕ್ಕೆ.

■ **ಮೈಸೂರು ವಕೀಲರ ಸಂಘ :** ನಾಡಪ್ರಭು ಕೆಂಪೇಗೌಡರ 513ನೇ ಜಯಂತ್ಯೋತ್ಸವ, ಸಾನ್ನಿಧ್ಯ: ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮನಾಥೇಶ್ವರ ಸ್ವಾಮೀಜಿ, ಉದ್ಘಾಟನೆ: ವಿಶ್ರಾಂತ ನ್ಯಾಯಮೂರ್ತಿ ವಿ.ಗೋಪಾಲಗೌಡ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಎಂ.ಮಹದೇವಸ್ವಾಮಿ, ಆಶಯ ನುಡಿ: ಇತಿಹಾಸ ತಜ್ಞ ಡಾ.ತಲಕಾಡು ಚಿಕ್ಕರಂಗೇಗೌಡ, ಮುಖ್ಯ ಅತಿಥಿಗಳು: ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಎಂ.ಎಲ್.ರಘುನಾಥ್, ಮಾಜಿ ಸಭಾಪತಿ ಡಾ.ವೀರಣ್ಣ ಮತ್ತಿಕಟ್ಟಿ, ಸ್ಥಳ: ಜಿಲ್ಲಾ ನ್ಯಾಯಾಲಯಗಳ ಆವರಣ, ಸಂಜೆ 5.30 ರಿಂದ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಮೇದಾನಂದ ಅವರಿಂದ ವೈಕಲ್ಪಿಕದಿಂದ ಸಮನ್ವಯದವರೆಗೆ ಕುರಿತು ಉಪನ್ಯಾಸ ಕಾರ್ಯಕ್ರಮ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಚಿನ್ಮಯ ಮಿಷನ್ ಮೈಸೂರು :** ಸ್ವಾಮಿ ಅಪರಾಜಿತನಂದ ಅವರಿಂದ ಇಂಗ್ಲಿಷ್‌ನಲ್ಲಿ ಗೀತಾ ಜ್ಞಾನ ಯಜ್ಞ, ಪುರುಷೋತ್ತಮ ಯೋಗ (ಭಗವದ್ಗೀತೆಯ 15 ಚಾಪ್ಟರ್) ಕುರಿತು ಉಪನ್ಯಾಸ, ಸ್ಥಳ: ಶಿವಾನಂದ ಜ್ಞಾನಾಲಯ, ಜೆಎಲ್‌ಬಿ ರಸ್ತೆ, ಸಂಜೆ 6.30ರಿಂದ.

■ **ನಟನ ರಂಗಶಾಲೆ :** ಬೆಂಗಳೂರಿನ ನಳಂದ ಆರ್ಟ್ಸ್ ಸ್ಟುಡಿಯೋ ಕಲಾವಿದರಿಂದ ಡೆಸ್ಡೆಮೋನಾ ರೂಪಕವ್ ನಾಟಕ ಪ್ರದರ್ಶನ, ರಚನೆ ಮತ್ತು ಪರಿಕಲ್ಪನೆ : ಇರಾವತಿ ಕಾರ್ಣಿಕ್, ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ–ಡಾ.ಟಿ.ವಿ.ವೆಂಕಟಾಚಲಶಾಸ್ತ್ರಿ, 6.20 ಗೀತಾರಾಧನ, 6.35 ಹಾಡು ಹೇಳಿದ ಕಥೆ, ರಚನೆ–ಶ್ರೀನಿವಾಸ ಪ್ರಸಾದ್, ಪ್ರಸ್ತುತಿ– ಮೈಸೂರು ಉಮೇಶ್, 6.50 ರೈತರಿಗೆ ಸಲಹೆ, 9.00 ರಾಗಲಹರಿ–ಕರ್ನಾಟಕ ಶಾಸ್ತ್ರೀಯ ಸಂಗೀತದ ರಾಗಗಳ ಚಿತ್ತಾರ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ "ಸ್ವಾತಂತ್ರ್ಯ ಚಳುವಳಿಯ ಪಯಣ–ಆಕಾಶವಾಣಿಯೊಂದಿಗೆ, 10.00 ಬಾಂಬೆ ಸಹೋದರಿಯರು – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ಎದೆ ತುಂಬಿದ ಹಾಡು, ಪರಿಕಲ್ಪನೆ ಮತ್ತು ಪ್ರಸ್ತುತಿ– ಬಸವರಾಜ್ ಸಾದರ್, 12.45ಜನಪದಗೀತೆ–ಚಾಮಮ್ಮ ಮತ್ತು ಸಂಗಡಿಗರು, 1.20 ಭಾವಗೀತೆ–ಎನ್. ಹೇಮ, 3.35 ಮಕ್ಕಳ ಮಂಟಪ– ಮುಖಾಮುಖಿ, ಹೂಟಗಳ್ಳಿಯ ಸರ್ಕಾರಿ ಪ್ರೌಢಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 4.30 ನೆನಪಿನಂಗಳ–ಖ್ಯಾತ ಅಂಕಣಕಾರರಾದ ಡಾ. ಹಾ.ಮಾ.ನಾಯಕ್ ಅವರೊಂದಿಗೆ ಡಾ.ಎನ್.ಎಸ್.ತಾರಾನಾಥ್ ಅವರು ನಡೆಸಿದ್ದ ಸಂವಾದ, ಪ್ರಸ್ತುತಿ– ಎಸ್. ಲಕ್ಷ್ಮೀನಾರಾಯಣ, 6.50 ಕೃಷಿರಂಗ–ಕಿಸಾನ್‌ವಾಣಿ, ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, 9.00 ಲಾಕ್ ಡೌನ್, ಕಥಾನಾಟಕ. ಲಾಕ್‌ಡೌನ್ ಕಥೆಗಳನ್ನಾಧರಿಸಿದ ಸರಣಿ "ವಿವೇಚನೆ", ನಿರ್ಮಾಣ–ಪ್ರಭುಸ್ವಾಮಿ ಮಳಿಮಠ್, 9.15 ವನವಾಸಿಗಳ ಶಿಕ್ಷಣ ಉದ್ಯೋಗ– ಸಾಮಾಜಿಕ ಕಾರ್ಯಕರ್ತೆ ಪುಟ್ಟಮ್ಮ ಅವರೊಡನೆ ಸಂದರ್ಶನ. ಸಂದರ್ಶಕರು– ದಿವಾಕರ ಹೆಗಡೆ, 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ನಿತ್ಯಶ್ರೀ ಮಹದೇವನ್ – ಹಾಡುಗಾರಿಕೆ, 11.00 ಸವಿನೆನಪು

ರೋಟರಿ ಮೈಸೂರು ಆಗ್ನೇಯದ ಪದವಿ ಪ್ರದಾನ ಸಮಾರಂಭ



ಮೈಸೂರು, ಜು. 15– ಮೈಸೂರಿನ ಕಂಠೀರವ ಸ್ಪೋರ್ಟ್ಸ್ ಕ್ಲಬ್ ಆವರಣದಲ್ಲಿ ಇತ್ತೀಚೆಗೆ ರೋಟರಿ ಮೈಸೂರು ಆಗ್ನೇಯದ 2022–23 ರ ಸಾಲಿನ ನೂತನ ಪದಾಧಿಕಾರಿಗಳ ಪದವಿ ಪ್ರದಾನ ಸಮಾರಂಭವನ್ನು ರೋಟರಿ ಜಿಲ್ಲೆ 3181ರ ಮಾಜಿ ಜಿಲ್ಲಾ ಗವರ್ನರ್ ರೋ.ರಂಗನಾಥ ಭಟ್ ಅವರು ನಡೆಸಿಕೊಟ್ಟರು.ನೂತನ ಅಧ್ಯಕ್ಷರಾಗಿ ಆಯ್ಕೆಯಾದ ರೋ. ಮೋಹನ್ ಮಾದಯ್ಯ ಮತ್ತು ಕಾರ್ಯದರ್ಶಿ ರೋ. ಮುರಳೀಧರ ಕೆ.ಎನ್ ಹಾಗೂ 8 ಮಂದಿ ನೂತನ ತಂಡದ ಸದಸ್ಯರು ಪದವಿಯನ್ನು ಸ್ವೀಕರಿಸಿದರು. ರೋ.ಗೋವರ್ಧನ್ ಯಾದವ್, ರೋ.ರವೀಂದ್ರ, ರೋ. ವಾಸುದೇವನ್, ರೋ. ರಂಗನಾಥ ಭಟ್, ರೋ. ಮೋಹನ್ ಎಂ, ರೋ. ಮುರಳೀಧರ ಕೆ.ಎನ್, ರೋ. ಎಲ್ ರವಿ, ರೋ. ರಮೇಶ್ ರಾವ್. ಜಿಲ್ಲಾ ಪದಾಧಿಕಾರಿಗಳು ರೋ ವೆಂಕಟೇಶ್ವರ ರಾವ್, ರೋ.ರಮೇಶ್ ಬಾಬು ಎಸ್.ಎನ್, ರೋ ಗಿರೀಶ್ ಎಚ್ ಎಸ್, ರೋ ರಾಜೀವ್ ಎಂ, ರೋ ಗೋಪಾಲ್ ಸಿ, ರೋ ಸುನೀಲ್ ಎಂ, ರೋ ರಾಜ್ ಭಟ್ ಅವರು ಈ ವೇಳೆ ಉಪಸ್ಥಿತರಿದ್ದರು.

ಶುಂಠಿ ಖರೀದಿಸಿ 80 ಲಕ್ಷ ರೂ. ವಂಚನೆ

ಮೈಸೂರು, ಜು.15– ನಾಲ್ವರು ವರ್ತಕರಿಂದ ಭಾರೀ ಪ್ರಮಾಣದ ಶುಂಠಿ ಖರೀದಿಸಿ 80 ಲಕ್ಷ ರೂ. ವಂಚನೆ ಮಾಡಿರುವ ಬಗ್ಗೆ ವರದಿಯಾಗಿದೆ ಪಿರಿಯಾಪಟ್ಟಣ ತಾಲೂಕು ಹಮ್ಮಿಗೆ ಗ್ರಾಮದ ಜಬೀಖಾನ್ (33), ಹಲಗನಹಳ್ಳಿಯ ಸೈಯ್ಯದ್ ಹಸೀಬ್ (40), ಸೈಯದ್ ಅನೀಸ್ (43), ಶೇರ್‌ಮೌಸಿಮ್ (30) ವಂಚನೆ ಗೊಳಗಾದ ವರ್ತಕರಾಗಿದ್ದು, ಇವರೆಲ್ಲರೂ ಸಂಬಂಧಿಕರೇ ಆಗಿದ್ದಾರೆ. ಇವರು ಹೆಚ್‌ಎಂಎಸ್ ಶುಂಠಿ ಟ್ರೇಡರ್ಸ್ ಮತ್ತು ಎಸ್‌ಎಂಹೆಚ್ ಶುಂಠಿ ಟ್ರೇಡರ್ಸ್ ಹೆಸರಿನಲ್ಲಿ ಪ್ರತ್ಯೇಕವಾಗಿ ಶುಂಠಿ ಸಗಟು ವ್ಯಾಪಾರ ನಡೆಸುತ್ತಿದ್ದಾರೆ.

ಪಿರಿಯಾಪಟ್ಟಣ ತಾಲೂಕು ಚಿಕ್ಕನೇರಳೆ ಗ್ರಾಮದ ಮಶ್ರೂಫ್ (45) ಮತ್ತು ಉತ್ತರ ಪ್ರದೇಶದ ಫುಕ್ರಾನ್ (40) ಈ ವರ್ತಕರಿಗೆ ಪರಿಚಯವಾಗಿ ತಾವು ಶುಂಠಿ ಮಾರಾಟದ ಏಜೆಂಟ್‌ಗಳು ಎಂದು ಹೇಳಿಕೊಂಡು ಬೇರೆ ಬೇರೆ ಹೆಸರಿನಲ್ಲಿ ವರ್ತಕರಿಂದ ಶುಂಠಿ ಖರೀದಿ ಮಾಡಿದ್ದಾರೆ. ಹಲವು ಬಾರಿ ಖರೀದಿಸಿದ ಶುಂಠಿಗೆ ಹಣವನ್ನು ಜಮೆ ಮಾಡಿದ್ದ ಇವರಿಬ್ಬರೂ 2021ರ ಅಕ್ಟೋಬರ್ 23ರಿಂದ ಡಿಸೆಂಬರ್ 6ರವರೆಗೆ 80 ಲಕ್ಷ ರೂ. ಮೌಲ್ಯದ ಶುಂಠಿ ಖರೀದಿಸಿ, ಹಣ ಪಾವತಿಸದೆ ವಂಚನೆ ಎಸಗಿದ್ದಾರೆ. ಹಣ ಕೇಳಿದರೆ ಜೀವ ಬೆದರಿಕೆ ಹಾಕುತ್ತಿದ್ದಾರೆ ಎಂದು ನೀಡಿರುವ ದೂರನ್ನು ನ್ಯಾಯಾಲಯದ ಆದೇಶದ ಮೇರೆಗೆ ದಾಖಲಿಸಿಕೊಂಡಿರುವ ಎನ್.ಆರ್. ಠಾಣೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ರಾಜಿ ಸಂಧಾನಕ್ಕೆ ಮುಂದಾದ ಎಟಿ&ಎಸ್

ಮೈಸೂರು, ಜು. 15– ಎಟಿ ಅಂಡ್ ಎಸ್ ಕಾರ್ಖಾನೆಯಿಂದ ವಜಾಗೊಂಡಿರುವ ನೌಕರರು ನಡೆಸುತ್ತಿರುವ ಮುಷ್ಕರ 500 ದಿನ ಪೂರೈಸುತ್ತಿರುವ ಹಿನ್ನೆಲೆಯಲ್ಲಿ ಕಾರ್ಖಾನೆ ರಾಜಿಸಂಧಾನ ಮೂಲಕ ಪ್ರಕರಣ ಇತ್ಯರ್ಥ ಪಡಿಸಿಕೊಳ್ಳುವ ಪ್ರಸ್ತಾಪವನ್ನು ನೌಕರರ ಮುಂದಿಟ್ಟಿದೆ. ಈ ಪ್ರಸ್ತಾವದ ಭಾಗವಾಗಿ ಈ ಒಪ್ಪಂದವನ್ನು ಒಪ್ಪಿಕೊಂಡ ಟ್ರೈನಿ ಸದಸ್ಯರಿಗೆ ನಿಗದಿತ ಮೊತ್ತವನ್ನು ನೀಡಲಾಗುವುದು ಹಾಗೂ ಮುಂದಿನ ದಿನಗಳಲ್ಲಿ ಬೇರೆ ಕಡೆ ಉದ್ಯೋಗಕ್ಕೆ ಸೇರಿಕೊಳ್ಳಲು ಅನುಕೂಲವಾಗುವ ದೃಷ್ಟಿಯಿಂದ ಅವರ ವಜಾ ಆದೇಶವನ್ನು 'ರಾಜೀನಾಮೆಯಾಗಿ ಪರಿವರ್ತಿಸಲಾಗುವುದು, ಜತೆಗೆ ವಜಾಗೊಂಡ ಟ್ರೈನಿಗಳ ವಿರುದ್ಧ ದಾಖಲಿಸಿದ ಪ್ರಕರಣಗಳನ್ನು ಹಿಂಪಡೆಯಲಾಗುವುದು. ವಜಾಗೊಂಡ ಟ್ರೈನಿ ಸದಸ್ಯರು ಪ್ರಕರಣ ನ್ಯಾಯಾಲಯದಲ್ಲಿ ವಿಚಾರಣಾಧೀನವಾಗಿದ್ದರೂ ಮುಷ್ಕರ ಹೂಡಿದ್ದರು ಎಂದು ಪ್ರಕಟಣೆ ತಿಳಿಸಿದೆ.



ಸಾರ್ವಜನಿಕ ಪ್ರಕಟಣೆ

ಮೈಸೂರು ನಗರ ದೇವನೂರು ಬಡಾವಣೆ, ರಾಜೀವ್ ನಗರ 2ನೇ ಹಂತ, ನಿವೇಶನ ಸಂಖ್ಯೆ 2838ರ ವಿಸ್ತೀರ್ಣ ಪೂರ್ವ–ಪಶ್ಚಿಮ 12 ಮೀಟರ್‌ಗಳು ಮತ್ತು ಉತ್ತರ–ದಕ್ಷಿಣ 18 ಮೀಟರ್‌ಗಳು, ಇದರ ಒಟ್ಟು ವಿಸ್ತೀರ್ಣ 216 ಚ.ಮೀ.ಗಳುಳ್ಳ ಈ ಸ್ವತ್ತು ಹಾಲಿ ಬೆಂಗಳೂರು ದಕ್ಷಿಣ, ಬನಶಂಕರಿ 3ನೇ ಹಂತ, ಪಾಪಯ್ಯ ಗಾರ್ಡನ್, 4ನೇ ಕ್ರಾಸ್, 8ನೇ ಮೇನ್, ಮನೆ ನಂ. 5 ರಲ್ಲಿ ವಾಸವಾಗಿರುವ ಶ್ರೀ ರಾಜಾರಾಂ. ಎಸ್. ರವರ ಧರ್ಮಪತ್ನಿಯಾದ ಶ್ರೀಮತಿ ಶೇಲ್ಲಿ ಲಥರ್ ರವರಿಗೆ ಸೇರಿದ್ದಾಗಿರುತ್ತದೆ. ಸದರಿ ಸ್ವತ್ತನ್ನು ನಮ್ಮ ಕಕ್ಷಿದಾರರಾದ ರಾಮನಗರದ ವಿವೇಕಾನಂದ ನಗರದಲ್ಲಿರುವ 27ನೇ ವಾರ್ಡ್‌ನ ರಾಜಣ್ಣ. ಡಿ. ರವರ ಮಗನಾದ ಸುಕೃತ್ ಗೌಡ. ಆರ್. ರವರು ಖರೀದಿ ಮಾಡಲು ಒಪ್ಪಂದ ಮಾಡಿಕೊಂಡಿರುತ್ತಾರೆ. ಆದ್ದರಿಂದ ಮೇಲ್ಕಂಡ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ತಕರಾರು ಇದ್ದಲ್ಲಿ ಈ ಕೆಳಕಂಡ ವಕೀಲರ ಕಛೇರಿಗೆ ಖುದ್ದಾಗಿ ಅಥವಾ ವಕೀಲರ ಮೂಲಕ ಸಂಪರ್ಕಿಸಬೇಕಾಗಿ ಕೋರಿಕೆ.

ಸಹಿ/– ಹೆಚ್.ಸಿ. ರಾಜೇಶ್, ಎಂ.ಎಸ್ಸಿ, ಎಲ್.ಎಲ್.ಬಿ., ವಕೀಲರು
#7, 1ನೇ ಮಹಡಿ, ಬಜ್ಜಣ್ಣ ಲೇನ್, ಚಾಮರಾಜಪುರಂ, ಮೈಸೂರು–570 005.
ಮೊ: 9620080262

ದಿನಾಂಕ: 12–07–2022

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸು–ವುದೇನೆಂದರೆ, ಶ್ರೀ. ತೆಕ್ಕುಮುರಿ ಕುನ್ನನಾಥ್ ವಿಜಯ್ ರವರ ಧರ್ಮಪತ್ನಿ ಶ್ರೀಮತಿ. ರಜನಿ ಕಿರ್ಝಕ್ಕೆಕರ ವೇಣುಗೋಪಾಲ್ (RAJANI KIZHAKKEKARA VENUGOPAL), ರವರು ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 7 (ಏಳು) **ದಿನಗಳ** ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದ್ದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ–ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಸಿಟಿ, ಎನ್. ಆರ್. ಮೊಹಲ್ಲಾ, ರಾಜೀವ್ ನಗರ, ದೇವನೂರು ಬಡಾವಣೆ, 3ನೇ ಹಂತದಲ್ಲಿರುವ ನಿವೇಶನ ಸಂಖ್ಯೆ. 886, ವಿಸ್ತೀರ್ಣ ಪೂರ್ವ ಪಶ್ಚಿಮ 18 ಮೀಟರ್ ಮತ್ತು ಉತ್ತರ ದಕ್ಷಿಣ 12 ಮೀಟರ್, ಒಟ್ಟು ವಿಸ್ತೀರ್ಣ 216 ಚದರ ಮೀಟರ್‌ಗಳುಳ್ಳ ಸ್ವತ್ತಿಗೆ ಚಕ್ಕುಬಂದಿ ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ನಿವೇಶನ ಸಂಖ್ಯೆ. 849, ಉತ್ತರಕ್ಕೆ: ನಿವೇಶನ ಸಂಖ್ಯೆ. 885, ದಕ್ಷಿಣಕ್ಕೆ: ನಿವೇಶನ ಸಂಖ್ಯೆ 887.

ಸಹಿ/– ಶ್ರೀಲತಾ ದೀಕ್ಷಿತ್, ವಕೀಲರು,
ಎಸ್‌ಎಲ್‌ಡಿ ಲಾ ಫರ್ಮ್,
ನಂ.1458/ಎ, ನಾರಾಯಣಶಾಸ್ತ್ರಿ ರಸ್ತೆ,
ಸಪ್ನ ಬುಕ್ ಹೌಸ್ ಸಮೀಪ, ಮೈಸೂರು.
ಮೊ: 98446 40641
Email: sldlawfirm2021@gmail.com

ದಿ ಗ್ರ್ಯಾಜ್ಯುಯೇಟ್ಸ್ ಕೋ–ಆಪರೇಟಿವ್ ಬ್ಯಾಂಕ್ ಲಿ.,
ಸಾರ್ವಜನಿಕ ಪತ್ರಿಕಾ ಪ್ರಕಟಣೆ

ದಿ ಗ್ರ್ಯಾಜ್ಯುಯೇಟ್ಸ್ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ, ಚಾಮರಾಜ ಜೋಡಿ ರಸ್ತೆ, ಮೈಸೂರು ಆದ ನಮ್ಮಲ್ಲಿ ಮೈಸೂರು ನಗರ ಉದಯಗಿರಿ ಬಡಾವಣೆಯ ಖೂಬಾ ಮಸೀದಿ ರಸ್ತೆ, ಅಜಮತ್‌ಕಾಡ, ಮನೆ ನಂ.222ರ ಖಾಯಂ ನಿವಾಸಿ ಮತ್ತು ಹಾಲಿ ಕೆನಡಾ ರಾಷ್ಟ್ರದ ನಿವಾಸಿಯಾಗಿದ್ದು, ಮಜರ್ ಆಲಂ ಬಿನ್ ಅಬ್ದುಲ್ ವಾಹಬ್ ಮತ್ತು ಅವರ ಪತ್ನಿ ನಿಖಾತ್ ಆಲಂ ರವರು ಜಂಟಿಯಾಗಿ ಅವರ ಹೆಸರಿನಲ್ಲಿ ಲಾಕರ್ ಸಂಖ್ಯೆ18ನ್ನು ಪಡೆದಿರುವುದು ಸರಿಯಷ್ಟೆ. ನಿಖಾತ್ ಆಲಂ ರವರು ದಿನಾಂಕ: 23.03.2021ರಂದು ಮೃತಪಟ್ಟಿರುತ್ತಾರೆಂದು ಅವರ ಪತಿ ಮರಣ ದೃಢೀಕರಣ ಪತ್ರ ಸಲ್ಲಿಸಿರುತ್ತಾರೆ. ಅಲ್ಲದೇ ಲಾಕರ್ ವಿಚಾರವಾಗಿ ಸಹಕಾರ ಸಂಘಗಳ ನ್ಯಾಯಾಲಯ ಮತ್ತು ಸಿವಿಲ್ ನ್ಯಾಯಾಲಯಗಳಲ್ಲಿ ಬ್ಯಾಂಕ್ ವಿರುದ್ಧ ಲಾಕರ್ ತೆರೆಯುವ ಬಗ್ಗೆ ಕಾನೂನು ಹೋರಾಟ ನಡೆಸಿರುತ್ತಾರೆ. ಅಲ್ಲಿಯೂ ನಿಖಾತ್ ಆಲಂ ರವರಿಗೆ ನೋಟೀಸ್/ಸಮನ್ಸ್ ಜಾರಿ ಮಾಡಲು ಪತ್ರಿಕಾ ಪ್ರಕಟಣೆ ಮೂಲಕ ಸಹ ಪ್ರಯತ್ನಿಸಲಾಗಿರುತ್ತದೆ. ಮಜರ್ ಅಲಂ ರವರು ಲಾಕರ್ ತೆಗೆದು ಅವರ ವಸ್ತುಗಳನ್ನು ಪಡೆಯಲು ಸಹ ಅರ್ಜಿ ಸಲ್ಲಿಸಿರುತ್ತಾರೆ. ಆದರೆ ಲಾಕರ್ ನಿಖತ್ ಆಲಂ ಮತ್ತು ಮಜರ್ ಆಲಂ ಇಲ್ಲಿಯವರೆವಿಗೂ ಬರಬಹುದೆಂದು ಕಾದರು, ಯಾವುದೇ ಪ್ರಯೋಜನವಾಗಿರುವುದಿಲ್ಲ ಈ ಹಿಂದೆಯೂ ಪತ್ರಿಕಾ ಪ್ರಕಟಣೆ ಮಾಡಿದ್ದರೂ ಸಹ ನಿಖಾತ್ ಆಲಂ ಆಗಲೀ ಅಥವಾ ಅವರ ಮಕ್ಕಳಾಗಲೀ ಯಾರೂ ಬಂದಿರುವುದಿಲ್ಲ.

ಆದ್ದರಿಂದ ಈ ಮೂಲಕ ಬ್ಯಾಂಕಿನವರು ನಿಖಾತ್ ಆಲಂ ವಾರಸುದಾರರಿಗೆ ಈ ಮೂಲಕ ಸಾರ್ವಜನಿಕ ಪ್ರಕಟಣೆ ಮಾಡಿ ಕಡೆಯದಾಗಿ ತಿಳುವಳಿಕೆ ನೀಡುವುದೇನೆಂದರೆ ನಿಖಾತ್ ಆಲಂ ವಾರಸುದಾರರು ಯಾರಾದರೂ ಇದ್ದಲ್ಲಿ ಈ ಪ್ರಕಟಣೆ ಪ್ರಚಾರಗೊಂಡ 15 ದಿನಗಳ ಒಳಗಾಗಿ ಲಾಕರ್ ವಿಚಾರವಾಗಿ ಖುದ್ದಾಗಿ ಭೇಟಿಯಾಗಿ ನಿಮ್ಮ ತಕರಾರುಗಳು ಇದ್ದಲ್ಲಿ ಲಿಖಿತವಾಗಿ ಬ್ಯಾಂಕಿಗೆ ತಿಳಿಸತಕ್ಕದ್ದು. ತಪ್ಪಿದ್ದಲ್ಲಿ ಸದರಿ ಲಾಕರ್ ಸಂಖ್ಯೆ : 18ನ್ನು ಕಾನೂನಾತ್ಮಕವಾಗಿ ನಿಖಾತ್ ಆಲಂ ಪತಿಯಾದ ಮಜರ್ ಆಲಂರವರಿಗೆ ಲಾಕರ್ ತೆರೆಯಲು ಅವಕಾಶ ನೀಡಲಾಗುವುದೆಂದು ತಿಳಿಸಲಾಗಿದೆ. ನಂತರ ಬಂದ ತಕರಾರುಗಳಿಗೆ ಬ್ಯಾಂಕಿನವರು ಯಾವುದಕ್ಕೂ ಜವಬ್ದಾರರಾಗುವುದಿಲ್ಲ.

ದಿ: 13.07.2022
ಸ್ಥಳ: ಮೈಸೂರು

ಸಹಿ/– ವ್ಯವಸ್ಥಾಪಕರು, ದಿ ಗ್ರ್ಯಾಜ್ಯುಯೇಟ್ಸ್ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷೀದಾರರು ಐಟಂ–1 ಸ್ವತ್ತಿನ ಮಾಲೀಕರಾದ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಉದ್ಬೂರು ಗ್ರಾಮ, 4ನೇ ಬ್ಲಾಕ್, ಮನೆ ನಂಬರ್, 1005 ರ ನಿವಾಸಿಯದ ಶ್ರೀಮತಿ ಶಿವಮ್ಮ ಕೋಂ ಸೋಮಣ್ಣ (ಪೌತಿ) ಮತ್ತು ಇವರ ಕುಟುಂಬದ ಸದಸ್ಯರು, ಐಟಂ–2 ಸ್ವತ್ತಿನ ಮಾಲೀಕರಾದ (1) ಚೌಡಯ್ಯ ಬಿನ್. ಪುಟ್ಟನಾಯಕ ಮತ್ತು (2) ಪುಟ್ಟರಾಜು ಬಿನ್ ಪುಟ್ಟನಾಯಕ ಮತ್ತು ಇವರ ಕುಟುಂಬದ ಸದಸ್ಯರು, ಇವರುಗಳಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.

ಷೆಡ್ಯೂಲ್ ಸ್ವತ್ತಿನ ಪರಬಾರೆಯ ವಿಚಾರದಲ್ಲಿ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (7) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.

ಷೆಡ್ಯೂಲ್

ಐಟಂ–1

ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ಜಯಪುರ ಹೋಬಳಿ, ಉದ್ಬೂರು ಗ್ರಾಮದ ಸರ್ವೆ ನಂಬರ್, 313/5 ರಲ್ಲಿನ ಮೂವತ್ತಾರು ಗುಂಟೆ (0.36.00.000) ವಿಸ್ತೀರ್ಣದ ಖುಷ್ಕಿ ಕೃಷಿ ಜಮೀನಿಗೆ ಚಕ್ಕುಬಂದಿ ಪೂರ್ವಕ್ಕೆ: ತಳೂರು ಗ್ರಾಮದ ಗಡಿ ; ಪಶ್ಚಿಮಕ್ಕೆ: ಸರ್ವೆ ನಂಬರ್ 313/4 ; ಉತ್ತರಕ್ಕೆ: ಸರ್ವೆ ನಂಬರ್ 313/3 ; ದಕ್ಷಿಣಕ್ಕೆ: ತಳೂರು ಗ್ರಾಮದ ಗಡಿ.

ಐಟಂ–2

ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ಜಯಪುರ ಹೋಬಳಿ, ಉದ್ಬೂರು ಗ್ರಾಮದ ಸರ್ವೆ ನಂಬರ್, 313/4 ರಲ್ಲಿನ ಒಂದು ಎಕರೆ (1.00.00.00) ವಿಸ್ತೀರ್ಣದ ಖುಷ್ಕಿ ಕೃಷಿ ಜಮೀನಿಗೆ ಚಕ್ಕುಬಂದಿ ಪೂರ್ವಕ್ಕೆ: ಸರ್ವೆ ನಂಬರ್ 313/5 ; ಪಶ್ಚಿಮಕ್ಕೆ: ಸರ್ವೆ ನಂಬರ್ 314 ; ಉತ್ತರಕ್ಕೆ: ಸರ್ವೆ ನಂಬರ್ 313/3 ; ದಕ್ಷಿಣಕ್ಕೆ: ಸರ್ವೆ ನಂಬರ್ 315.

ಸಹಿ/– ಎಂ.ಎನ್. ಪ್ರಕಾಶ್ ಕಾಳಪ್ಪ, ವಕೀಲರು
#2-3, First Floor, PRI Complex,
67/7A, New Sayyaji Rao Road,
Fort Mohalla, Mysore-570 004.
Mob: 93431 12535.

ಮೈಸೂರು
15–07–2022

ಪಟ್ಟಣ ಪಂಚಾಯಿತಿ ಕಾರ್ಯಾಲಯ ಶ್ರೀರಾಂಪುರ

ಮೈಸೂರು ಜಿಲ್ಲೆ – 570008, ದೂರವಾಣಿ ಸಂ : 0821–2330109
ಇ–ಮೇಲ್ : itstaff_ulb_srirampura@yahoo.com

ಶ್ರೀ.ಪ.ಪ./ಜೆ.ಇ./ಟೆ.ಪ್ರ/01/2022–23 ದಿನಾಂಕ: 08.07.2022

ಟೆಂಡರ್ ಪ್ರಕಟಣೆ

ಪಟ್ಟಣ ಪಂಚಾಯಿತಿ ಶ್ರೀರಾಂಪುರ ಮುಖ್ಯಾಧಿಕಾರಿರವರು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ 1999–2000ರ ಪ್ರಕಾರ ಕೆಡಬ್ಲ್ಯೂ–1ರ ನಿಯಮದನ್ವಯ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಶ್ರೀರಾಂಪುರ ಪಟ್ಟಣ ಪಂಚಾಯಿತಿಯ "ದಾರಿದೀಪಗಳ ನಿರ್ವಹಣೆ ಮತ್ತು ದುರಸ್ತಿ" ಬಗ್ಗೆ **DMA/2022-23/EL/WORK_INDENT133439** ಮುಖಾಂತರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅರ್ಹ ನೋಂದಾಯಿತ ವಿದ್ಯುಚ್ಛಕ್ತಿ ಗುತ್ತಿಗೆದಾರರು ಕಾಮಗಾರಿಗಳಿಗೆ ಇ.ಎಂ.ಡಿ ಹಾಗೂ ದರಗಳನ್ನು ಇ–ಪ್ರಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಪಾವತಿ ಹಾಗೂ ನಮೂದಿಸುವುದು ಮತ್ತು ಸ್ಥಳೀಯ ಅರ್ಹತಾ ಗುತ್ತಿಗೆದಾರರಿಗೆ ಮೊದಲ ಆದ್ಯತೆಯನ್ನು ಪರಿಗಣಿಸಲಾಗುವುದು. ಹೆಚ್ಚಿನ ಮಾಹಿತಿ ಮತ್ತು ವಿವರಗಳನ್ನು ಇ–ವೆಬ್‌ಸೈಟ್ **www.eproc.karnataka.gov.in** ಮತ್ತು ವೆಬ್‌ಸೈಟ್: **www.srirampuratown.mrc.gov.in** ನಲ್ಲಿ ಟೆಂಡರ್ ಬಗ್ಗೆ ಪರಶೀಲಿಸಬಹುದು. ಟೆಂಡರ್ ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ ಮತ್ತು ಸಮಯ 25.07.2022 ಸಂಜೆ 5.00 ಗಂಟೆ. ಸ್ವೀಕೃತವಾದ ಟೆಂಡರ್ ತೆರೆಯುವ ದಿನಾಂಕ. 26.07.2022 ಸಂಜೆ 5.00 ಗಂಟೆಗೆ.

ಸಹಿ/– (ಗಿರೀಶ್ ಬಿ.ಎನ್)
ಆಡಳಿತಾಧಿಕಾರಿಗಳು,
ಪಟ್ಟಣ ಪಂಚಾಯಿತಿ , ಶ್ರೀರಾಂಪುರ

ಸಹಿ/– (ಎ.ಎಮ್,ಶ್ರೀಧರ್)
ಮುಖ್ಯಾಧಿಕಾರಿ,
ಪಟ್ಟಣ ಪಂಚಾಯಿತಿ, ಶ್ರೀರಾಂಪುರ

ಕರ್ನಾಟಕ ಸರ್ಕಾರ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ(ರಿ), ಮೈಸೂರು

ರಾಷ್ಟ್ರೀಯ ಆರೋಗ್ಯ ಅಭಿಯಾನ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ
ಎನ್.ಪಿ.ಸಿ. ಆಸ್ಪತ್ರೆ ಆವರಣ, ನಜರಾಬಾದ್, ಮೈಸೂರು–10

No:NHM/DHS/MY/138/2021-22 Dated: 13.07.2022

ಆರ್.ಬಿ.ಎಸ್.ಕೆ. ಕಾರ್ಯಕ್ರಮದ ಅನುಷ್ಠಾನಕ್ಕಾಗಿ ವಾಹನಗಳ ಸೇವೆಯನ್ನು 2022–23ನೇ ಸಾಲಿಗೆ ಪಡೆಯಲು ಅಲ್ಪಾವಧಿ ಟೆಂಡರ್ ಅನ್ನು ಆಹ್ವಾನಿಸಿರುವ ಬಗ್ಗೆ.

(E-Procurement tender)

ಕ್ರ.ಸಂ.: 1 **ವಾಹನಗಳ ಮಾದರಿ:** 4 Wheeler LMV (Compact sedans) Model 2018 and above. **ಬೇಕಾಗಿರುವ ವಾಹನಗಳ ಸಂಖ್ಯೆ:** 20 ವಾಹನಗಳು (ಮೈಸೂರು ನಗರ–04, ಮೈಸೂರು ಗ್ರಾಮೀಣ–03, ನಂಜನಗೂಡು–03, ಕೆ.ಆರ್.ನಗರ–02, ಹುಣಸೂರು–02, ಪಿರಿಯಾಪಟ್ಟಣ–02, ಹೆಚ್.ಡಿ.ಕೋಟೆ–02, ಟಿ.ನರಸೀಪುರ–02). **ವಾಹನಗಳಿಗೆ ಮಾಹೆಯಾನ ಗರಿಷ್ಠ ಬಾಡಿಗೆ ಮೊತ್ತ ರೂ.** ಮೊತ್ತ ರೂ.29,000/– ಪ್ರತಿ ವಾಹನಕ್ಕೆ.

Minimum eligibility criteria: Vehicle must be duly registered and insured under relevant Government laws. Driver should be valid LMV license. No Physical Handicaps, Eye Sight Problem, Night Blindness.

Tender Value: ಅ. ಒಟ್ಟು ಅಂದಾಜು ಮೊತ್ತ ರೂ.46,40,000/–
ಆ. ಇ.ಎಂ.ಡಿ. ಮೊತ್ತ ರೂ.92,800/–


Tender Time Table: ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ ಮತ್ತು ಸಮಯ: 22.07.2022ರ ಮಧ್ಯಾಹ್ನ 1.00 ಗಂಟೆಗೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 25.07.2022ರ ಬೆಳಿಗ್ಗೆ 11.00 ಗಂಟೆಗೆ. ಹಣಕಾಸು ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 27.07.2022ರ ಬೆಳಿಗ್ಗೆ 11.00 ಗಂಟೆಗೆ. ಟೆಂಡರ್ ತೆರೆಯುವ ಸ್ಥಳ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ, ನಜರಾಬಾದ್, ಮೈಸೂರು–10
ಟೆಂಡರ್ ದಾಖಲಾತಿಗಳನ್ನು ಈ ವೆಬ್‌ಸೈಟ್‌ನಲ್ಲಿ ಪಡೆಯುವುದು www.eproc.karnataka.gov.in

ಹೆಚ್ಚಿನ ಮಾಹಿತಿಗಾಗಿ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ನಜರಾಬಾದ್, ಮೈಸೂರು, ಇಲ್ಲಿ ಕಚೇರಿ ಸಮಯದಲ್ಲಿ ಭೇಟಿ ಕೊಟ್ಟು ಪಡೆಯಬಹುದು.

ಸಹಿ/– ಸದಸ್ಯ ಕಾರ್ಯದರ್ಶಿಗಳು,
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ, ಮೈಸೂರು.

DIPR/DD-MYS/MCA/244/2022-23





ನಕ್ಕರೆ ಅದೇ ಸ್ವರ್ಗ

ನ್ಯಾಯಾಧೀಶರು: "ಈತನಿಗೆ ಎರಡೂ ಕಿವಿಗಳನ್ನು ಕತ್ತರಿಸಿ"
ಗುಂಡ : "ಅಯ್ಯೋ ಬೇಡಾ ಸ್ವಾಮಿ ನಾನು ಕುರುಡ ಆಗೋಗ್ತೀನಿ"
ನ್ಯಾಯಾಧೀಶರು: "ಮೂರ್ಖ, ಕಿವಿ ಕತ್ತರಿಸಿದರೆ ಕುರುಡು ಹೇಗೆ ಆಗ್ತಾರೆ?"
ಗುಂಡ : "ಆಮೇಲೆ ನಾನು ಕನ್ನಡಕ ಹೇಗೆ ಹಾಕಿಕೊಳ್ಳಲಿ?"

ಮೈಸೂರು ಮಿತ್ರ

ಶನಿವಾರ, 16 ಜುಲೈ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಸುಖ ದುಃಖಗಳು ಮಾನವ ಜೀವನದ ರೂಪಗಳು. ದುಃಖವು ಕರ್ತವ್ಯದತ್ತ ಜಾಗೃತಗೊಳಿಸಿದರೆ, ಸುಖವು ಹಾಸಿಗೆಯ ಮೇಲೆ ನಿದ್ರಿಸುತ್ತದೆ. –ವಿನೋಬಾ ಭಾವೆ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಒಳಿತಾಗಿ ಮುಗಿದಿದ್ದೆಲ್ಲವೂ ಒಳ್ಳೆಯದೆ

ನಿಮ್ಮ ಪತ್ರಗಳು

ಸಂಕಷ್ಟದಲ್ಲಿ ದೇಶ ತೊರೆಯುವುದು ನಾಯಕತ್ವವಲ್ಲ

ಮಾನ್ಯರೇ,

ದೇಶ ಆರ್ಥಿಕವಾಗಿ, ಯುದ್ಧದ ಸಮಯದಲ್ಲಿ, ಇನ್ನೂ ಯಾವುದೇ ಸಂಕಷ್ಟದ ಪರಿಸ್ಥಿತಿಯಲ್ಲಿರುವಾಗ ದೇಶ ಮತ್ತು ಜನರನ್ನು ಬಿಟ್ಟು ಪರಾರಿಯಾಗುವುದು ದೇಶದ್ರೋಹ ಮಾಡಿದಂತೆ. ಶ್ರೀಲಂಕಾ ಆರ್ಥಿಕವಾಗಿ ದಿವಾಳಿಯಾಗಿರುವಾಗ ದೇಶದಲ್ಲಿದ್ದು, ದೇಶವನ್ನು ಸಂಕಷ್ಟದಿಂದ ಪಾರು ಮಾಡುವ ಬದಲು, ಕೆಟ್ಟ ಆರ್ಥಿಕ ಪರಿಸ್ಥಿತಿ ಯಿಂದ ಕಂಗೆಟ್ಟಿರುವ ಜನರನ್ನು ನಡು ನೀರಿನಲ್ಲಿ ಕೈಬಿಟ್ಟು, ದೇಶದಿಂದ ಪರಾರಿಯಾದ ಗೋಟಬಯ ರಾಜಪಕ್ಸೆಗೆ ಧಿಕ್ಕಾರವಿರಲಿ.

ಒಂದೂವರೆ ದಶಕಗಳಿಂದ ಶ್ರೀಲಂಕಾವನ್ನು ಆಳುತ್ತಿರುವ ರಾಜಪಕ್ಸೆ ಕುಟುಂಬ 42000 ಕೋಟಿ ಹಣವನ್ನು ವಿದೇಶಕ್ಕೆ ಸಾಗಿಸಿರುವುದು ದೃಢಪಟ್ಟಿದ್ದು, ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ ಮತ್ತು ಈ ಅಕ್ರಮದಲ್ಲಿ ಶ್ರೀಲಂಕಾದ ರಿಸರ್ವ್ ಬ್ಯಾಂಕ್‌ನ ಗವರ್ನರ್ ಅಜಿತ್ ನಿರ್ವದ್ ಕಬ್ರಾಲ್ ಸಹಾಯ ಮಾಡಿರುವುದು ಆಘಾತಕಾರಿ ಸಂಗತಿಯಾಗಿದೆ.

ಇಂತಹ ಭ್ರಷ್ಟ ಆಡಳಿತ ವರ್ಗ ಮತ್ತು ಅಧಿಕಾರಿ ವರ್ಗದವರಿದ್ದರೆ, ದೇಶ ದಿವಾಳಿಯಾಗುವುದು ಶತಸಿದ್ಧ. ಇದಕ್ಕೆ ವಿರುದ್ಧವಾಗಿ ಸದಾಶಿವರಾವ್ ಪೇಶ್ವೆ 3ನೇ ಪಾಣಿಪತ್ ಯುದ್ಧದಲ್ಲಿ ಅಫಘಾನಿಸ್ತಾನದ ಅಹ್ಮದ್ ಶಾ ಅಬ್ದಾಲಿ ಸಂಪೂರ್ಣ ಮರಾಠರ ಸೈನ್ಯ ಸುತ್ತುವರೆದಿದ್ದಾಗ ಸೋಲು ಖಾತ್ರಿಯಾಗಿತ್ತು. ಆಗ ಯಾವುದೇ ಅಪಾಯವಿಲ್ಲದೆ ಸೈನ್ಯದ ನಾಯಕತ್ವ ವಹಿಸಿದ್ದ ಸದಾಶಿವ ರಾವ್ ಪೇಶ್ವ ಅವರು ದೆಹಲಿಗೆ ಹೋಗಿ ನಂತರ ಪುಣೆಗೆ ಸುರಕ್ಷಿತವಾಗಿ ತಲುಪಬಹುದಿತ್ತು.

ಆದರೆ ಸಾಮಾನ್ಯ ಜನ ಮತ್ತು ಸೈನಿಕರನ್ನು ಬಿಟ್ಟು ಯುದ್ಧ ಭೂಮಿಯನ್ನು ತೊರಯದೆ ಅಲ್ಲೆ ಹೋರಾಡಿ ಮರಣ ಹೊಂದಿದ ಸದಾಶಿವರಾವ್ ಪೇಶ್ವೆ, ಪ್ರಸುತ್ತ ರಾಜಕೀಯ ನಾಯಕರುಗಳಿಗೆ ಆದರ್ಶಪ್ರಾಯರಾಗಿ ನಿಲ್ಲುತ್ತಾರೆ.

–ರಾಸುಮ ಭಟ್, ಚಿಕ್ಕಮಗಳೂರು.

ಗಿಡಗಂಟಿ ತೆಗೆಸಿ ಅಪಘಾತ ತಪ್ಪಿಸಿ

ಮಾನ್ಯರೆ,

ಮೈಸೂರಿನ ವಿಜಯನಗರ 4ನೇ ಹಂತದ ರಸ್ತೆಗಳಲ್ಲಿ ಗಿಡಗಂಟಿಗಳು ಬೆಳೆದು ರಸ್ತೆಗೆ ಚಾಚಿಕೊಂಡಿವೆ. ಇದರಿಂದ ತಿರುವು ರಸ್ತೆಗಳಲ್ಲಿ ಸರಣಿ ಅಪಘಾತಗಳು ಸಂಭವಿಸುತ್ತಿವೆ. ಇತ್ತೀಚೆಗೆ ಆಲದಮರದ ರಸ್ತೆ ತಿರುವಿನಲ್ಲಿ ಕಾರು ಮತ್ತು ಸ್ಕೂಟರ್ ಮುಖಾಮುಖಿ ಡಿಕ್ಕಿಯಾಗಿ ಮಹಿಳೆಯ ಕಾಲು ತುಂಡಾಗಿದೆ. ಒಂದು ತಿಂಗಳ ಹಿಂದೆ ಇದೇ ತಿರುವಿನಲ್ಲಿ ಕಾರು ಸ್ಕೂಟರ್ ಡಿಕ್ಕಿಯಾಗಿ ಸವಾರನ ಕಾಲು ಮುರಿದಿತ್ತು. ಅಪಘಾತಗಳಿಗೆ ಪ್ರಾಧಿಕಾರದ ವಿರುದ್ಧವೇ ದೂರು ದಾಖಲಿಸುವ ಸಾಧ್ಯತೆ ಇದೆ. ಈಗಲಾದರೂ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ರಸ್ತೆಗಳಲ್ಲಿ ಬೆಳೆದಿರುವ ಗಿಡಗಂಟಿಗಳನ್ನು ಸ್ವಚ್ಛಗೊಳಿಸಿ ಅಪಘಾತಗಳನ್ನು ತಪ್ಪಿಸಲಿ ಎಂಬುದು ಬಡಾವಣೆ ನಿವಾಸಿಗಳ ಕಳಕಳಿಯ ಮನವಿ.

–ಬಿ.ಜಿ. ರಂಗೇಗೌಡ,
ವಿಜಯನಗರ 4ನೇ ಹಂತ,
ಮೈಸೂರು.

ರೌಡಿ ಶೀಟರ್‌ಗಳಿಗೆ ಖಡಕ್ ವಾರ್ನಿಂಗ್ ಉತ್ತಮ

ಮಾನ್ಯರೆ,

ಇತ್ತೀಚೆಗೆ ಹುಣಸೂರಿನ ಉಪ ಅಧೀಕ್ಷಕರ ಕಚೇರಿ ಆವರಣದಲ್ಲಿ ರೌಡಿ ಶೀಟರ್ ಪೆರೇಡ್ ನಡೆಸಿರುವುದು ಜೀವನ ಬದಲಾವಣೆಯ ಒಂದು ಅತ್ಯುತ್ತಮ ಪ್ರಯತ್ನವಾಗಿದೆ.

ಒಮ್ಮೆ ರೌಡಿ ಶೀಟರ್ ಪಟ್ಟಿಗೆ ಸೇರಿದರೆ ಅವರ ವ್ಯಾಪ್ತಿಯಲ್ಲಿ ಯಾವುದೇ ಅಪರಾಧಗಳು ನಡೆದರೆ ಮೊದಲು ಅನುಮಾನ ಬಂದು ಅವರನ್ನು ವಿಚಾರಣೆ ಮಾಡುವುದು ಪೊಲೀಸರ ಸಹಜ ಕ್ರಿಯೆ. ಈ ರೌಡಿಗಳ ನೆರೆಹೊರೆಯವರು 'ರೀ ಇವಳು ಅವನ ಮಗಳು ಕಂಡ್ರಿ', 'ಇವಳು ಅವನ ಹೆಂಡ್ತಿ' ಆಯಮ್ಮ ಮಹಾತಾಯಿ ಅವನ ಅಮ್ಮ ಎನ್ನುವ ಮಾತುಗಳು ಬಹಿರಂಗವಾಗಿಯೇ ಚರ್ಚೆಗೊಳಗಾಗುತ್ತೆ. ಅಡಿಷನಲ್ ಎಸ್ಪಿ ಶಿವಕುಮಾರ್ ಅವರು ಈ ಎಲ್ಲಾ ವಿಚಾರಗಳನ್ನು ಬಿಡಿಸಿ ಹೇಳುವುದರ ಮೂಲಕ ರೌಡಿಗಳ ಮನಃ ಪರಿವರ್ತನೆ ಮಾಡ ಹೊರಟಿರುವುದು ಶ್ಲಾಘನೀಯ. ರೌಡಿ ಶೀಟರ್‌ಗಳಿಗೆ ಖಡಕ್ ವಾರ್ನಿಂಗ್ ಜಿಲ್ಲಾ ಮಟ್ಟದಲ್ಲಿ ಮತ್ತು ರಾಜ್ಯ ಮಟ್ಟದಲ್ಲಿ ನಡೆಸಿದರೆ ಸಮಾಜದಲ್ಲಿ ಒಂದು ಉತ್ತಮ ಬದಲಾವಣೆಯನ್ನು ನಿರೀಕ್ಷಿಸಬಹುದು.

–ಕಾಳಿಂಗಚಾರ್, ಮೈಸೂರು.

ರಾತ್ರೋರಾತ್ರಿ ಬಸ್ ತಂಗುದಾಣ ಮಾಯ!

ಮಾನ್ಯರೆ,

ಈ ಹಿಂದೆ ಬಲ್ಲಾಳ್ ವೃತ್ತದ ಬುದ್ಧ ವಿಹಾರದ ಸಮೀಪ ಸುಸಜ್ಜಿತವಾದ ಬಸ್ ನಿಲ್ದಾಣವಿತ್ತು. ಬಸ್‌ಗಾಗಿ ಕಾಯುವ ಪ್ರಯಾಣಿಕರಿಗೆ ಆಸನದ ವ್ಯವಸ್ಥೆಯೂ ಇತ್ತು. ಇದರಿಂದ ಬಸ್‌ಗಾಗಿ ಕಾಯುತ್ತಿದ್ದ ಪ್ರಯಾಣಿಕರಿಗೆ, ಹಿರಿಯ ನಾಗರಿಕರಿಗೆ, ವಿದ್ಯಾರ್ಥಿಗಳಿಗೆ ಅನುಕೂಲವಾಗಿತ್ತು. ರಾತ್ರೋರಾತ್ರಿ ಹೇಳದೆ ಕೇಳದೇ ಬಸ್ ತಂಗುದಾಣವನ್ನು ನೆಲಸಮ ಮಾಡಲಾಗಿದೆ. ಇದರಿಂದ ಎಲ್ಲರಿಗೂ ತೊಂದರೆಯಾಗಿದೆ. ಇದು ಒಂದು ರೀತಿ ಸಾರ್ವಜನಿಕರ ತೆರಿಗೆ ಹಣ ಪೋಲು ಮಾಡಿದಂತಾಗಿದೆ. ಚೆನ್ನಾಗಿರುವ ಬಸ್ ತಂಗುದಾಣವನ್ನು ಒಡೆದು ಕಟ್ಟುವುದು ಎಷ್ಟರ ಮಟ್ಟಿಗೆ ಸರಿ.

– ನೊಂದ ವಿದ್ಯಾರ್ಥಿನಿಯರು, ಮೈಸೂರು.

ಯುವ ಸಮುದಾಯವನ್ನು ಮಾನವ ಸಂಪನ್ಮೂಲವನ್ನಾಗಿ ಪರಿವರ್ತಿಸಬೇಕಿದೆ

ಮಾನ್ಯರೆ,

ಈಗಾಗಲೇ ವಿಶ್ವಸಂಸ್ಥೆಯು ಭಾರತದ ಜನಸಂಖ್ಯೆಯು 2023 ರಲ್ಲಿ ಚೀನಾವನ್ನು ಮೀರಿಸಲಿದೆ ಎಂದು ವರದಿ ಮಾಡಿದೆ. ಆದರೆ ಈ ಜನಸಂಖ್ಯೆಯನ್ನು ರಾಷ್ಟ್ರದ ಬೆಳವಣಿಗೆಗೆ ಹೇಗೆ ಬಳಸಿಕೊಳ್ಳಬೇಕೆಂಬ ನಿರ್ಧಾರವನ್ನು ಸರ್ಕಾರ ಮಾಡಬೇಕಿದೆ. ಭಾರತದಲ್ಲಿ ಶೇಕಡ 60ರಷ್ಟು ಜನ 35 ವರ್ಷಕ್ಕಿಂತ ಒಳಪಟ್ಟ ಯುವ ಜನತೆ ಇದ್ದಾರೆ. ಸರ್ಕಾರವು ಅವರಿಗೆ ದೀರ್ಘಾವಧಿ ಹಾಗೂ ಕೌಸಲ್ಯಾಧಾರಿತ ಕೆಲಸವನ್ನು ನೀಡಬೇಕು. ದೇಶದ ಆರ್ಥಿಕತೆಗೆ ಸೂಕ್ತವಾಗುವಂತಹ ಉದ್ಯೋಗಗಳನ್ನು ಒದಗಿಸಬೇಕು. ಯುವಜನರಲ್ಲಿ ಅರಿವು ಮೂಡಿಸುವ ಯೋಜನೆಗಳನ್ನು ಸರ್ಕಾರ ಹಾಕಿಕೊಳ್ಳಬೇಕಾಗಿದೆ. ಯುವಜನರನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳದಿದ್ದರೆ ಭಾರತದ ಮಾನವ ಸಂಪನ್ಮೂಲವು ಆಸಕ್ತಿರಹಿತವಾಗುತ್ತದೆ. ಇದರ ಜೊತೆಗೆ ಸರ್ಕಾರವು ಕುಟುಂಬ ಯೋಜನೆಯ ಬಗ್ಗೆ ಜನರಲ್ಲಿ ಅರಿವು ಮೂಡಿಸಬೇಕು. ಇವೆಲ್ಲವನ್ನೂ ಮಾಡದಿದ್ದರೆ ಭಾರತದ ಸಂಪನ್ಮೂಲವೂ ನಷ್ಟವಾಗುತ್ತದೆ ಹಾಗೂ ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಭಾರತವು ಬೇರೆ ರಾಷ್ಟ್ರಗಳಿಗಿಂತ ಹಿಂದುಳಿಯುತ್ತದೆ.

–ವಿಠಲ್ ಬಿ. ಎನ್., ಮಹಾರಾಜ ಕಾಲೇಜು, ಮೈಸೂರು.



ಪ್ರೊ. ಎ.ವಿ.ನರಸಿಂಹಮೂರ್ತಿ
ಮಾಜಿ ಮುಖ್ಯಸ್ಥರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ಶಾಸ್ತ್ರ ವಿಭಾಗ,
ಮೈಸೂರು ವಿಶ್ವವಿದ್ಯಾನಿಲಯ.

ಇತಿಹಾಸದ ಪುಟಗಳು

ಮಹಾನ್ ಸಾಧಕ ನಾಲ್ವರು ಮಹನೀಯರು

ಶಾಂತ... ಆರಂಭವಾಗುವ ಹೆಸರಿನ, ನಾನಾ ಕ್ಷೇತ್ರದ ನಾಲ್ಕರು ಸಾಧಕರಿವರು. ಇವರ ಸ್ತುತ್ಯಾರ್ಹ ಕಾರ್ಯಗಳನ್ನು ರಾಜ್ಯ, ದೇಶದ ಜನ ಈಗಲೂ ಕೊಂಡಾಡುತ್ತಾರೆ. ಇವರ ಸ್ಮರಣೆ ಯುವ ಪೀಳಿಗೆಯ ಧರ್ಮವಾಗಲಿ. ಇವರ ಸಾಧನೆ ಯುವ ಪೀಳಿಗೆಗೆ ದಾರಿದೀಪವಂತೂ ಹೌದು.



ಶಾಂತವೇರಿ ಗೋಪಾಲಗೌಡ



ಶಾಂತಾರಾಂ



ಶಾಂತಕವಿ



ಶಾಂತಿನಾಥ ದೇಸಾಯಿ

ಶಾಂತವೇರಿ ಗೋಪಾಲಗೌಡರು: ಇವರು ಶಾಂತವೇರಿಯಲ್ಲಿ ಬಡ ರೈತ ಕುಟುಂಬದಲ್ಲಿ 14.3.1923 ರಲ್ಲಿ ಜನಿಸಿದರು. ಇವರ ತಂದೆ ಕೊಲ್ಲೂರಯ್ಯ, ಅಂಚೆ ಇಲಾಖೆಯಲ್ಲಿ ಸ್ಟಾಂಪ್ ಮಾರುವ ಕೆಲಸ ಮಾಡುತ್ತಿದ್ದರು. ಗೋಪಾಲಗೌಡರು ಕರ್ನಾಟಕದ ಏಕೀಕರಣಕ್ಕಾಗಿ ಹೋರಾಡಿದ ಯುವ ನಾಯಕರಾಗಿದ್ದರು. ಇವರು ತೀರ್ಥಹಳ್ಳಿ ಮತ್ತು ಮೈಸೂರುಗಳಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತೇರ್ಗಡೆಯಾದರು. ಜಮೀನುದಾರರ ದಬ್ಬಾಳಿಕೆ, ರೈತರ ಕಷ್ಟ ಹಾಗೂ ಸಾಮಾನ್ಯ ಜನಗಳ ಬಡತನ ಇವರನ್ನು ಚಿಂತೆಗೀಡು ಮಾಡುತ್ತಿದ್ದವು. ಇವರು ಎಸ್‌ಎಸ್‌ಎಲ್‌ಸಿ ಮುಗಿಸಿದ ಕೂಡಲೇ ಶಿಕ್ಷಣಕ್ಕೆ ವಿದಾಯ ಹೇಳಿ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯರಾದರು. 1946 ರಲ್ಲಿ ನಂಜನಗೂಡಿನಲ್ಲಿ ನಡೆದ ಅಖಿಲ ಕರ್ನಾಟಕ ವಿದ್ಯಾರ್ಥಿ ಕಾಂಗ್ರೆಸ್‌ನಲ್ಲಿ ಇವರು ಸಕ್ರಿಯರಾಗಿ ಭಾಗವಹಿಸಿದ್ದರು. ಕನ್ನಡ ಭಾಷೆಯನ್ನು ಮಾತನಾಡುವ ಪ್ರದೇಶಗಳನ್ನು ಒಳಗೊಂಡ ಪ್ರತ್ಯೇಕ ಕರ್ನಾಟಕ ರಾಜ್ಯವಾಗಬೇಕೆಂದು ಕಾಂಗ್ರೆಸ್‌ನಲ್ಲಿ ನಿರ್ಣಯವನ್ನು ಶಾಂತವೇರಿಯವರು ಮಂಡಿಸಿದರು. ಹೆಚ್ಚಿನ ಕರತಾಡನದೊಂದಿಗೆ ಇವರು ಮಂಡಿಸಿದ್ದ ನಿರ್ಣಯ ಅಂಗೀಕಾರವಾಯಿತು.

1948ರಲ್ಲಿ ಇವರು ಕಾಂಗ್ರೆಸ್ ಪಕ್ಷವನ್ನು ಬಿಟ್ಟು ಅದೇ ವರ್ಷ ಸಮಾಜವಾದಿ ಪಕ್ಷವನ್ನು ಸೇರಿದರು. ಸಮಾಜವಾದಿ ಪಕ್ಷವು 1951 ರಲ್ಲಿ ನಡೆಸಿದ ಪ್ರಥಮ ಹೋರಾಟವು ಅನೇಕ ದಿನಗಳ ಕಾಲ ಉಗ್ರವಾಗಿ ನಡೆಯಿತು. ಇದರಲ್ಲಿ ರೈತರ ಜ್ವಲಂತ ಸಮಸ್ಯೆಗಳ ವಿಷಯದಲ್ಲಿ, ಇವರು ನೇತೃತ್ವ ವಹಿಸಿ, ರಾಜ್ಯದ ಜನರ ಗಮನ ಸೆಳೆದರು. ಸಮಾಜವಾದಿ ಪಕ್ಷದ ಧುರೀಣ ರಾಮಮನೋಹರ ಲೋಹಿಯಾರವರು ಕಾಗೋಡು ಸತ್ಯಾಗ್ರಹದಲ್ಲಿ ಭಾಗವಹಿಸುವಂತೆ ಪ್ರಾರ್ಥಿಸಿದರು.

1955ರಲ್ಲಿ ಸಮಾಜವಾದಿ ಪಕ್ಷದ ರಾಷ್ಟ್ರೀಯ ಸಮಿತಿಗೆ ಇವರು ಆಯ್ಕೆಯಾಗಿ, 1957 ರಲ್ಲಿ ಕರ್ನಾಟಕದಲ್ಲಿ ಸಮಾಜವಾದಿ ಯುವಜನರ ಸಂಘಟಿಸಿದ್ದರು. 1960 ರಲ್ಲಿ ಗೋವಾ ವಿಮೋಚನಾ ಚಳುವಳಿಯಲ್ಲಿ ಭಾಗಿಯಾಗಿ, ಸಮಾಜವಾದಿ ಪಕ್ಷದ ಮಾರ್ಗದರ್ಶಿ ಮಾಸಪತ್ರಿಕೆಯನ್ನು ಆರಂಭಿಸಿದರು. 1952ರಲ್ಲಿ ನಡೆದ ಜನರಲ್ ಎಲೆಕ್ಷನ್‌ನಲ್ಲಿ ಅಂದಿನ ಮೈಸೂರು ರಾಜ್ಯ ವಿಧಾನಸಭೆಗೆ ಆರಿಸಲ್ಪಟ್ಟರು. ನಂತರ 1962 ಮತ್ತು 1967ರಲ್ಲಿ ಎರಡು ಬಾರಿ ವಿಧಾನಸಭೆಗೆ ಆರಿಸಿ ಬಂದರು. ಇವರು ವಿಧಾನಸಭೆಯಲ್ಲಿ ಮಾಡುತ್ತಿದ್ದ ಭಾಷಣಗಳು ವಿಪಕ್ಷದವರ ಮೆಚ್ಚುಗೆಗೆ ಪಾತ್ರವಾಯಿತು. ವಿಧಾನಮಂಡಲದ ಎಲ್ಲಾ ಕಲಾಪಗಳೂ ಕನ್ನಡದಲ್ಲೇ ನಡೆಯಬೇಕೆಂದು ಇವರು ಸತ್ಯಾಗ್ರಹ ನಡೆಸಿದರು. ಕರ್ನಾಟಕದಲ್ಲಿ ಶಿಕ್ಷಣ, ಆಡಳಿತ, ಶಾಸನ ಹಾಗೂ ನ್ಯಾಯಾಂಗಗಳಲ್ಲಿ ಕನ್ನಡವೇ ಮಾಧ್ಯಮವಾಗಬೇಕೆಂದು, ಭಾರೀ ಚಳುವಳಿಯನ್ನೇ ಮಾಡಿದರು. ಸಮಾಜವಾದ, ಪ್ರಜಾತಂತ್ರ ವ್ಯವಸ್ಥೆ, ಕನ್ನಡ ನಾಡು, ಕನ್ನಡ ಭಾಷೆ ಹಾಗೂ ಮಾನವೀಯತೆಗಾಗಿ ಇವರು ವಿಶ್ರಾಂತಿಯಿಲ್ಲದೆ ದುಡಿದರು.

ಬೆಂಗಳೂರಿನಲ್ಲಿ ಇವರು ಪ್ರತಿಭಾವಂತ ಸಂಸದೀಯ ಪಟು ಮತ್ತು ಉತ್ತಮ ವಾಗ್ಮಿಗಳು ಎಂಬ ಮಾಲಿಕೆಯಲ್ಲಿ 1992ರಲ್ಲಿ ಶಾಂತವೇರಿ ಗೋಪಾಲಗೌಡ ಕೃತಿಯನ್ನು ಪ್ರಕಟಿಸಿತು. ಕಾಗೋಡು ಕ್ರಾಂತಿ (1982), ಗೋಪಾಲಗೌಡರ ಡೈರಿ ಹಾಗೂ 1993ರಲ್ಲಿ ಪ್ರಕಟಗೊಂಡ ಶಾಂತವೇರಿ ಗೋಪಾಲಗೌಡರ ನೆನಪಿನ ಸಂಪುಟ, ಇವುಗಳಲ್ಲಿ ಮುಖ್ಯವಾದವು. ಇವರ ಸ್ನೇಹಿತರು ಹಾಗೂ ಅಭಿಮಾನಿಗಳು ಸೇರಿ ಮೈಸೂರಿನ ನಜರ್‌ಬಾದ್‌ನಲ್ಲಿ ಶಾಂತವೇರಿ ಗೋಪಾಲಗೌಡ ಸ್ಮಾರಕ ಆಸ್ಪತ್ರೆಯನ್ನು ಸ್ಥಾಪಿಸಿದರು. ಅದು ಇಂದಿಗೂ ಎಲ್ಲರಿಗೂ ಉತ್ತಮ ಸೇವೆಯನ್ನು ಒದಗಿಸುತ್ತಿದೆ. ಶಾಂತವೇರಿ ಗೋಪಾಲಗೌಡರು ತಮ್ಮ 49ನೆಯ ವಯಸ್ಸಿನಲ್ಲಿ 9.6.1972 ರಂದು ನಿಧನರಾದರು.

ಇವರ ನಿಧನಕ್ಕೆ ಅವರು ಸ್ಥಾಪಿಸಿದ್ದ ಗೋಪಾಲಗೌಡ ಆಸ್ಪತ್ರೆಯನ್ನು ಮುಚ್ಚದೆ, ಡಾಕ್ಟರುಗಳು ಸೇರಿದಂತೆ ಎಲ್ಲಾ ಸಿಬ್ಬಂದಿ ಕಪ್ಪು ಬಟ್ಟೆ ಧರಿಸಿ, ಕರ್ತವ್ಯ ನಿರ್ವಹಿಸಿ ತಮ್ಮ ಶ್ರದ್ಧಾಂಜಲಿ ಸಲ್ಲಿಸಿದರು.

ಶಾಂತಾರಾಮ್: ಇವರು ಬಿಜಾಪುರ ಜಿಲ್ಲೆಯ ವಣಕುದುರೆಯಲ್ಲಿ 18.11.1901 ರಲ್ಲಿ ಜನಿಸಿದರು. ಇವರ ಪೂರ್ಣ ಹೆಸರು ವಣಕುದುರೆ ಶಾಂತಾರಾಂ. ಇವರು ಪ್ರಸಿದ್ಧ ಚಲನಚಿತ್ರ ನಿರ್ಮಾಪಕರಾಗಿ ಉತ್ತಮ ಕೆಲಸ ಮಾಡಿದರು. 1985 ರಲ್ಲಿ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಇವರಿಗೆ ದೊರಕಿತು. ಇವರ ತಂದೆ ರಾಜ ಹಾಗೂ ತಾಯಿ ಕಮಲ್. ಇವರು ತಮ್ಮ ತಂದೆ ಹಾಗೂ ತಾಯಿಯವರ ಹೆಸರಿನಲ್ಲಿ ರಾಜಕಮಲ್ ಸ್ಟುಡಿಯೋ ಸ್ಥಾಪಿಸಿದರು. ಇವರ ಹೆಂಡತಿ ಖ್ಯಾತ ತಾರೆ ಸಂಧ್ಯಾ.

ಇವರದ್ದು ಮೊದಲಿನಿಂದಲೂ ಹೋರಾಟದ ಬದುಕು. ಇವರು ಆರಂಭದಲ್ಲಿ ಹುಬ್ಬಳ್ಳಿಯ ರೈಲ್ವೆ ವರ್ಕ್‌ಶಾಪ್‌ನಲ್ಲಿ ಫಿಟ್ಟರ್ ಆಗಿದ್ದರು. ಪುಣೆಯಲ್ಲಿ ಗಂಧರ್ವ ನಾಟಕ ಮಂಡಳಿಯ ಪ್ರಖ್ಯಾತ ನಾಟಕಕಾರರಾದ ರಾಮ್ ಗಣೇಶ್ ಗಡಕರಿ ಅವರ ಸಂಪರ್ಕದಿಂದಾಗಿ, ಸೌಭದ್ರ ನಾಟಕದಲ್ಲಿ ರುಕ್ಮಿಣಿಯ ದಾಸಿಯ ಪಾತ್ರದ ಮೂಲಕ ಇವರು ರಂಗಭೂಮಿಯನ್ನು ಪ್ರವೇಶಿಸಿದರು. ಹಾಗೂ ಡೆಕ್ಕನ್ ಸಿನಿಮಾದಲ್ಲಿ ಡೋರ್ ಕೀಪರ್ ಆಗಿದ್ದರು. ಶಾಂತಾರಾಂ ಅವರು ಫಾಲ್ಕೆಯವರ ಲಂಕಾದಹನ, ಭಸ್ಮಾಸುರ, ಮೋಹಿನಿ, ಕೃಷ್ಣಜನ್ಮ ಮುಂತಾದ ಚಿತ್ರಗಳನ್ನು ನೋಡಿದ್ದರು. ತಿಂಗಳಿಗೆ ಒಂಬತ್ತು ರೂಪಾಯಿ ಸಂಬಳದ ಮೇಲೆ ಸುರೇಖಾ ಹರಣದಲ್ಲಿ, ಭಗವಾನ್ ವಿಷ್ಣುವಿನ ಪಾತ್ರದ ಮೂಲಕ ಸಿನಿಮಾ ಪ್ರಪಂಚಕ್ಕೆ 20.6.1930 ರಂದು ಪಾದಾರ್ಪಣೆ ಮಾಡಿದರು. ಇವರು ಅಭಿನಯ ಕೌಶಲ್ಯವನ್ನು ಹೊಂದಿದ್ದರು. ಮಹಾರಾಷ್ಟ್ರ ಫಿಲಂ ಕಂಪನಿ ನಡೆಸುತ್ತಿದ್ದ ಕೊಲ್ಲಾಪುರದ ಬಾಬುರಾವ್ ಕೃಪೆಗೆ ಇವರು ಪಾತ್ರರಾದರು. ಇವರು ನಟಿಸಿದ ಪ್ರಖ್ಯಾತ ಚಿತ್ರಗಳೆಂದರೆ ಡಾಕ್ಟರ್ ಕೊಟ್ನೀಸ್ ಕಿ ಅಮರ್ ಕಹಾನಿ, ದಹೇಜ್, ಅಪ್‌ನಾ ದೇಶ್, ದೋ ಆಂಖೇ ಬಾರಾ ಹಂತ್, ಝುನಕ್ ಝುನಕ್ ಪಾಯಲ್ ಬಾಜೆ. ಈ ಎಲ್ಲಾ ಸಿನಿಮಾಗಳಿಂದ ಶಾಂತಾರ್ ಟಚ್ ಎನ್ನುವುದು ಗಾದೆಯಾಯಿತು. ಇವರು ಅಭಿನಯಿಸಿದ ದಹೇಜ್ ಚಿತ್ರದ ಪ್ರಭಾವದಿಂದ ಬಿಹಾರದ ವಿಧಾನಸಭೆಯು ವರದಕ್ಷಿಣೆ ನಿಷೇಧದ ಕಾನೂನನ್ನೇ ಮಾಡಿತು. ಇವರು ನಟಿಸಿದ ಅಮರ್ ಭೂಪಾಳಿಗೆ ಫ್ರಾನ್ಸಿನ ಚಿತ್ರೋತ್ಸವದಲ್ಲಿ ಗ್ರಾಂಡ್ ಪಾರಿತೋಷಕವೂ ಸೇರಿದಂತೆ ಹಲವು ಪ್ರಶಸ್ತಿಗಳು ಲಭಿಸಿದವು. ಅಮರ ಭೂಪಾಳಿ ಚಿತ್ರದ ಯಶಸ್ಸಿಗಾಗಿ ಆಚಾರ್ಯ ಅತ್ರೆಯವರು ಚಿತ್ರಪತಿ ಎಂಬ ಬಿರುದನ್ನೇ ನೀಡಿದರು. ದೋ ಆಂಖೇ ಬಾರಾಹಾತ್‌ಗೆ ಬರ್ಲಿನ್ ಚಿತ್ರೋತ್ಸವದಲ್ಲಿ ಗೋಲ್ಡನ್ ಚೇರ್ ಪ್ರಶಸ್ತಿ ಹಾಗೂ ಅಮೆರಿಕದ ಅಂತರರಾಷ್ಟ್ರೀಯ ವೃತ್ತ ಪತ್ರಿಕಾ ಸಂಸ್ಥೆಯು ಪಾರಿತೋಷಕ ನೀಡಿ ಗೌರವಿಸಿತು. ಶಾಂತಾರಾಮ್ ಎಂಬುದು ಇವರ ಆತ್ಮಕಥೆ. ಶಾಂತಾರಾಂ ಹೇಳಿದ್ದನ್ನು ಸತತವಾಗಿ ಹತ್ತು ವರ್ಷಗಳ ಕಾಲ ಬರೆದಿಟ್ಟವರೇ ಇವರ ಮಗಳು ಮಧುರಾ ಜಸ್‌ರಾಜ್. ಶಾಂತಾರಾಮ್ ಎನ್ನುವುದು ವಾಸ್ತವಿಕ ಸಂಗತಿಗಳ ಗ್ರಂಥ ಮತ್ತು ಭಾರತೀಯ ಚಿತ್ರರಂಗದ ಬೆಳವಣಿಗೆಯ ಇತಿಹಾಸ ಕೃತಿ ಎಂದು ಪ್ರಸಿದ್ಧವಾಗಿದೆ. ಶಾಂತಾರಾಂ ಅವರು 30.10.1990 ರಂದು ಮುಂಬಯಿಯಲ್ಲಿ ನಿಧನರಾದರು.

ಶಾಂತಕವಿ: ಇವರು ಧಾರವಾಡ ಜಿಲ್ಲೆಯ ಸಾತೇನಹಳ್ಳಿಯಲ್ಲಿ 15.1.1856 ರಂದು ಜನಿಸಿದರು. ಇವರ ಪೂರ್ಣ ಹೆಸರು ಬಾಲಾಚಾರ್ಯ ಗೋಪಾಲಚಾರ್ಯ ಸಕ್ಕರಿ. ಇವರು ಶಾಂತಕವಿ ಎಂಬ ಹೆಸರಿನಿಂದ ಪ್ರಸಿದ್ಧರಾದವರು. ಇವರು ನಾಟಕಕಾರರು, ಕವಿ ಹಾಗೂ ಕೀರ್ತನಕಾರರು. ತಮ್ಮ ತಂದೆಯವರಿಂದಲೇ ಸಂಸ್ಕೃತ ಹಾಗೂ ಶಾಲೆಯಲ್ಲಿ ಕನ್ನಡವನ್ನು ಅಧ್ಯಯನ ಮಾಡಿದ ಇವರು ಧಾರವಾಡ ಶಿಕ್ಷಣ ಮಹಾವಿದ್ಯಾಲಯದಲ್ಲಿ ತರಬೇತಿ ಪಡೆದು, ಧಾರವಾಡದಲ್ಲಿ ಉಪಾಧ್ಯಾಯರಾದರು. ಧಾರವಾಡ ಜಿಲ್ಲೆಯ ನಗರಗಳಲ್ಲಿ ನಲವತ್ತು ವರ್ಷಗಳ ಕಾಲ ಕಾರ್ಯವನ್ನು ನಿರ್ವಹಿಸಿ, 1912ರಲ್ಲಿ ಇವರು ನಿವೃತ್ತರಾದರು. ಅಂದಿನ ದಿನಗಳಲ್ಲಿ ಉತ್ತರ ಕರ್ನಾಟಕದಲ್ಲಿ ಮರಾಠೀ ಪ್ರಾಬಲ್ಯ ಹೆಚ್ಚಾಗಿದ್ದಿತು. ಮತ್ತು ಕನ್ನಡವನ್ನು ಕೇಳುವವರೇ ಇರಲಿಲ್ಲ. ಇಂತಹ ದಿನಗಳಲ್ಲಿ ಇವರು ಕೀರ್ತನಕಾರರೂ ಆಗಿದ್ದು ನಾಡು-ನುಡಿಗಳ ಮೇಲೆ ಗೌರವವನ್ನು ಹುಟ್ಟಿಸುವಂತಹ ಅನೇಕ ಕೀರ್ತನೆಗಳನ್ನು ರಚಿಸಿದರು. ಇವರು ಕೀರ್ತನೆಗಳನ್ನು ಸಭೆಗಳಲ್ಲಿ ಹಾಡಿ ಜನಜಾಗೃತಿಯನ್ನುಂಟು ಮಾಡಿದರು. ಇವರು ತಮ್ಮ ಹದಿನಾಲ್ಕನೆಯ ವಯಸ್ಸಿನಲ್ಲಿ ಉಷಾಹರಣ ಎಂಬ ನಾಟಕವನ್ನು ಬರೆದು, ಅದನ್ನು ರಂಗಕರ್ಮಿಗಳಿಂದ ಆಡಿಸಿದರು. ಇದರಿಂದ ಉತ್ಸಾಹಗೊಂಡ ಇವರು ಶ್ರೀಯಾಳ ಸತ್ವ ಪರೀಕ್ಷೆ, ಕೀಚಕ ವಧೆ, ವತ್ಸಲಾಪಹರಣ, ಸುಧನ್ವ ವಧೆ ನಾಟಕಗಳನ್ನು ಬರೆದರು. ಇವರು 1873 ರಲ್ಲಿ ಕರ್ನಾಟಕ ನಾಟಕ ಕಂಪನಿಯನ್ನು ಆರಂಭಿಸಿ, ಇವರು ಬರೆದ ನಾಟಕಗಳನ್ನು ಪ್ರದರ್ಶಿಸಿದರು. ಇವರಿಂದಾಗಿ ಕರ್ನಾಟಕ ನಾಟಕಗಳಿಗೆ ಪ್ರಚಾರ ಸಿಕ್ಕಿತು ಮತ್ತು ಮರಾಠಿ ನಾಟಕಗಳ ಪ್ರಾಬಲ್ಯವು ಕಡಿಮೆಯಾಯಿತು. ಇವರು ರಚಿಸಿದ ನಾಟಕಗಳನ್ನು ಆಡಲು ಅನೇಕ ನಾಟಕ ಕಂಪನಿಗಳು ಆಸಕ್ತಿ ತೋರಿಸಿದವು.

ಇವರು ತಮ್ಮ ದೀರ್ಘ ಉಪಾಧ್ಯಾಯ ವೃತ್ತಿಯಲ್ಲಿ ಅಲ್ಪ ಸಮಯದಲ್ಲೇ ಸುಮಾರು ಅರವತ್ತು ನಾಟಕಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಮುಖ್ಯವಾದವುಗಳೆಂದರೆ, ಕೀಚಕವಧೆ, ಪಾರ್ವತೀ ಪರಿಣಯ, ಬಾಣ ಕವಿಯ ಸಂಸ್ಕೃತ ನಾಟಕದ ಕನ್ನಡಾನುವಾದ, ಕಾಳಿದಾಸ ಕವಿಯ ಮೇಘದೂತ, ಶಾಕುಂತಲ ಕನ್ನಡಾನುವಾದ, ಋತು ಸಂಹಾರ, ಮೃಚ್ಛಕಟಿಕ, ಸೀತೆಯ ಅರಣ್ಯ ಪ್ರವೇಶ, ಹರಿಶ್ಚಂದ್ರ ಸತ್ವಪರೀಕ್ಷೆ ಹಾಗೂ ಪೌರಾಣಿಕ ಕಥೆಗಳು, ಕನ್ನಡ ದಾಸಯ್ಯನ ಪದ್ಯಗಳು, ಕನ್ನಡಿಗರಿಗೆ ಸವಾಲುಗಳು, ವಾಸಪ್ಪನಾಯಕ ಕಥೆ, ಕಾಲಮಹಿಮೆ, ಕಾಳಾಸುರ ಮುಂತಾದ ಹಾಸ್ಯ ಪ್ರಬಂಧಗಳು, ಶೃಂಗಾರ ಸಾಗರ, ವಿರಹ ತರಂಗ, ಶೃಂಗಾರ ಪದ ಸಂಗ್ರಹ, ರಸಿಕ ವಿಚಾರ ಮುಖ್ಯವಾದವುಗಳು. ಈ ನಾಟಕಗಳು ಕನ್ನಡ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸುವುದರಲ್ಲಿ ಪ್ರಧಾನಪಾತ್ರ ವಹಿಸಿದವು. ರಾಷ್ಟ್ರೀಯತ್ವವೇ ಯುಗಧರ್ಮ ಎಂದು ಇವರು ಸಾರಿದರು. ಇವರ ಬಹುಮುಖ ಸೇವೆಯನ್ನು ಗಮನಿಸಿ 1880ರಲ್ಲಿ ಧಾರವಾಡದಲ್ಲಿ ಸಾರ್ವಜನಿಕ ಸಮಾರಂಭದಲ್ಲಿ ಉಡುಗೊರೆಯನ್ನು ನೀಡಿ ಗೌರವಿಸಲಾಯಿತು. ಶಾಂತಕವಿಯವರು 1920 ರಲ್ಲಿ ಧಾರವಾಡದಲ್ಲಿ ನಿಧನರಾದರು.

ಶಾಂತಿನಾಥದೇಸಾಯಿ: ಇವರು 22.6.1929ರಂದು ಉತ್ತರ ಕನ್ನಡ ಜಿಲ್ಲೆಗೆ ಸೇರಿದ ಹಳಿಯಾಳದಲ್ಲಿ ಜನಿಸಿದರು. ಇವರು ನವ್ಯಕಾದಂಬರಿಕಾರರು, ಕಥೆಗಾರರು ಹಾಗೂ ವಿಮರ್ಶಕರು. ಇವರ ಪೂರ್ಣ ಹೆಸರು, ಶಾಂತಿನಾಥ ಕುಬೇರಪ್ಪ ದೇಸಾಯಿ. ಇವರು ಹಳಿಯಾಳ ಹಾಗೂ ಧಾರವಾಡಗಳಲ್ಲಿ ಪ್ರಾಥಮಿಕ ಹಾಗೂ ಮೆಟ್ರಿಕ್ ವಿದ್ಯಾಭ್ಯಾಸವನ್ನು ಮುಗಿಸಿ, ಮುಂಬಯಿನ ಪ್ರಖ್ಯಾತ ವಿಲ್ಸನ್ ಕಾಲೇಜಿನಲ್ಲಿ ಕಾಲೇಜು ಶಿಕ್ಷಣ ಪಡೆದರು. ಇಂಗ್ಲಿಷ್ ಇವರ ವಿಶೇಷ ಅಧ್ಯಯನ ವಿಷಯವಾಗಿದ್ದಿತು. ಇವರ ಮೇಲೆ ಪ್ರಭಾವ ಬೀರಿದವರೆಂದರೆ ಗಂಗಾಧರ ಚಿತ್ತಾಲ ಮುಂತಾದವರು.

1958–1959ರಲ್ಲಿ ಇವರ ಪ್ರತಿಭೆಯನ್ನು ಗುರುತಿಸಿ ಸ್ಕಾಲರ್‌ಶಿಪ್ ನೀಡಿತು. ಇವರು ಎರಡು ವರ್ಷಗಳ ಕಾಲ ಇಂಗ್ಲೆಂಡಿಗೆ ಹೋಗಿ ಸಂಶೋಧನೆಯಲ್ಲಿ ನಿರತರಾದರು. ಹೀಗೆ ಹಡಗಿನಲ್ಲಾದ ಅನುಭವವನ್ನು 1966 ರಲ್ಲಿ ಕ್ಷಿತಿಜ ಎಂಬ ಸಣ್ಣ ಕಥೆಯನ್ನು ಇವರು ಬರೆದರು. ಈ ಸಣ್ಣ ಕಥೆಯಿಂದ ಇವರು ಜನಪ್ರಿಯರಾದರು. ಸಂಶೋಧನೆಯನ್ನು ಮುಗಿಸಿ ಹಳಿಯಾಳಕ್ಕೆ ಹಿಂದಿರುಗಿದರು. ನಂತರ ಕರ್ನಾಟಕ ವಿಶ್ವವಿದ್ಯಾನಿಲಯ ಹಾಗೂ ಕೊಲ್ಹಾಪುರದ ಶಿವಾಜಿ ವಿದ್ಯಾನಿಲಯದಲ್ಲಿ ಇಂಗ್ಲಿಷ್ ಉಪಪ್ರಾಧ್ಯಾಪಕರಾಗಿ (ಅಸಿಸ್ಟೆಂಟ್ ಪ್ರೊಫೆಸರ್) ಸೇವೆ ಸಲ್ಲಿಸಿದರು. 1988 ರಲ್ಲಿ ಇವರು ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ಕುಲಪತಿ ಆಗಿ ಸೇವೆ ಸಲ್ಲಿಸಿದರು. ಇಂಗ್ಲಿಷ್ ಇವರ ಅಧ್ಯಯನದ ವಿಷಯವಾಗಿದ್ದಿತು. ಇವರು ಕರ್ನಾಟಕ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಮತ್ತು ಜ್ಞಾನಪೀಠ ಪ್ರಶಸ್ತಿ ಸಲಹಾ ಸಮಿತಿಗಳಲ್ಲಿ ಸಲಹೆಗಾರರಾಗಿ ಕೆಲವು ವರ್ಷಗಳು ಕಾರ್ಯನಿರ್ವಹಿಸಿದರು.

ಇವರು ಸುಮಾರು ಐವತ್ತಕ್ಕೂ ಹೆಚ್ಚು ಕಥೆಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ (1959) ಮಂಜುಗಡ್ಡೆ, (1966) ಕ್ಷಿತಿಜ, (1971) ದಂಡೆ, (1977), (1984) ಪರಿವರ್ತನೆ, (1988) ಕೂರ್ಮಾವತಾರ. ಇವರು ಬರೆದ ಪ್ರಸಿದ್ಧ ಕಾದಂಬರಿಗಳಲ್ಲಿ ಮುಖ್ಯವಾದವುಗಳೆಂದರೆ (1961) ಮುಕ್ತಿ, (1971) ವಿಕ್ಷೇಪ, (1979) ಸೃಷ್ಟಿ, (1981) ಬೀಜ, (1981) ಸಂಬಂಧ (1993) ಅಂತರಾಳ, (1998) ಓಂಣಮೋ, ಇವರು ಬರೆದ ಮುಕ್ತ ಕಾದಂಬರಿ ಕನ್ನಡದಲ್ಲಿ ಹೊಸ ಕಾದಂಬರಿಯ ಮೊದಲನೆಯ ಹೆಜ್ಜೆಯಾಗಿದೆ.

ಇವರು ಬರೆದ ಓಂಣಮೋ ಕಾದಂಬರಿಗೆ 1999ರ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಬಂದಿದೆ. ಈ ಕಾದಂಬರಿಯಲ್ಲಿ ಜೈನ ಹಾಗೂ ಕ್ರಿಶ್ಚಿಯನ್ ಧರ್ಮಗಳ ಹೋಲಿಕೆಗಳನ್ನು ಕಾಣಬಹುದು.

ಇವರು ಬರೆದ ವಿಮರ್ಶೆಗಳಲ್ಲಿ ಮುಖ್ಯವಾದುವೆಂದರೆ (1980) ಸಾಹಿತ್ಯ ಮತ್ತು ಭಾಷೆ, (1989) ಗಂಗಾಧರ ಚಿತ್ತಾಲರ ಕಾವ್ಯಸೃಷ್ಟಿ, (1989) ಕನ್ನಡದ ಕಾದಂಬರಿಗಳು ನಡೆದು ಬಂದ ರೀತಿ, (1994) ಎಂ.ಎನ್. ರಾಯ್ ಮುಂತಾದವರು.

ಇವರು ಕನ್ನಡ ಕೃತಿಗಳಲ್ಲದೆ, ಹಲವು ವಿಮರ್ಶನ ಕೃತಿಗಳನ್ನೂ ಇಂಗ್ಲಿಷ್ ಭಾಷೆಯಲ್ಲಿ ರಚಿಸಿದ್ದಾರೆ. ಇವರ ಸಂಪಾದಕತ್ವದಲ್ಲಿ (1969) ಕ್ರಿಟಿಕಲ್ ಎಸ್ಸೇಸ್ ಆನ್ ಇಂಡಿಯನ್ ರೈಟಿಂಗ್ಸ್ ಇನ್ ಇಂಗ್ಲಿಷ್, (1974) ಎಕ್ಸ್‌ಪೆರಿಮಿಂಟೇಷನ್ ವಿತ್ ಲಾಂಗ್ವೇಜ್ ಇನ್ ಇಂಡಿಯನ್ ರೈಟಿಂಗ್ ಇನ್ ಇಂಗ್ಲಿಷ್, (1970) ದ ಇಮೇಜ್ ಆಫ್ ಇಂಡಿಯಾ ಇನ್ ವೆಸ್ಟರ್ನ್ ಕ್ರಿಯೇಟಿವ್ ರೈಟಿಂಗ್, (1976) ಕನ್ನಡದಲ್ಲಿ ಬರೆದ ಇಂಡಿಯನ್ ಪೋಯೆಟ್ರಿ ಟುಡೇ ಮೊದಲಾದವು. ಇದಲ್ಲದೆ ಪಿ. ಲಂಕೇಶ್ ಅವರು ಬರೆದ ಕ್ರಾಂತಿ ಬಂತು ಕ್ರಾಂತಿ ನಾಟಕವನ್ನು ಹಿಯರ್ ಕಮ್ಸ್ ರೆವಲ್ಯೂಷನ್ ಎಂಬ ಹೆಸರಿನಲ್ಲಿ ಇವರು ಇಂಗ್ಲಿಷ್‌ಗೆ ಅನುವಾದ ಮಾಡಿದ್ದಾರೆ. ಯು.ಆರ್. ಅನಂತಮೂರ್ತಿಯವರು ಬರೆದ ಅವಸ್ಥೆ ಎನ್ನುವ ಕನ್ನಡ ಗ್ರಂಥವನ್ನು ಇವರು ಇಂಗ್ಲಿಷ್‌ಗೆ ಭಾಷಾಂತರಿಸಿದ್ದಾರೆ. 1987ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಗೌರವ ನೀಡಿ ಸನ್ಮಾನಿಸಿತು. ಇವರು 30.10.1990ರಲ್ಲಿ ಮುಂಬಯಿಯಲ್ಲಿ ನಿಧನರಾದರು.

ಮೈಸೂರಿನಾದ್ಯಂತ ದೇವಾಲಯಗಳಲ್ಲಿ ಆಷಾಢ ಶುಕ್ರವಾರದ ಪೂಜೆ

ಸಾವಿರಾರು ಸಂಖ್ಯೆಯಲ್ಲಿ ಭಕ್ತಾದಿಗಳಿಂದ ಪೂಜೆ ಸಲ್ಲಿಕೆ



ಪ್ರತಿವರ್ಷ ದಸರಾ ಜಂಬೂಸವಾರಿಯಲ್ಲಿ ವಿಜೃಂಭಿಸುವ ಅರಮನೆಯ ಚಾಮುಂಡೇಶ್ವರಿ ಅಮ್ಮನವರ ವಿಗ್ರಹಕ್ಕೆ ಆಷಾಡ ಶುಕ್ರವಾರದ ವಿಶೇಷ ಪೂಜೆ ಸಲ್ಲಿಸಿ, ಭಕ್ತಾದಿಗಳಿಗೆ ಅರಮನೆಯ ಉಪನಿರ್ದೇಶಕ ಟಿ.ಎಸ್. ಸುಬ್ರಹ್ಮಣ್ಯರವರು ಪ್ರಸಾದವನ್ನು ವಿತರಿಸಿದರು.



ಮೈಸೂರು, ಜು.15(ಎಸ್‌ಪಿಎನ್)– ಮೂರನೇ ಆಷಾಢ ಶುಕ್ರವಾರವಾದ ಇಂದು ಮೈಸೂರಿನ ವಿವಿಧ ಬಡಾವಣೆಗಳಲ್ಲಿರುವ ದೇವಾಲಯಗಳಲ್ಲಿ ವಿಶೇಷ ಪೂಜೆ ನಡೆಯಿತು. ಜೊತೆಗೆ ನಗರದ ವಿವಿಧ ರಸ್ತೆ, ವೃತ್ತ ಹಾಗೂ ಆಟೋ ನಿಲ್ದಾಣಗಳಲ್ಲಿ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು;

ಮೈಸೂರಿನ ತೊಗರಿ ಬೀದಿ ಕೊಲ್ಲಾಪುರದಮ್ಮ ಮಹಾಲಕ್ಷ್ಮೀ ದೇವಸ್ಥಾನ, ಶಂಕರ ಮಠದ ಶ್ರೀ ಶೃಂಗೇರಿ ಶಾರದ ದೇವಿ ದೇವಸ್ಥಾನ, ಕುವೆಂಪುನಗರದ ಶ್ರೀ ಬಂದಂತಮ್ಮ ಕಾಳಮ್ಮ ಆದಿಶಕ್ತಿ ದೇವಸ್ಥಾನ, ಶ್ರೀರಾಂಪುರ 2ನೇ ಹಂತದಲ್ಲಿರುವ ಶ್ರೀ ಚಾಮುಂಡೇಶ್ವರಿ ದೇವಸ್ಥಾನ, ಕೆ.ಜಿ.ಕೊಪ್ಪಲಿನಲ್ಲಿರುವ ಶ್ರೀ ಚಾಮುಂಡೇಶ್ವರಿ ದೇವಸ್ಥಾನ ಸೇರಿದಂತೆ ಇತರೆ ದೇವಸ್ಥಾನಗಳಲ್ಲಿ ವಿಶೇಷವಾಗಿ ಅಲಂಕರಿಸಲಾಗಿತ್ತಲ್ಲದೆ, ಸಾವಿರಾರು ಸಂಖ್ಯೆಯಲ್ಲಿ ಭಕ್ತಾದಿಗಳು ಪಾಲ್ಗೊಂಡು ಪೂಜೆ ಸಲ್ಲಿಸಿದರು.

ಅನ್ನಸಂತರ್ಪಣೆ: ಮೂರನೇ ಆಷಾಢ ಶುಕ್ರವಾರದ ಹಿನ್ನೆಲೆಯಲ್ಲಿ ನಗರದ ವಿವಿಧೆಡೆ ಸಂಘ–ಸಂಸ್ಥೆಗಳು, ಆಟೋ ನಿಲ್ದಾಣಗಳಲ್ಲಿ ಶ್ರೀ ಚಾಮುಂಡೇಶ್ವರಿ ದೇವಿ ಹೆಸರಿನಲ್ಲಿ ಪೂಜೆ ಸಲ್ಲಿಸಿ ಅನ್ನ ಸಂತರ್ಪಣೆ ನೆರವೇರಿಸಿದರು.

ನ್ಯೂ ಸಯ್ಯಾಜೀರಾವ್ ರಸ್ತೆಯ ಪಂಚಮುಖಿ ಗಣಪತಿ ದೇವಸ್ಥಾನ ಸಮೀಪ, ಆಯುರ್ವೇದ ಕಾಲೇಜು ಸಮೀಪ, ಮೈಸೂರು ಗ್ರಾಮಾಂತರ ಬಸ್ ನಿಲ್ದಾಣದ ಆಟೋ ನಿಲ್ದಾಣದಲ್ಲಿ, ನ್ಯೂ ಕಾಂತ ರಾಜೇ ಅರಸ್ ರಸ್ತೆಯ ಬಲಮುರಿ ಗಣಪತಿ ದೇವಸ್ಥಾನದ ಸಮೀಪದ ಆಟೋ ನಿಲ್ದಾಣ, ಮೈಸೂರು ದಿಗಂತ ವೃತ್ತದ ಆಟೋ ನಿಲ್ದಾಣ, ಕೆ.ಜಿ.ಕೊಪ್ಪಲು, ಬಲ್ಲಾಳ್ ಸರ್ಕಲ್, ನಂಜುಮಳಿಗೆ ಸರ್ಕಲ್ ಸಮೀಪ, ಅಗ್ರಹಾರ, ಸಿದ್ಧಾರ್ಥ ಬಡಾವಣೆಯ ವಿವಿಧೆಡೆ, ಕುವೆಂಪುನಗರ, ರಾಮಕೃಷ್ಣ ನಗರ, ಶಾರದಾದೇವಿ ನಗರ, ವಿವೇಕಾನಂದ ಸರ್ಕಲ್ ಸೇರಿದಂತೆ ಇತರೆ ವೃತ್ತ ಮತ್ತು ರಸ್ತೆಗಳಲ್ಲಿ ಆಟೋ ರಿಕ್ಷಾ ಚಾಲಕರು ಏರ್ಪಡಿಸಿದ್ದ ಅನ್ನಸಂತರ್ಪಣೆಯಲ್ಲಿ ಸಾವಿರಾರು ಭಕ್ತರು ಪ್ರಸಾದ ಸ್ವೀಕರಿಸಿದರು.

ಇನ್ನು ಮುಂದೆ ಸರ್ಕಾರಿ ಕಚೇರಿಗಳಲ್ಲಿ ಫೋಟೋ, ವಿಡಿಯೋ ತೆಗೆಯುವಂತಿಲ್ಲ

ರಾಜ್ಯ ಸರ್ಕಾರದ ಆದೇಶ

ಬೆಂಗಳೂರು, ಜು.15(ಕೆಎಂಶಿ)– ರಾಜ್ಯ ಸರ್ಕಾರದ ಎಲ್ಲಾ ಇಲಾಖೆಗಳ ಕಚೇರಿಗಳ ಕರ್ತವ್ಯದ ವೇಳೆಯಲ್ಲಿ ಇನ್ನು ಮುಂದೆ ಅನುಮತಿ ಇಲ್ಲದೆ ಫೋಟೋ, ವಿಡಿಯೋ ತೆಗೆಯುವಂತಿಲ್ಲ.

ಈ ಸಂಬಂಧ ಇಂದಿಲ್ಲಿ ಸರ್ಕಾರ ಆದೇಶ ಹೊರಡಿಸಿದ್ದು, ಸಾರ್ವಜನಿಕರು ಅನಧಿಕೃತವಾಗಿ ಕಚೇರಿಗಳಲ್ಲಿ ಫೋಟೋ, ವಿಡಿಯೋ ತೆಗೆದರೆ ಅಂತಹವರ ವಿರುದ್ಧ ಕ್ರಮ ಜರುಗಿಸಲಾಗುವುದು. ಸರ್ಕಾರಿ ಕಚೇರಿಗಳಿಗೆ ಸಾರ್ವಜನಿಕರು ಅವರ ಕೆಲಸ ಕಾರ್ಯಗಳ ನಿಮಿತ್ತ ಆಗಮಿಸುವ ಸಂದರ್ಭದಲ್ಲಿ ಕೆಲವರು ಫೋಟೋ, ವಿಡಿಯೋ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟು ಸರ್ಕಾರದ ಘನತೆಗೆ ಕುಂದುಂಟು ಮಾಡುತ್ತಿದ್ದಾರೆ.

ಅದರಲ್ಲೂ ವಿಶೇಷವಾಗಿ ಮಹಿಳಾ ನೌಕರರಿಗೆ ಸಮಸ್ಯೆ ಉಂಟಾಗುತ್ತಿರುವುದರಿಂದ ಸರ್ಕಾರದ ಎಲ್ಲಾ ಇಲಾಖೆಯ ಕಚೇರಿಗಳಲ್ಲಿ ಛಾಯಾಚಿತ್ರ ತೆಗೆಯದಂತೆ ಆದೇಶ ಮಾಡಲಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಪಠ್ಯ ಪುಸ್ತಕ ಕಲ್ಪಿಸದೇ ಮಕ್ಕಳ ಭವಿಷ್ಯದೊಂದಿಗೆ ಸರ್ಕಾರ ಚೆಲ್ಲಾಟ

ಮಾಜಿ ಸಚಿವ ರೇವಣ್ಣ ಕಿಡಿ

ಮೈಸೂರು, ಜು.15(ಎಂಟಿವೈ)- ಪ್ರಸಕ್ತ ಶೈಕ್ಷಣಿಕ ವರ್ಷ ಆರಂಭವಾಗಿದ್ದರೂ ರಾಜ್ಯ ಸರ್ಕಾರ ಶಾಲಾ ಮಕ್ಕಳಿಗೆ ಮೂಲ ಸೌಲಭ್ಯ ಒದಗಿಸದೇ ಮಕ್ಕಳ ಭವಿಷ್ಯದೊಂದಿಗೆ ಚೆಲ್ಲಾಟವಾಡುತ್ತಿದೆ ಎಂದು ಮಾಜಿ ಸಚಿವ ಹೆಚ್.ಡಿ. ರೇವಣ್ಣ ಕಿಡಿಕಾರಿದ್ದಾರೆ.



ಆಷಾಢ ಮೂರನೇ ಶುಕ್ರವಾರದ ಹಿನ್ನೆಲೆಯಲ್ಲಿ ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡಿ ದೇವಿಯ ದರ್ಶನ ಪಡೆದ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಶೈಕ್ಷಣಿಕ ವರ್ಷ ಆರಂಭವಾಗಿದ್ದರೂ ಶಾಲಾ ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕ, ಶೂ, ಸಾಕ್ಸ್ ಸೇರಿದಂತೆ ಪಠ್ಯ ಸಾಮಗ್ರಿಗಳನ್ನು ನೀಡಲು ಕ್ರಮ ಕೈಗೊಂಡಿಲ್ಲ. ಇದರಿಂದ ಮಕ್ಕಳ ಕಲಿಕೆಯ ಮೇಲೆ ದುಷ್ಪರಿಣಾಮ ಬೀರುತ್ತದೆ. ಸರ್ಕಾರ ಎಲ್ಲಾ ಹಂತದಲ್ಲೂ ವಿಫಲವಾಗಿರುವಂತೆ ಶಾಲಾ ವಿದ್ಯಾರ್ಥಿಗಳ ವಿಷಯದಲ್ಲೂ ವೈಫಲ್ಯ ಎದುರಿಸುತ್ತಿದೆ. ಕೂಡಲೇ ಶಾಲಾ ವಿದ್ಯಾರ್ಥಿಗಳಿಗೆ ಮೂಲಭೂತ ಸೌಲಭ್ಯ ಒದಗಿಸುವಂತೆ ಆಗ್ರಹಿಸಿದರು.

ಶಾಲಾ ಮಕ್ಕಳಿಗೆ ಮೊಟ್ಟೆ ನೀಡುವುದನ್ನು ಕೈಬಿಡುವಂತೆ ಎನ್‌ಇಪಿ ಸಮಿತಿ ಶಿಫಾರಸ್ಸು ಮಾಡಿರುವುದು ಖಂಡನೀಯ. ಮಕ್ಕಳಲ್ಲಿ ಅಪೌಷ್ಠಿಕತೆ ನಿವಾರಿಸಲು ಮೊಟ್ಟೆ ನೀಡಬೇಕು. ಮೊಟ್ಟೆ ಸೇವನೆ ಆರೋಗ್ಯ ಕಾಪಾಡಿಕೊಳ್ಳಲು ಸಹಕಾರಿಯಾಗುತ್ತದೆ ಎಂದರು.

ಮಾಜಿ ಸಿಎಂ ಸಿದ್ದರಾಮಯ್ಯ ಅವರ 75ನೇ ಜನ್ಮ ದಿನದ ಹಿನ್ನೆಲೆಯಲ್ಲಿ ಆಯೋಜಿಸಿರುವ ಸಿದ್ಧರಾಮೋತ್ಸವ ಕಾರ್ಯಕ್ರಮ ಕುರಿತು ಪ್ರತಿಕ್ರಿಯಿಸಿದ ಹೆಚ್.ಡಿ ರೇವಣ್ಣ, ಸಿದ್ದರಾಮೋತ್ಸವಕ್ಕೂ, ನಮಗೂ ಸಂಬಂಧವಿಲ್ಲ. ಸಿದ್ದರಾಮಯ್ಯ ಕಾಂಗ್ರೆಸ್ ನಾಯಕರು. ಹಾಗಾಗಿ ಆ ಕಾರ್ಯಕ್ರಮದ ಬಗ್ಗೆ ನಮಗೆ ಮಾಹಿತಿ ಇಲ್ಲ. ಆಹ್ವಾನವೂ ಬಂದಿಲ್ಲ ಎಂದರು.

ಜು. 18ರಿಂದ ಮೈಸೂರು ಜಿಲ್ಲೆಯಲ್ಲಿ 18 ವರ್ಷ ಮೇಲ್ಪಟ್ಟವರಿಗೆ ಬೂಸ್ಟರ್ ಡೋಸ್

ಮೈಸೂರು, ಜು. 15(ಆರ್‌ಕೆ)- ಜುಲೈ 18ರ ಸೋಮವಾರದಿಂದ ಮೈಸೂರು ನಗರ ಹಾಗೂ ಜಿಲ್ಲೆಯಾದ್ಯಂತ 18 ವರ್ಷ ಮೇಲ್ಪಟ್ಟವರಿಗೆ ಬೂಸ್ಟರ್ ಡೋಸ್ ಲಸಿಕೆ ನೀಡಲಾಗುವುದು. ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಬೂಸ್ಟರ್ ಡೋಸ್ (3ನೇ ಡೋಸ್) ನೀಡಲಿದ್ದು, ಆಧಾರ್ ಕಾರ್ಡ್ ಮತ್ತು 2ನೇ ಡೋಸ್ ಲಸಿಕೆ ಪಡೆದು 6 ತಿಂಗಳು ಪೂರೈಸಿರುವ ದೃಢೀಕರಣ ಪತ್ರದೊಂದಿಗೆ ಬಂದು ಲಸಿಕೆ ಪಡೆಯಬಹುದು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ. ಲಸಿಕೆ ನೀಡಲು ತಂಡವನ್ನು ರಚಿಸಿರುವುದಾಗಿ ಅವರು ಹೇಳಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821-2496522/23

MATRIMONIAL
TAMILIAN BRIDE REQUIRED
34 yrs old Boy (Divorcee) SSLC + ITI, Owner cum Driver (Car) Mithuna Rasi/Punar Poosam Nakshatram, resident of # EWS, 22, 22nd Main, J.P. nagar 2nd Stage, Mysore-570 031 Seeking suitable Tamilian Bride.
Caste: No Bar (Hindu)
Contact: 9886614186

ಜಮೀನು ಮಾರಾಟಕ್ಕಿದೆ
ನಂಜನಗೂಡಿನ ಬಸ್ ಸ್ಟಾಂಡ್ ನಿಂದ 8 ಕಿ.ಮೀ. ದೂರದಲ್ಲಿರುವ ಬನ್ನಾರಿ ಅಮ್ಮನ್ ಸಕ್ಕರೆ ಕಾರ್ಖಾನೆಯ ಪಕ್ಕದಲ್ಲಿ, ತಗಡೂರು ಮೈನ್ ರೋಡ್‌ನಲ್ಲಿ 90 ತೆಂಗಿನ ಮರಗಳಿರುವ, 4 ಎಕರೆ 3 ಗುಂಟೆ ಜಮೀನು ಮಾರಾಟಕ್ಕಿದೆ. ಒಟ್ಟು ಬೆಲೆ 1 ಕೋಟಿ 84 ಲಕ್ಷ ರೂಪಾಯಿಗಳು.
ಶಿವಕುಮಾರ್ 9845875555
ಮಂಜುನಾಥ್ 7259592104, 9164374021

Requirement of ITI Candidates (Fresher & Experience).
Contact No : 7406273912

ಸೈಟು ಮಾರಾಟಕ್ಕಿದೆ
30x80
ನಾರ್ತ್ ಫೇಸ್, 11ಬಿ ಖಾತಾ, ಹೂಟಗಳ್ಳಿ
8880787811
8884577811

ಅಡುಗೆಯವರು ಬೇಕಾಗಿದ್ದಾರೆ
(Veg and Non Veg) ಅಡುಗೆ ಮಾಡಲು ಗೊತ್ತಿರುವ ಮಹಿಳೆ ಬೇಕಾಗಿದ್ದಾರೆ. ಸಮಯ: ಬೆಳಿಗ್ಗೆ 7.30 ರಿಂದ ರಾತ್ರಿ 7.30, ಉಚಿತ ಊಟ, ತಿಂಡಿ ಮತ್ತು ಉತ್ತಮ ಸಂಬಳ ನೀಡಲಾಗುವುದು
9611474321
9035249009

HOUSE FOR SALE
Newly built 20x30 Duplex, 3BHK with attached bathrooms & well furnished Building at "LBS" MUDA Layout (Near Police Layout, T.Narsipura Road) Price: 60 Lakhs
9886378344

WANTED PIGMY AGENTS
Attractive interest Rate on your investement upto 11.55% pa, Shares are opened for more details contact:
9902729729
SAI MULTISTATE CREDIT CO-OPERATIVE SOCIETY
3rd Main, 5th Cross, Jayanagar, Mysore

ಬೇಕಾಗಿದ್ದಾರೆ
ಗೋಲ್ಡ್ ಕಂಪನಿಯಲ್ಲಿ ಟೆಲಿಕಾಲಿಂಗ್ ಮಾಡಿ ಅನುಭವವುಳ್ಳ ಹುಡುಗಿಯರು ಹಾಗೂ ಮಹಿಳೆಯರು ಬೇಕಾಗಿದ್ದಾರೆ.
Age: Below 40 Years
8904131762

ಬೇಕಾಗಿದ್ದಾರೆ
ಹೆಡ್ ಮೆಕಾನಿಕ್ – 2 ನಂ.
ಸರ್ವೀಸ್ ಮ್ಯಾನೇಜರ್ – 1
ವೇತನ: 20,000– 35,000, ESI & PF ಸೌಲಭ್ಯವಿರುತ್ತದೆ. ಟಾಟಾ ಮೋಟಾರ್ ಕಮರ್ಷಿಯಲ್ ವಾಹನದ ಅಧಿಕೃತ ಡೀಲರ್, ಮೈಸೂರು.
9945698822

ಬೈಕ್ ರೈಡರ್ ಬೇಕಾಗಿದ್ದಾರೆ
ರಾಪಿಡೋ ರೈಡರ್ ಆಗಿ ಸೇರಿ ಹಾಗೂ ದಿನಕ್ಕೆ 1500/- ವರೆಗೂ ಸಂಪಾದಿಸಿ. ಅಗತ್ಯ ದಾಖಲೆಗಳು DL, ವಾಹನದ ದಾಖಲೆಗಳು ಮತ್ತು ಆಧಾರ್. ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ.
04045209698

ಸುವರ್ಣ ಯಾತ್ರ
ಕಾಶಿ ಪ್ರವಾಸ 7 ದಿನಗಳು 9/8/22, ಪುರಿ ಭುವನೇಶ್ವರ ಪ್ರವಾಸ 3 ದಿನಗಳು 18/8/22, ನೇಪಾಳ ಹಾಗೂ ಮುಕ್ತಿನಾಥ ಪ್ರವಾಸ 8 ದಿನಗಳು 20/8/22, ಕೇರಳ ಪ್ರವಾಸ 6 ದಿನಗಳು 08/09/22, ಗೋವಾ ಪ್ರವಾಸ 5 ದಿನಗಳು 02/09/22
9019462508 / 8970949434

ಮನೆ ಮಾರಾಟಕ್ಕೆ ಇದೆ
ನಂ.42, ವಿನಾಯಕ ಗಾರ್ಡನ್ ಸಿಟಿ ಲೇಔಟ್, ಲಿಂಗದೇವರು ಕೊಪ್ಪಲು, ಸೆಂಟ್ ಜೋಸೆಫ್ ಸ್ಕೂಲಿನ ಮುಂಭಾಗ. ಮೈಸೂರು
9901430534
9980918188

ಬೋಳು ತಲೆಯ ಸಮಸ್ಯೆಯೇ?



ಕಿಮೋತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

Join ASFT Fashion Design Courses
* Certification Course
* Diploma Course
* Advance Diploma Course
Alpha School of Fashion Technology & Interior Design
AT: SRIRAMPURA, GOKULAM, UDAYAGIRI, MYSORE
Mob: 7829937469, 9901803394

PLOTS FOR IMMEDIATE SALE
- 1500sq.ft., at Herbal village, Jayapura, H.D.Kote Road, Mysore.
- 1200sq.ft., Talur Urbs Talur.
Contact: 95675 89877
(English or Hindi)

M.M Ceramic Studio
We Are Hiring, Marketing Executive (Male), Sales executive (Male), salary + attractive incentives + allowances + other benefits. Walkin with your resume, industrial suburb, Visweshwara nagar mysore,
7019012892 / 9019910463

WANTED TEACHERS
SAI NALANDA CENTRAL SCHOOL, K.R.Nagar-571602
1) PUC / D.Ed/ NTT (Kindergarten) 2) B.A / M.A, B.Ed (English & Social Science) 3) BCA/MCA (CS)
(2 years of Experience, Fluency in English)
nalandakrn@gmail.com
Web: sainalanda.com
8722093456 / 8722073456

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ನಿರ್ಮಲ ಸರ್ವೀಸ್
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

CHANGE OF NAME
I, Syed Imtiyaz Syed Rahman, S/o Syed Rahman, residing at #2688/1, 5th Cross, Pulikeshi Road, Lashkar Mohalla, Mysore-570 001, have changed my name as Syed Imtiyaz, on my own free will, in front of Notary M.A. Hemalatha on 14-7-2022. I hereby declare that I shall at all times hereafter in all records, deeds and instruments in writing and in all actions and proceedings, in all dealings & transactions and upon all occasions what soever use & sign the said name of Syed Imtiyaz.
Sd/- Syed Imtiyaz

ತಕ್ಷಣ ಬೇಕಾಗಿದ್ದಾರೆ
HOME BASSED
E-CODE GAS SAFE

EDUCATION	WORK TIME	SALARY
SSLC,PUC,DIP Any Degree	4 HOURS	12000/-

ಗ್ಯಾಸ್ ಸೇಫ್ ಬಗ್ಗೆ ಮನೆಯಲ್ಲ ಗ್ರಾಹಕರಿಗೆ ಮಾಹಿತಿ ನೀಡುವ ಕೆಲಸ
android ಸ್ಮಾರ್ಟ್ ಫೋನ್ ಹೊಂದಿರಬೇಕು
9986621226

S.M GOLD
ಗಿರವಿ ಚಿನ್ನಾಭರಣ ಖರೀದಿ
ಒಂದು ಗ್ರಾಂ ಚಿನ್ನಕ್ಕೆ 5100
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನ ಆಭರಣಗಳನ್ನು ನಾವೇ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಳ್ಳುತ್ತೇವೆ ಕೂಡಲೇ ಸಂಪರ್ಕಿಸಿ. (T & C)
8050518881

WANTED
Require Female Office Staff Qualification: PUC or Degree (Must have Computer Knowledge), Age: 20 to 28 years, Experience in Stock Market, Mutual Fund, Insurance will be an added Advantage. Contact:
7090079700 / 9035572879

SITE FOR SALE
30x40
ಜ್ಞಾನಭಾರತಿ ಲೇಔಟ್, 2nd ಸ್ಟೇಜ್, ದಡದಹಳ್ಳಿ, East Facing, Site No.348, MUDA ಖಾತೆ ಆಗಿದೆ.
ಬೆಲೆ : 21 ಲಕ್ಷ
9342123373

solarizer



DEPENDABLE. DURABLE. DISTINCTIVE
HYGIENIC HOT WATER EVERY DAY!
Solar Water Heater SALES & SERVICE
Bajaj Finserv Available
SUNZONE SOLAR SYSTEM
VM Double Road, Kuvempunagar, Mysuru
9845175443

ಬೇಕಾಗಿದ್ದಾರೆ
ಲೀಡಿಂಗ್ ಆಟೋ ಮೊಬೈಲ್ ಡೀಲರ್‌ಶಿಪ್, ಮೈಸೂರು
0821-2404555 / 9632263202
kshatriyaforcesales@gmail.com
ಸರ್ವಿಸ್ ಮ್ಯಾನೇಜರ್ / ಆಟೋಮೊಬೈಲ್ ಕ್ಷೇತ್ರದಲ್ಲಿ ಉತ್ತಮ ಅನುಭವ ಹೊಂದಿರಬೇಕು. ಸೇಲ್ಸ್ ಎಕ್ಸಿಕ್ಯುಟಿವ್/ ಮೆಕ್ಯಾನಿಕ್ಸ್ / ಟಿಂಕರಿಂಗ್/ ಎಲೆಕ್ಟ್ರಿಷಿಯನ್, ಆಟೋಮೊಬೈಲ್ ಕ್ಷೇತ್ರದಲ್ಲಿ ಉತ್ತಮ ಅನುಭವ

SDJ JEWELERS
ಪುರುಷರು ಮತ್ತು ಮಹಿಳೆಯರು Tele Callers ಮತ್ತು Sales Executive ಬೇಕಾಗಿದ್ದಾರೆ.
Qualification: SSLC/ PUC/ Degree/ Post Graduation
ಉಳಿದುಕೊಳ್ಳಲು PG ವ್ಯವಸ್ಥೆ ಇರುತ್ತದೆ
Salary : 20,000
8884304444

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಕೆಲಸಕ್ಕೆ ಬೇಕಾಗಿದ್ದಾರೆ
ವಿಜಯನಗರ ಸೀನಿಯರ್ ಸಿಟಿಜನ್ಸ್ & ಯೂತ್ಸ್ ರಿಕ್ರಿಯೇಷನ್ ಸ್ಪೋರ್ಟ್ಸ್ ಕ್ಲಬ್, ಮೈಸೂರು. ಕ್ಲಬ್‌ನಲ್ಲಿ ಕೆಲಸ ನಿರ್ವಹಿಸಲು ಕಂಪ್ಯೂಟರ್ ಅನುಭವವುಳ್ಳ ಒಬ್ಬ ಪುರುಷ ವ್ಯಕ್ತಿ ಬೇಕಾಗಿದ್ದಾರೆ. ದಿನಾಂಕ: 16/7/2022, 17/07/2022 ರಂದು ಬೆಳಿಗ್ಗೆ 11 ಗಂಟೆಯಿಂದ ರಾತ್ರಿ 8 ಗಂಟೆಯವರೆಗೆ ಸಂಪರ್ಕಿಸ ಬಹುದು
9886742847

LEASE & RENT
30x40 Duplex House Lease at Srirampura.
40x60 G & F House Lease at Kuvempunagar.
40x60 House Rent at Kuvempunagar & T.K.Layout
9663136318

ಮಹಿಳಾ ಸಂಘದವರಿಗೆ ಕಂತಿನಲ್ಲಿ ಜರ್ಮನ್ ಬೆಳ್ಳಿ ಪದಾರ್ಥ ಪಡೆಯಿರಿ
ದೀಪ, ತಟ್ಟೆ, ಲಕ್ಷ್ಮಿ ಮುಖವಾಡ, ಚೊಂಬು, ಗಂಧದ ಬಟ್ಟಲು, ಪಂಚಪಾತ್ರೆ, ಉದ್ಧರಣೆ ಇನ್ನಿತರ ಯಾವುದೇ ಪೂಜಾ ಪದಾರ್ಥಗಳು ಜರ್ಮನ್ ಬೆಳ್ಳಿಯಲ್ಲಿ ಕಂತಿನಲ್ಲಿ ಕೊಡಲಾಗುವುದು (ಒಂದು ಗ್ರಾಂಗೆ 15 ರೂಗಳು ಡೋರ್ ಡೆಲಿವರಿ ಸೌಲಭ್ಯವಿದೆ), ಮೈಸೂರು. ಸಂಪರ್ಕಿಸಿ:
8884848773

ತಕ್ಷಣ ಬೇಕಾಗಿದ್ದಾರೆ
ಹುಣಸೂರಿನ ಕಟ್ಟೆಮಳಲವಾಡಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC & ಮೇಲ್ಪಟ್ಟು, ಸಂಬಳ: 14,500/–, ವಯೋಮಿತಿ:– 45 ವರ್ಷದ ಒಳಗೆ, ESI ಮತ್ತು PF ಸೌಲಭ್ಯ ಇರುತ್ತದೆ. ಸಂಪರ್ಕಿಸ ಬೇಕಾದ ಸಂಖ್ಯೆಗಳು:
9620667819 / 9620777819

ಸೈಟು ಮಾರಾಟಕ್ಕಿದೆ
ಬ್ರಾಹ್ಮಣ್ ಲೇಔಟ್ Saptarashinagar, C Block 30x40, W/F
30x40 E/F A Block
9886481265
8310972636

CHINMAYI PG
Student & Working Womens Hostel Kuvempunagar, Opp RMP Quarters
9663482564 / 8310767163

WANTED
Total Station operator and Survey Assistants
9916266181

LAND FOR SALE
30 Guntas
MUDA Conversion, BEML Layout Attached, Near Ring Road, Srirampura
9743532664

FOR SALE
A) 30x40 HD Kote Road
B) 30x50 Saptamantruke Layout attch
C) 40x60 Bannur Road KBL Layout
D) 20x30 G+1 House University Layout
E) 30x40 Site and House JP Nagar
PRAKRUTHI PROPERTIES
9035990359
9538690359

ಮನೆ ಮಾರಾಟಕ್ಕಿದೆ
35x45 ಅಳತೆ ಹೊಸ ಕಟ್ಟಡ, ನಾಲ್ಕು ಅಂತಸ್ತಿನ ಕಾರ್ನರ್ ಮನೆ, ನಾಲಾ ಬೀದಿ, ಚಾಮರಾಜ ಡಬ್ಬಲ್ ರಸ್ತೆ ಹತ್ತಿರ, ಮೈಸೂರು. ಒಂದು ಲಕ್ಷದವರೆಗೆ ಬಾಡಿಗೆ ಬರುತ್ತದೆ. ಬ್ಯಾಂಕಿನ ಸಾಲದ ಸೌಲಭ್ಯವಿದೆ. ಬೆಲೆ 3.75 ಕೋಟಿ.
8792274425
ಏಜೆಂಟ್ ಕ್ಷಮಿಸಿ

PART TIME WORK
ಬಿಡುವಿನ ವೇಳೆಯಲ್ಲಿ ನೀವು ಕುಳಿತ ಸ್ಥಳದಲ್ಲಿಯೇ
ಕೆಲಸ / JOB
ವಾರದ ಸಂಬಳ 3000/– ರಿಂದ 5000/– ಮೇಲ್ಪಟ್ಟು ಕೊರಿಯರ್ ಸೌಲಭ್ಯವಿದೆ.
9108418233
9743217566

ಜಮೀನು ಮಾರಾಟಕ್ಕಿದೆ
ಪಿರಿಯಾಪಟ್ಟಣ ಟೌನ್‌ನಿಂದ ಸಿದ್ದಾಪುರ ಮಡಿಕೇರಿ ಹೆದ್ದಾರಿಗೆ ಹೊಂದುಕೊಂಡಂತೆ ಟೌನ್‌ನಿಂದ $1\frac{1}{2}$ ಕಿ.ಮೀ ಅಂತರದಲ್ಲಿ ಎರಡು ಎಕರೆ ಸ್ವತ್ತು ತಕ್ಷಣದಲ್ಲಿ ಮಾರಾಟಕ್ಕಿದೆ. (ಕಮರ್ಷಿಯಲ್)
9611881603

DollarEstate Properties Pvt.Ltd
* Accountant
* Accounts Assistants
* Marketing Executives
* Telecallers
Address : New kantharaj urs road near Vijaya Bank circle Kuvempunagar Mysore - 570023. Contact :
6360955865

ಬೇಕಾಗಿದ್ದಾರೆ
ಕಂಪ್ಯೂಟರ್ ಟೈಪಿಂಗ್ ಬಲ್ಲ ನುರಿತ ಅಭ್ಯರ್ಥಿಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: ಯಾವುದೇ ಪದವಿ
Arthor services (P) Ltd
L89, 2nd Floor, Kuvempunagar, Mysore - 570023. Call. Shekar:
9945911118

SITES FOR SALE
Fully Develpoed Layout
35x40
MUDA Approved, CNM Layout, North / East Corner, Near St. Joseph's School, Opp. Telecom Layout, Hunsur Road, Belavadi
9743532664

ಬೇಕಾಗಿದ್ದಾರೆ
ಮೈಸೂರು ನಗರದಲ್ಲಿ E-Com ಕೊರಿಯರ್‌ನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ. ಆಕರ್ಷಕ ವೇತನ:– 20,000/–
ಮನು: 6366599352
ವಾಸು: 7483205140
ಯೋಗೇಶ್: 8884533588

ಗಿರವಿಯಿಂದ ಚಿನ್ನ ಬಿಡಿಸಿ 1% ಬಡ್ಡಿಯಲ್ಲಿ ಹಣ ಸಾಲ ಕೊಡಲಾಗುವುದು
ಸಂಪರ್ಕಿಸಿ: N.D ಗೋಲ್ಡ್ ಕಂಪನಿ, ಅಗ್ರಹಾರ, ಮೈಸೂರು
8073309855

HOUSE FOR RENT / LEASE
3BHK DUPLEX
Independent House, Vijayanagar 3rd Stage
40x60 3BHK
Independent House, Vijayanagar 2nd Stage
2BHK INDEPENDENT
House for Rent / Lease, Vijayanagar 2nd Stage
2BHK HOUSE FOR RENT
Vijayanagar 4th Stage
9743532664

ಬೇಕಾಗಿದ್ದಾರೆ
ಮೈಸೂರಿನ ಪ್ರತಿಷ್ಠಿತ ಸೋಲಾರ್ ಕಂಪನಿಯಲ್ಲಿ ವಿವಿಧ ಹುದ್ದೆಗಳಿಗಾಗಿ ARC Welder, C02 Welder, Tig Welder, Electrician, Marketing, Executive, Markerting Manager, Driver ಗಳು ಬೇಕಾಗಿದ್ದಾರೆ. ಊಟ, ವಸತಿಯೊಂದಿಗೆ, ಆಕರ್ಷಕ ವೇತನ ದೊರೆಯುತ್ತದೆ. ಸಂಪರ್ಕಿಸಿ:
9964832118 / 9980917976
ಸ್ಥಳ: ESSAR Products Pvt. Ltd.
#19/A, Kadakola Industrial Area, Mysore - 571311

ಬೇಕಾಗಿದ್ದಾರೆ
ಬೆಂಗಳೂರಿನಲ್ಲಿ Cook ಬೇಕಾಗಿದ್ದಾರೆ. ಸಂಬಳ 12,000 ಸಸ್ಯಹಾರಿ, ಮಾಂಸಹಾರಿ ಅಡುಗೆ ಗೊತ್ತಿರಬೇಕು. ಊಟ, ರೂಂ ಉಚಿತ ಸಂಪರ್ಕಿಸಿ:
9740098064
9740098047

URGENT REQUIREMENT
Security Supervisors and Security Guards for Mysore and Nanjangud for immediate posting.
for Mysore can contact @ 6364857754
For Nanjangud @ 6364857753

ಕಳೆದಿದೆ
ಪುಟ್ಟಣ್ಣಯ್ಯ ವಿ.ಎಸ್. #39, 1ನೇ ಮುಖ್ಯ ರಸ್ತೆ, 'ಎ' ಬ್ಲಾಕ್, ನಾಚನಹಳ್ಳಿ, ಜೆ.ಪಿ.ನಗರ, ಮೈಸೂರು. ಬಡಾವಣೆಯಲ್ಲಿನ ನಿವೇಶನ ಸಂಖ್ಯೆ 37 ರ ಗುತ್ತಿಗೆ ಸಹಿತ ಕ್ರಯದ ಒಪ್ಪಂದ ಮಂಜೂರಾತಿ ಪತ್ರ ಮತ್ತು ಸ್ವಾಧೀನ ಪತ್ರ ಕಳೆದು ಹೋಗಿರುತ್ತದೆ. ಸಿಕ್ಕಿದವರು ಸಂಪರ್ಕಿಸಿ.
9945373230

HOUSE FOR SALE
20x30 MUDA 3BHK New Duplex, North facing at Dattagalli, Somnathnagar, Rs. 75 Lakhs
40x60 MUDA, 4BHK New Duplex, East Facing at Vijayanagar 4th Stage, 2.65 Cr.
Brokers Don't Call
8660105902

30x50 ಸೈಟು @ Rs.25 ಲಕ್ಷ
ತಕ್ಷಣ ನೋಂದಣಿ / ಬ್ಯಾಂಕ್ ಲೋನ್ ಲಭ್ಯ, ತಕ್ಷಣ ಮನೆ ಕಟ್ಟಬಹುದು, ಮೈದನಹಳ್ಳಿಯ ಪಕ್ಕ, ಇಲವಾಲ, ಹುಣಸೂರು ರೋಡ್.
9538583377

ಹೊಸ ಮನೆ ಮಾರಾಟಕ್ಕಿದೆ
20x30 Duplex, 3 BHK ವಿನಾಯಕ ಗಾರ್ಡನ್ ಸಿಟಿ, St. Joseph ಸ್ಕೂಲ್ ಎದುರು, ನಿಂಗದೇಕೊಪ್ಪಲು ಹತ್ತಿರ, ಇಲವಾಲ, ಮೈಸೂರು.
9902634441

FOR RENT
East of Vishwamanava Double Road, Near Vijaya Bank circle 600 Sq Ft of Ground Floor and 1000 Sq.Ft at First Floor is available for Rent Suitable for Restuarant, Office, Coaching Center, Poly Clinic.
8105751169 / 9620607138

ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರಿನ ಮಧ್ಯಭಾಗದಲ್ಲಿರುವ ಲಾಡ್ಜ್‌ಗೆ
1) ರೂಂಬಾಯಿ ಕೆಲಸ ವಯಸ್ಸಿನ ವಯೋಮಿತಿ – 18 ರಿಂದ 40 ರ ಒಳಗೆ.
9663991888
2) ರಿಸೆಪ್ಷನಿಸ್ಟ್ ಕೆಲಸಕ್ಕೆ ಅನುಭವವುಳ್ಳವರು ಬೇಕಾಗಿದ್ದಾರೆ. ವಯಸ್ಸಿನ ವಯೋಮಿತಿ – 20 ರಿಂದ 40 ರ ಒಳಗೆ
9739742344

DOCUMENT LOST
Syed Haroon, MIG 7, 3rd Stage, HUDCO, Bannimantap, Mysore - 570015. Lost of House Allotment Letter. Finder please Contact:
8105378428

ಬ್ಯುಸಿನೆಸ್ ಪ್ಲ್ಯಾನ್
ಬ್ಯುಸಿನೆಸ್ ಪ್ಲ್ಯಾನ್ ನಿಮ್ಮದು, ಬಂಡವಾಳ ನಮ್ಮದು ಬಂದ ಆದಾಯದಲ್ಲಿ 50–50 ಈ ರೀತಿ ಬ್ಯುಸಿನೆಸ್ ಪ್ಲ್ಯಾನ್ ಇರುವವರು ಕೂಡಲೇ ಸಂಪರ್ಕಿಸಿ:
9901080314

SITES FOR SALE
20x30 - 12.60 Lakhs
30x40 - 25.20 Lakhs
Bank Loan upto 75%, Ready for Registration, Near Gurur Bus Stop, Ramabainagar, Mysore, DTCP approved, (Corporation Limits) 1.5 kms from J P Nagar Ring Road.
8660105902

30x40 E/F ಸೈಟು @ Rs.16.80 ಲಕ್ಷ
MUDA Approved Layout
ತಕ್ಷಣ ನೋಂದಣಿ / ಬ್ಯಾಂಕ್ ಲೋನ್ ಲಭ್ಯ. ಚಾಮುಂಡಿ ಬೆಟ್ಟದ ಹಿಂಭಾಗ, ಲಾಲ್ ಬಹದ್ದೂರ್ ಶಾಸ್ತ್ರಿನಗರ, ನಂತರ
9538583377

SITE FOR SALE
Site for Sale in BVL Premio Phase 1, West Face. 70% Bank Loan
8884138884
8105117403

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ, 15,200–86000
9740733021 / 9535028750

ಏಷ್ಯನ್ ಟೂರ್ಸ್ ಅಂಡ್ ಟ್ರಾವೆಲ್ಸ್
8.09.2022, 14 ದಿನಗಳ ಯಮುನೋತ್ರಿ, ಗಂಗೋತ್ರಿ, ಕೇದಾರನಾಥ್, ಬದರಿನಾಥ್, ಚಾರ್ಧಾಮ್ ಪ್ರವಾಸ. 05–10–2022, 16 ದಿನಗಳ ಅಷ್ಟ ಜ್ಯೋತಿರ್ಲಿಂಗ ದರ್ಶನ, ನಾಸಿಕ್, ಶಿರಡಿ, ಓಂಕಾರೇಶ್ವರ್, ಉಜ್ಜಯಿನಿ ಮಹಾಕಾಳೇಶ್ವರ, ವಲ್ಲಭ ಬಾಯಿ ಪಟೇಲರ ಪ್ರತಿಮೆ, ದ್ವಾರಕಾ, ಸೋಮನಾಥ್, ಮಾತೃಗಂಯಾ ಸಂಪರ್ಕಿಸಿ: ತ್ಯಾಗರಾಜನಗರ, ಬೆಂಗಳೂರು–70
9342287551 / 8050629305

ಕಛೇರಿಗೆ ಸ್ಥಳ ಬೇಕಾಗಿದೆ
ಕಛೇರಿಯ ಉದ್ದೇಶಕ್ಕಾಗಿ ಲಾಭರಹಿತ ಸಂಸ್ಥೆಗೆ (NGO) ಬಾಡಿಗೆಗೆ 3/4/5 BHK ಮನೆ ಅಥವಾ ಕಛೇರಿ ಸ್ಥಳ ಬೇಕಾಗಿದೆ. ಆದ್ಯತೆಯ ಪ್ರದೇಶಗಳು: ಸರಸ್ವತಿಪುರಂ, ಅಕ್ಷಯ ಭಂಡಾರ್, ಕುವೆಂಪುನಗರ, ಟಿಕೆ ಲೇಔಟ್, ಶಾರದಾದೇವಿನಗರ, ದಯವಿಟ್ಟು ನಮ್ಮನ್ನು ಸಂಪರ್ಕಿಸಿ. ದಲ್ಲಾಳಿಗಳು ಕ್ಷಮಿಸಿ
9964031758 / 9739134938

ಹೋಟೆಲ್ ಕೆಲಸಕ್ಕೆ ಬೇಕಾಗಿದ್ದಾರೆ
ನಾರ್ತ್ ಇಂಡಿಯನ್ ಮತ್ತು ರೋಟಿ ಚಾರ್ಟ್ಸ್ ಮತ್ತು ಕೌಂಟರ್, ಕ್ಲೀನಿಂಗ್, ಸಪ್ಲೆಯರ್ ಮತ್ತು ಕಾಫಿ, ಟೀ ಮಾಡುವವರು ಬೇಕಾಗಿದ್ದಾರೆ.
9380681467

S.K.CONSTRUCTION
ಅತಿ ಉತ್ತಮ ಗುಣಮಟ್ಟದಲ್ಲಿ ನಿಮ್ಮ ಕೈಗೆಟುಕುವ ಬೆಲೆಯಲ್ಲಿ Plan ಮತ್ತು 3D Elevation ಸಹಿತ 90% Loan ಮಾಡಿಸಿ ನಿಮ್ಮ ಕನಸಿನ ಮನೆ ಕಟ್ಟಿ ಕೊಡುತ್ತೇವೆ.
9620528490

MUDA APPROVED SITE FOR SALE
ಸಪ್ತಮಾತೃಕ ಫೇಸ್–2
50x60 E/F
40 ಅಡಿ ರಸ್ತೆ
1800/- Per Sq.Ft.
9900305514

ಕೊಳ್ಳೇಗಾಲ ಜ್ಯೋತಿಷ್ಯರು ನಂ. 01 ಮೋಡಿ ಮಾಂತ್ರಿಕರು
ಪಂ. ಎಸ್. ಕುಮಾರಸ್ವಾಮಿ
Mob: 9880583804
ಕೊಳ್ಳೇಗಾಲದ ಮೋಡಿ ಮಾಂತ್ರಿಕ ಅಘೋರ ಶಕ್ತಿಯಿಂದ ಸ್ತ್ರೀ–ಪುರುಷ, ಪ್ರೇಮ, ಸಂತಾನ, ಶತ್ರುದೋಷ, ಸಾಲಭಾಧೆ, ಆರೋಗ್ಯ, ಭೂಮಿ, ಕೋರ್ಟ್, ವ್ಯಾಪಾರ, ನಂಬಿದ ಜನರಿಂದ ಮೋಸ ನಿಮ್ಮ ಯಾವುದೇ ಜಟಿಲವಾದ ಸಮಸ್ಯೆಗಳಿಗೆ 2 ದಿನದಲ್ಲಿ ಶಾಶ್ವತ ಪರಿಹಾರ ಶತಸಿದ್ಧ. ಕರೆ ಮಾಡಿ ಬನ್ನಿ.
ಖಾಯಂ ವಿಳಾಸ: ಎ.ಟಿ.ಎಂ. ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್), ಬಿ.ಎನ್. ರೋಡ್, ಕೆ.ಎಸ್.ಆರ್.ಟಿ.ಸಿ. ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು

ಮಾಂತ್ರಿಕ ಕೇರಳ ಶ್ರೀ ಭಗವತಿ ಜೋತಿಷ್ಯರು
ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ: 9731839596
ಇವರು ಕುಟ್ಟಿ ಚೇತನ್ ಮಾರ್ತಾಂಡ ದೇವಿ ಭಗವತಿ ಕಾಟೇರಿ ಪ್ರಯೋಗದಿಂದ, ಸ್ತ್ರೀ ಪುರುಷ ಪ್ರೇಮ, ವಿವಾಹ, ಸಂತಾನ, ದಾಂಪತ್ಯ ಸಮಸ್ಯೆ, ಶತ್ರು ಭಾಧೇ, ಪ್ರೇತಾ ಭಾದೇ, ಹಣದ ಸಮಸ್ಯೆ, ತನ್ನವರೇ ತನಗೆ ಶತ್ರು, ಕೌಟುಂಬಿಕ ಕಲಹ ನಿಮ್ಮ ಯಾವುದೇ ಸಮಸ್ಯೆಗಳಿಗೆ ಮಳಯಾಳಿ ಮಾಂತ್ರಿಕ ಶಕ್ತಿಯಿಂದ ತಕ್ಷಣ ಪರಿಹಾರ ಶತಸಿದ್ಧ.
ಖಾಯಂ ಮನೆ ವಿಳಾಸ: ಮನೆ ನಂ 68, ಸತ್ಯ ಮಾರ್ಗ, ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ.ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರೆ ನಾಲ್ವರ ದೈವ ಚೌಡನ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಮೈಸೂರು ಮಿತ್ರ 43
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ



ಕಾಳಜಿ ಕೇಂದ್ರದಲ್ಲಿರುವ ಸಂತ್ರಸ್ತರಿಗೆ ಅಗತ್ಯ ವಸ್ತುಗಳನ್ನು ವಿತರಿಸುತ್ತಿರುವುದು.



ಗುಡ್ಡ ಕುಸಿತದ ಭೀತಿಯ ಹಿನ್ನೆಲೆಯಲ್ಲಿ ಕಾಳಜಿ ಕೇಂದ್ರದಲ್ಲಿ ಆಶ್ರಯ ಪಡೆದಿರುವ ಮಲೆತಿರಿಕೆ ಬೆಟ್ಟದ ನಿವಾಸಿಗಳು.

ಮಳೆ ಹಾನಿ ಜಿಲ್ಲೆಗಳ ಜಿಲ್ಲಾಧಿಕಾರಿಗಳೊಂದಿಗೆ

ಮುಖ್ಯಮಂತ್ರಿ ವಿಡಿಯೋ ಸಂವಾದ

ಮನೆ, ಜಾನುವಾರು, ರಸ್ತೆ, ಕೃಷಿ, ತೋಟಗಾರಿಕೆ ಬೆಳೆ ಹಾನಿ ಸಂಬಂಧ ಅಂದಾಜು ಪಟ್ಟಿ ಸಲ್ಲಿಸಲು ಸೂಚನೆ

ಮಡಿಕೇರಿ, ಜು.15– ರಾಜ್ಯದಲ್ಲಿ ಹೆಚ್ಚಿನ ಮಳೆಯಾಗಿ ಪ್ರವಾಹ ಉಂಟಾಗಿರುವ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಜೊತೆ ವಿಡಿಯೋ ಸಂವಾದ ಮೂಲಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಶುಕ್ರವಾರ ಮಾಹಿತಿ ಪಡೆದರು.

ಕೊಡಗು, ಶಿವಮೊಗ್ಗ, ಬೀದರ್, ಚಿಕ್ಕಮಗಳೂರು, ಬೆಳಗಾವಿ, ಹಾವೇರಿ ಜಿಲ್ಲೆಗಳ ಜಿಲ್ಲಾಧಿಕಾರಿಯವರ ಜೊತೆ ಮಳೆ ಹಾನಿ ಸಂಬಂಧ ಮಾಹಿತಿ ಪಡೆದರು. ಮನೆ, ಜಾನುವಾರು, ರಸ್ತೆ, ಕೃಷಿ, ತೋಟಗಾರಿಕೆ ಬೆಳೆ ಹಾನಿ ಸಂಬಂಧಿಸಿದಂತೆ ಅಂದಾಜು ಪಟ್ಟಿ ತಯಾರಿಸಿ ಸಲ್ಲಿಸುವಂತೆ ಸೂಚಿಸಿದರು.

ಮಳೆ ಹಾನಿ ಸಂಬಂಧ ಗ್ರಾಮಗಳಿಗೆ ಭೇಟಿ ನೀಡಿ ಕೂಡಲೇ ಪರಿಹಾರ ವಿತರಿಸಬೇಕು. ಸಾರ್ವಜನಿಕರಿಗೆ ತೊಂದರೆಯಾಗದಂತೆ ಗಮನಹರಿಸಬೇಕು ಎಂದು ಸೂಚಿಸಿದ ಅವರು, ಅಂಗನವಾಡಿ, ಶಾಲೆ ಕಟ್ಟಡ ಹಾನಿ ಸಂಬಂಧ ಅಂದಾಜು ಪಟ್ಟಿ ಸಲ್ಲಿಸುವಂತೆ ಸೂಚಿಸಿದರು. ಪ್ರಾಕೃತಿಕ ವಿಕೋಪದಡಿ ಹಣ ಬಿಡುಗಡೆ ಮಾಡಲಾಗುವುದು. ಪ್ರವಾಹ ಪರಿಸ್ಥಿತಿಯನ್ನು ಸಮರ್ಥವಾಗಿ ನಿಭಾಯಿಸಬೇಕು. ಗ್ರಾ.ಪಂ.ಮಟ್ಟದಲ್ಲಿ ಕಾರ್ಯಪಡೆಯು ಸಮರ್ಪಕವಾಗಿ ಕಾರ್ಯನಿರ್ವಹಿಸಬೇಕು ಎಂದರು.



ಕಂದಾಯ ಸಚಿವ ಆರ್.ಅಶೋಕ್ ಅವರು ಮಳೆ ಅಥವಾ ಪ್ರವಾಹದಿಂದ ಬೀಳುವ ಹಂತದಲ್ಲಿರುವ ಮನೆಗಳ ಬಗ್ಗೆ ಹೆಚ್ಚಿನ ನಿಗಾವಹಿಸಬೇಕು. ಇಂತಹ ಮನೆಗಳಿದ್ದಲ್ಲಿ ಕೆಡವಿ ಪರಿಹಾರ ವಿತರಿಸುವಂತಾಗಬೇಕು. ಯಾವುದೇ ಜನ, ಜಾನುವಾರು ತೊಂದರೆಯಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು ಎಂದರು.

ಕೊಡಗು ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಅವರು ಮಾಹಿತಿ ನೀಡಿ, ಜುಲೈ ಮೊದಲ ವಾರ ಕೊಡಗಿನಲ್ಲಿ ಸುರಿದ ಧಾರಾಕಾರ ಮಳೆಗೆ ಸುಮಾರು 174 ಕುಟುಂಬಗಳ 556 ಜನರು ಸ್ಥಳಾಂತರವಾಗಿದ್ದಾರೆ. ಸದ್ಯ ನಾಲ್ಕು ಕಾಳಜಿ ಕೇಂದ್ರದಲ್ಲಿ 122 ಕುಟುಂಬಗಳ 353 ಮಂದಿ ಇದ್ದಾರೆ ಎಂದು ಮಾಹಿತಿ ನೀಡಿದರು.

ಇದುವರೆಗೆ 17 ಜಾನುವಾರುಗಳು ಮೃತಪಟ್ಟಿದ್ದು, ನಾಲ್ಕು ಪ್ರಕರಣಗಳಿಗೆ ಪರಿಹಾರ ವಿತರಿಸಲಾಗಿದೆ. ಮನೆ ಹಾನಿಗೆ ಸಂಬಂಧಿಸಿದಂತೆ ನಾಲ್ಕು ಮನೆಗಳು ಸಂಪೂರ್ಣ ಹಾನಿಯಾಗಿದ್ದು, 33 ಮನೆಗಳು ತೀವ್ರವಾಗಿ ಹಾನಿಯಾಗಿದೆ. 143 ಮನೆಗಳು ಭಾಗಶಃ ಹಾನಿಯಾಗಿದೆ. ಇವುಗಳಲ್ಲಿ 76 ಪ್ರಕರಣಗಳಿಗೆ ಪರಿಹಾರ ವಿತರಿಸಲಾಗಿದೆ ಎಂದು ಅವರು ಹೇಳಿದರು.

ಹಾಗೆಯೇ 84 ಶಾಲೆಗಳು, 39 ಅಂಗನವಾಡಿ ಕೇಂದ್ರಗಳು ಭಾಗಶಃ ಹಾನಿಯಾಗಿದೆ. ಜೊತೆಗೆ ಲೋಕೋಪಯೋಗಿ ಇಲಾಖೆಯ 8 ಸೇತುವೆ ಹಾನಿಯಾಗಿದ್ದು, ಸುಮಾರು 181 ಲಕ್ಷ ರೂ. ನಷ್ಟವಾಗಿದೆ. ಪಿಎಂಜಿಎಸ್‌ವೈ ಇಲಾಖೆಯ ಮೂರು ಸೇತುವೆ ಹಾನಿಯಾಗಿದ್ದು, 115 ಲಕ್ಷ ರೂ. ನಷ್ಟವಾಗಿದೆ. ಹಾಗೆಯೇ ಪಿಆರ್‌ಇಡಿ ಇಲಾಖೆ ವ್ಯಾಪ್ತಿಯಲ್ಲಿ 49 ಸೇತುವೆಗಳು ಹಾನಿಯಾಗಿದ್ದು, 948 ಲಕ್ಷ ರೂ. ನಷ್ಟವಾಗಿದೆ. ಹಾಗೆಯೇ 123 ಮೋರಿಗಳು ಹಾನಿ ಯಾಗಿದ್ದು, 349.50 ಲಕ್ಷ ರೂ.ನಷ್ಟವಾಗಿದೆ ಎಂದರು.

ಈ ವೇಳೆ ಎಸ್ಪಿ ಎಂ.ಎ.ಅಯ್ಯಪ್ಪ, ಅಡಿಷನಲ್ ಡಿಸಿ ಡಾ. ನಂಜುಂಡೇಗೌಡ, ಉಪ ವಿಭಾಗಾಧಿಕಾರಿ ಯತೀಶ್ ಉಳ್ಳಾಲ್, ಲೋಕೋಪಯೋಗಿ ಇಲಾಖೆಯ ಇಇ ನಾಗರಾಜು, ಪಂಚಾಯತ್ ರಾಜ್ ಇಇ ನಾಗೇಂದ್ರಪ್ಪ, ಸೆಸ್ಕ್ ಇಇ ಅನಿತಾ ಬಾಯಿ, ಪ್ರಧಾನಮಂತ್ರಿ ಗ್ರಾಮ ಸಡಕ್ ಎಂಜಿನಿಯರಿಂಗ್ ವಿಭಾಗದ ಎಇಇ ಪ್ರಭು, ಕಾಫಿ ಮಂಡಳಿಯ ಉಪ ನಿರ್ದೇಶಕರಾದ ಶಿವಕುಮಾರ್ ಸ್ವಾಮಿ, ಪಶುಪಾಲನೆ ಇಲಾಖೆ ಉಪ ನಿರ್ದೇಶಕರಾದ ಸುರೇಶ್ ಭಟ್, ತೋಟಗಾರಿಕೆ ಇಲಾಖೆ ಉಪ ನಿರ್ದೇಶಕರಾದ ಪ್ರಮೋದ್, ಕೃಷಿ ಇಲಾಖೆ ಸಹಾಯಕ ನಿರ್ದೇಶಕರಾದ ಗೌರಿ ಇತರರು ಇದ್ದರು.

ಕಾವೇರಿ ಮಾತೆ, ಕೊಡವ ಹೆಣ್ಣು ಮಕ್ಕಳ ಬಗ್ಗೆ ಅವಹೇಳನ

ಜು.29, ಮಡಿಕೇರಿಯಲ್ಲಿ ಪ್ರತಿಭಟನೆ

18 ಮೂಲ ನಿವಾಸಿ ಜನಾಂಗ, ಕೊಡವ ಸಮಾಜದ ಬೆಂಬಲ ಕೋರಿಕೆ



ವಿರಾಜಪೇಟೆ, ಜು.15– ಕೊಡಗಿನ ಕುಲದೇವತೆ ಕಾವೇರಿ ಹಾಗೂ ಕೊಡವರ ಹೆಣ್ಣು ಮಕ್ಕಳ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿ ಪೋಸ್ಟ್ ಮಾಡಿರುವ ಕಿಡಿಗೇಡಿಗಳ ಕೃತ್ಯ ಖಂಡಿಸಿ ಜು.29 ರಂದು 18 ಮೂಲ ನಿವಾಸಿಗಳ ಜನಾಂಗದ ವತಿಯಿಂದ ಮಡಿಕೇರಿಯಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದು ಕೊಡವ ಸಮಾಜಗಳ ಒಕ್ಕೂಟದ ಅಧ್ಯಕ್ಷ ಕಳ್ಳಿಚಂಡ ವಿಷ್ಣು ಕಾರ್ಯಪ್ಪ ತಿಳಿಸಿದರು.

ಪಟ್ಟಣದ ಕೊಡವ ಸಮಾಜದ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾವೇರಿ ಹಾಗೂ ಕೊಡವರ ಹೆಣ್ಣುಮಕ್ಕಳ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿ ಪೋಸ್ಟ್ ಮಾಡಿರುವ ವಿಚಾರವಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಶಾಸಕರ ಜೊತೆ ಚರ್ಚಿಸಿದ್ದೇವೆ. ಮುಂಬರುವ ದಿನಗಳಲ್ಲಿ ಇಂತಹ ಘಟನೆಗಳು ನಡೆಯದಂತೆ ತಡೆಯಲು ಕ್ರಮ ಕೈಗೊಳ್ಳಲು ಪೊಲೀಸ್ ಠಾಣೆಗೆ ದೂರು ನೀಡಲಾಗಿದೆ. ಜು.29ರಂದು ನಡೆಯುವ ಪ್ರತಿಭಟನೆಗೆ 18 ಮೂಲನಿವಾಸಿ ಜನಾಂಗ ಮತ್ತು ಕೊಡವ ಸಮಾಜದ ಬೆಂಬಲ ಕೋರಿದ್ದೇವೆ ಎಂದರು. ವಿಧಾನಪರಿಷತ್ ಸದಸ್ಯ ಮಂಡೇಪಂಡ ಸುಜಾ ಕುಶಾಲಪ್ಪ ಮಾತನಾಡಿ, ಕೊಡಗಿನ ಎಲ್ಲಾ ಜನಾಂಗದವರು ಪೂಜಿಸುವ ಕುಲದೇವತೆ ಕಾವೇರಿಗೆ ಅಪಮಾನ, ಕೊಡಗಿನ ಹೆಣ್ಣು ಮಕ್ಕಳ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿ ಪೋಸ್ಟ್ ಮಾಡಿರುವುದು ಶೋಭೆಯಲ್ಲ. ಈ ಬಗ್ಗೆ ಪೊಲೀಸರು ಸೂಕ್ತ ತನಿಖೆ ನಡೆಸಿ ಕ್ರಮ ಕೈಗೊಳ್ಳಬೇಕು. ಪ್ರತಿಭಟನೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಅವರು ಮನವಿ ಮಾಡಿದರು.


ನಾಪೋಕ್ಲು ಕೊಡವ ಸಮಾಜದ ಅಧ್ಯಕ್ಷ ಮನುಮುತ್ತಪ್ಪ, ವಿರಾಜಪೇಟೆ ಕೊಡವ ಸಮಾಜದ ಅಧ್ಯಕ್ಷ ಕುಂಬೇರ ಮನುಕುಮಾರ್, ಕಾರ್ಯದರ್ಶಿ ಮಾಳೇಟಿರ ಶ್ರೀನಿವಾಸ್ ಮಾತನಾಡಿದರು. ಗೋಷ್ಠಿಯಲ್ಲಿ ಕೊಡವ ಸಮಾಜಗಳ ಒಕ್ಕೂಟದ ಕಾರ್ಯದರ್ಶಿ ವಾಟೇರಿರ ಪೂವಯ್ಯ, ವಿರಾಜಪೇಟೆಯ ಏಳು ಕೊಡವ ಕೇರಿಯ ಅಧ್ಯಕ್ಷ ಮೇಕೇರಿರ ರವಿ ಪೆಮ್ಮಯ್ಯ, ಕೊಡವ ಸಮಾಜದ ಉಪಾಧ್ಯಕ್ಷ ಕುಯ್ಯಮಂಡ ಕಿರಣ್ ಮತ್ತು ಕೊಡವ ಸಮಾಜದ ನಿರ್ದೇಶಕರು ಉಪಸ್ಥಿತರಿದ್ದರು.

'ಜಿಲ್ಲಾಧಿಕಾರಿಗಳ ನಡೆ ಹಳ್ಳಿಯ ಕಡೆ' ಅಭಿಯಾನಕ್ಕೆ ವಿನಾಯ್ತಿ

ಮಡಿಕೇರಿ, ಜು.15– ರಾಜ್ಯದಲ್ಲಿ ಹೆಚ್ಚು ಮಳೆಯಾಗುತ್ತಿರುವ ಕೊಡಗು, ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಬೆಳಗಾವಿ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ ಜಿಲ್ಲೆಗಳಲ್ಲಿ ಜು.16 ರಂದು ನಡೆಯಬೇಕಿದ್ದ 'ಜಿಲ್ಲಾಧಿಕಾರಿಗಳ ನಡೆ ಹಳ್ಳಿಯ ಕಡೆ' ಅಭಿಯಾನಕ್ಕೆ ಜುಲೈ ಮಾಹೆಯಲ್ಲಿ ವಿನಾಯಿತಿ ನೀಡಲಾಗಿದೆ ಎಂದು ಕಂದಾಯ ಇಲಾಖೆಯ ಸರ್ಕಾರದ ಉಪ ಕಾರ್ಯದರ್ಶಿ ತಿಳಿಸಿದ್ದಾರೆ.

ಮೃತ ಖಾತೆದಾರರ ಹೆಸರಿನಲ್ಲಿ ಸಾಲ ಪಡೆದು ವಂಚನೆ

ಮದ್ದೂರು ಶಿಂಷಾ ಸಹಕಾರ ಬ್ಯಾಂಕ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸೇರಿ ನಾಲ್ವರ ಅಮಾನತು



ಮದ್ದೂರು, ಜು.15– ಮೃತ ಖಾತೆದಾರರ ಹೆಸರಲ್ಲಿ ಸಾಲ ಪಡೆದು, ದುರುಪಯೋಗದ ಜೊತೆಗೆ ಅಕ್ರಮ ರೀತಿ ವೈಯಕ್ತಿಕ ಸಾಲ ಪಡೆದು ಕರ್ತವ್ಯ ಲೋಪವೆಸಗಿದ ಪಟ್ಟಣದ ಶಿಂಷಾ ಸಹಕಾರ ಬ್ಯಾಂಕ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಲಕ್ಷ್ಮಿನಾರಾಯಣಗೌಡ ಸೇರಿದಂತೆ ನಾಲ್ವರು ನೌಕರರನ್ನು ಮಂಡ್ಯ ಸಹಕಾರ ಇಲಾಖೆಯ ಉಪ ನಿಬಂಧಕರ ಆದೇಶದ ಮೇರೆಗೆ ಅಮಾನತು ಮಾಡಲಾಗಿದೆ ಎಂದು ಬ್ಯಾಂಕ್‌ನ ಅಧ್ಯಕ್ಷ ಎಂ.ಚಂದು ಹಾಗೂ ಉಪಾಧ್ಯಕ್ಷ ಚನ್ನಪ್ಪ ತಿಳಿಸಿದ್ದಾರೆ.

ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಲಕ್ಷ್ಮೀನಾರಾಯಣಗೌಡ, ಉಪ ವ್ಯವಸ್ಥಾಪಕ ವಿ.ಉಮಾಶಂಕರ್, ಲೆಕ್ಕಾಧಿಕಾರಿ ಬಿ.ಎನ್.ಕುಮಾರ್ ಹಾಗೂ ಕಿರಿಯ ಸಹಾಯಕ ಟಿ.ಗೋಪಿ ಅವರುಗಳನ್ನು ಅಮಾನತು ಮಾಡಲಾಗಿದೆ ಎಂದು ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ನಾಲ್ವರು ಕಳೆದ ಕೆಲವು ವರ್ಷಗಳಿಂದ ಮೃತ ಖಾತೆದಾರರ ಹೆಸರಿನಲ್ಲಿ ನಕಲಿ ದಾಖಲೆ ಸೃಷ್ಟಿಸಿ ಲಕ್ಷಾಂತರ ರೂ. ಸಾಲ ಪಡೆದಿದ್ದಾರಲ್ಲದೇ, ಯಾವುದೇ ದಾಖಲಾತಿಗಳನ್ನು ನೀಡದೆ ಬ್ಯಾಂಕಿನಿಂದ ಲಕ್ಷಾಂತರ ರೂ. ವೈಯಕ್ತಿಕ ಸಾಲ ಪಡೆದು ಮರು ಪಾವತಿ ಮಾಡದಿರುವುದು 2020–21 ಸಾಲಿನಲ್ಲಿ ನಡೆದ ಲೆಕ್ಕ ಪರಿಶೋಧನೆಯ ವೇಳೆ ಬೆಳಕಿಗೆ ಬಂದಿದೆ ಎಂದು ಅವರು ಹೇಳಿದ್ದಾರೆ.

ಕರ್ತವ್ಯದಲ್ಲಿ ನಿರ್ಲಕ್ಷ್ಯತೆ ತೋರಿದ ಆರೋಪದ ಮೇಲೆ ಇವರನ್ನು ಅಮಾನತು ಮಾಡಲು ಬ್ಯಾಂಕಿನ ಆಡಳಿತ ಮಂಡಳಿ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿದ್ದು, ಅದರಂತೆ ಅಮಾನತು ಮಾಡಲಾಗಿದೆ ಎಂದು ಅಧ್ಯಕ್ಷರು ತಿಳಿಸಿದ್ದಾರೆ.

ಠೇವಣಿದಾರರು ಹಾಗೂ ಸಂಘದ ಷೇರುದಾರರು ಅಮಾನತುಗೊಂಡಿರುವ ನೌಕರರೊಂದಿಗೆ ಬ್ಯಾಂಕಿಗೆ ಸಂಬಂಧಪಟ್ಟ ಯಾವುದೇ ಹಣಕಾಸು ವ್ಯವಹಾರಗಳನ್ನು ಮಾಡಬಾರದು ಎಂದು ಅವರು ಮನವಿ ಮಾಡಿದ್ದಾರೆ. ಅಮಾನತುಗೊಂಡಿರುವ ಈ ಎಲ್ಲಾ ನೌಕರರು ಬ್ಯಾಂಕಿನ ವಿರುದ್ಧ ಅಪಪ್ರಚಾರ ಮಾಡುತ್ತಿದ್ದು, ಇದಕ್ಕೆ ಗ್ರಾಹಕರು ಕಿವಿಗೊಡದೆ ಎಂದಿ ನಂತೆ ಬ್ಯಾಂಕಿನೊಂದಿಗೆ ಸಹಕರಿಸಬೇಕೆಂದು ಅವರು ವಿನಂತಿಸಿದ್ದಾರೆ.

ಏತ ನೀರಾವರಿ ಯೋಜನೆ ತ್ವರಿತಗತಿಯಲ್ಲಿ ಪೂರ್ಣಗೊಳಿಸಿ

ಅಧಿಕಾರಿಗಳಿಗೆ ಸಚಿವ ಡಾ.ಕೆ.ಸಿ. ನಾರಾಯಣಗೌಡ ಸೂಚನೆ

ಕೆ.ಆರ್.ಪೇಟೆ, ಜು.15– ತಾಲೂಕಿನ ಸಂತೇಬಾಚಹಳ್ಳಿ ಹೋಬಳಿಯ ಎಲ್ಲಾ ಕೆರೆಕಟ್ಟೆ ತುಂಬಿಸುವ 212 ಕೋಟಿ ರೂ. ವೆಚ್ಚದ ಗೂಡೇಹೊಸಹಳ್ಳಿ ಏತ ನೀರಾವರಿ ಯೋಜನೆಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಿ ರೈತರಿಗೆ ಅನುಕೂಲ ಮಾಡಿಕೊಡುವಂತೆ ಸಚಿವ ಡಾ.ಕೆ.ಸಿ. ನಾರಾಯಣಗೌಡ ಸೂಚಿಸಿದರು.

ತಾಲೂಕಿನ ಅಘಾಲಯ ಬಳಿ ಪ್ರಗತಿಯಲ್ಲಿರುವ ಏತ ನೀರಾವರಿ ಕಾಮಗಾರಿ ಪರಿಶೀಲಿಸಿದ ಸಚಿವರು ಸ್ಥಳದಲ್ಲೇ ಅಧಿಕಾರಿಗಳು, ಗುತ್ತಿಗೆದಾರರ ಸಭೆ ನಡೆಸಿದರು. ಸಂತೇಬಾಚಹಳ್ಳಿ ಹೋಬಳಿಯ ಎಲ್ಲಾ ಕೆರೆಗಳಿಗೆ ನೀರು ತುಂಬಿಸಲು ಏತ ನೀರಾವರಿ ಯೋಜನೆ ಕೈಗೆತ್ತಿಕೊಳ್ಳಲಾಗಿದೆ. ಆದರೆ ಗುತ್ತಿಗೆದಾರರು ನಿಧಾನಗತಿಯಲ್ಲಿ ಕಾಮಗಾರಿ ನಡೆಸುತ್ತಿರುವುದಕ್ಕೆ ಆಕ್ರೋಶ ವ್ಯಕ್ತಪಡಿಸಿದ ಅವರು, 3 ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳಿಸುವಂತೆ ಗಡುವು ನೀಡಿದರು. ತಪ್ಪಿದಲ್ಲಿ ಅಧಿಕಾರಿಗಳ ಸಾಮೂಹಿಕ ವರ್ಗಾವಣೆಗೆ ಶಿಫಾರಸು ಮಾಡುವುದಲ್ಲದೇ ಗುತ್ತಿಗೆದಾರರನ್ನು ಕಪ್ಪು ಪಟ್ಟಿಗೆ ಸೇರಿಸಲು ಸರ್ಕಾರಕ್ಕೆ ಪತ್ರ ಬರೆಯುತ್ತೇನೆ ಎಂದರು.



ಮಳೆಯಾಶ್ರಿತ ಸಂತೇಬಾಚಹಳ್ಳಿ ಹೋಬಳಿಯು ಹೇಮಾವತಿ ನದಿ ಕಾಲುವೆ ನೀರಿನಿಂದ ವಂಚಿತವಾಗಿ ಬರಪೀಡಿತವಾಗಿದೆ. ಈ ಭಾಗದಲ್ಲಿ ಸಮರ್ಪಕ ಮಳೆಯಾಗದೇ ಜನರು ಮುಂಬೈ, ಊಟಿ ಮತ್ತು ಪೂನಾ ನಗರಕ್ಕೆ ಹೋಗಿ ಜೀವನ ನಡೆಸುತ್ತಿದ್ದಾರೆ. ನಾನು ಜೆಡಿಎಸ್‌ನಲ್ಲಿದ್ದಾಗ ಸಿಎಂ ಆಗಿದ್ದ ಕುಮಾರಸ್ವಾಮಿ ಅವರು ತಾಲೂಕಿನ ಅಭಿವೃದ್ಧಿಗೆ ಅನುದಾನ ಬಿಡುಗಡೆ ಮಾಡಲಿಲ್ಲ. ಇದರಿಂದ ನಾನು ತನ್ನ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಬಿಜೆಪಿ ಸೇರ್ಪಡೆಗೊಂಡೆ. ಇದೀಗ ಸಚಿವನಾಗಿದ್ದು, ಮಾಜಿ ಸಿಎಂ ಯಡಿಯೂರಪ್ಪ, ಸಿಎಂ ಬಸವರಾಜ ಬೊಮ್ಮಾಯಿ ಅವರ ಆಶೀರ್ವಾದದ ಫಲವಾಗಿ ತಾಲೂಕಿನಲ್ಲಿ ಕುಡಿಯುವ ನೀರಿನ ಯೋಜನೆಗಳು ಸೇರಿದಂತೆ1800 ಕೋಟಿ ರೂ. ವೆಚ್ಚದ ಅಭಿವೃದ್ಧಿ ಕಾಮಗಾರಿಗಳು ಅನುಷ್ಠಾನಗೊಳ್ಳುತ್ತಿವೆ. ಜೆಡಿಎಸ್‌ನವರು ಈ ಯೋಜನೆ ನಮ್ಮ ಸರ್ಕಾರ ಮಾಡಿದ್ದು ಎನ್ನುತ್ತಾರೆ. ಆದರೆ ಕೇವಲ ತಾಂತ್ರಿಕ ಅನುಮೋದನೆ ನೀಡಿ ನನಗೆ ಹೆಸರು ಬರುವುದೆಂಬ ಕಾರಣಕ್ಕೆ ಹಣಕಾಸು ಇಲಾಖೆಯಲ್ಲಿ ಕಡತ ಕೊಳೆಯುವಂತೆ ಮಾಡಿದ್ದರು. ಆದರೆ ಯಡಿಯೂರಪ್ಪನವರು ನಾನು ಬಿಜೆಪಿ ಸೇರಿದ ಒಂದೇ ವಾರಕ್ಕೆ 212 ಕೋಟಿ ರೂ. ಬಿಡುಗಡೆ ಮಾಡಿ ಸಂತೇಬಾಚಹಳ್ಳಿ ಏತ ನೀರಾವರಿ ಯೋಜನೆ ಆರಂಭಗೊಳ್ಳಲು ಕಾರಣರಾದರು ಎಂದರು.

ಈ ವೇಳೆ ಕಾವೇರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಶಂಕರೇಗೌಡ, ಮುಖ್ಯ ಇಂಜಿನಿಯರ್ ಮಹೇಶ್, ತಾಲೂಕು ಹೇಮಾವತಿ ಜಲಾಶಯ ಯೋಜನೆ ಮುಖ್ಯ ಇಂಜಿನಿಯರ್ ಕಿಜರ್ ಅಹಮದ್, ಮುಖಂಡರಾದ ಮಂಜುನಾಥ್, ಎ.ಎಸ್.ಶ್ರೀಧರ್, ಮಹಡಿಮನೆ ಮಂಜೇಗೌಡ, ಜಿಪಂ ಮಾಜಿ ಉಪಾಧ್ಯಕ್ಷ ಎಸ್.ಅಂಬರೀಶ್ ಸೇರಿದಂತೆ ನಿಗಮದ ಹಿರಿಯ ಅಧಿಕಾರಿಗಳಿದ್ದರು.

ಪ್ರತ್ಯೇಕ ಪ್ರಕರಣ: ಐವರ ಬಂಧನ

ನಾಗಮಂಗಲ, ಬಿಂಡಿಗನವಿಲೆ ಪೊಲೀಸರ ಕಾರ್ಯಾಚರಣೆ

- ಲಕ್ಷಾಂತರ ರೂ. ಮೌಲ್ಯದ ಚಿನ್ನಾಭರಣ, ಬೈಕ್‌ಗಳ ವಶ

ನಾಗಮಂಗಲ, ಜು.15– ಪ್ರತ್ಯೇಕ ಪ್ರಕರಣಗಳಲ್ಲಿ ಒಂಟಿ ಮಹಿಳೆಯರ ಮಾಂಗಲ್ಯ ಸರ, ದೇವಾಲಯಗಳ ಹುಂಡಿ ಹಣ ಕಳವು ಮಾಡುತ್ತಿದ್ದ ಐವರು ಆರೋಪಿಗಳನ್ನು ನಾಗಮಂಗಲ ಮತ್ತು ಬಿಂಡಿಗನವಿಲೆ ಪೊಲೀಸರು ಬಂಧಿಸಿ, ಲಕ್ಷಾಂತರ ರೂ. ಮೌಲ್ಯದ ಚಿನ್ನಾಭರಣ ಮತ್ತು ಬೈಕ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ಮೂವರ ಸೆರೆ: ಕೆ.ಆರ್.ಪೇಟೆ ತಾಲೂಕಿನ ಜಕ್ಕನಹಳ್ಳಿ ನಿವಾಸಿ ಪ್ರದೀಪ್, ಅಕ್ಕಿಹೆಬ್ಬಾಳು ನಿವಾಸಿ ರವಿ ಮತ್ತು ತಿ.ನರಸೀಪುರ ತಾಲೂಕು ಬನ್ನೂರು ನಿವಾಸಿ ಅನಿಲ್ ಬಂಧಿತರು. ಇತ್ತೀಚೆಗೆ ಮುದ್ದಲಿಂಗನಕೊಪ್ಪಲು ಗ್ರಾಮದ ದಂಡಿನದೇವಿ ದೇವಸ್ಥಾನದ ಬಾಗಿಲು ಮುರಿದು ವಿಗ್ರಹದ ಮೇಲಿದ್ದ ಮೂರು ಚಿನ್ನದ ತಾಳಿ, ಹುಂಡಿಯಲ್ಲಿದ್ದ ಹಣ ಕಳುವಾಗಿರುವ ಸಂಬಂಧ ಇಲ್ಲಿನ ಗ್ರಾಮಾಂತರ ಠಾಣೆಯಲ್ಲಿ ದೂರು ದಾಖಲಾಗಿತ್ತು. ಆರೋಪಿಗಳ ಪತ್ತೆಗೆ ವಿಶೇಷ ತಂಡ ರಚಿಸಲಾಗಿತ್ತು. ಕರಿಕ್ಯಾತನಹಳ್ಳಿ ಗ್ರಾಮದ ಬಳಿ ಪೊಲೀಸರು ತಪಾಸಣೆ ನಡೆಸುತ್ತಿದ್ದಾಗ ಅದೇ ದಾರಿಯಲ್ಲಿ ಬಂದ ಪ್ರದೀಪ್, ರವಿ ಮತ್ತು ಅನಿಲ್ ಅವರನ್ನು ಹಿಡಿದು ವಿಚಾರಣೆಗೊಳಪಡಿಸಿದಾಗ ಪ್ರಕರಣ ಬಯಲಿಗೆ ಬಂದಿದ್ದು, ಅವರಿಂದ 125 ಗ್ರಾಂ ಚಿನ್ನ ಮತ್ತು ಮೂರೂವರೆ ಕೆಜಿ ಬೆಳ್ಳಿ, ಕೃತ್ಯಕ್ಕೆ ಬಳಸುತ್ತಿದ್ದ ಬೈಕ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಆರೋಪಿಗಳ ಮೇಲೆ ಬಿಂಡಿಗನವಿಲೆ, ಸ್ಥಳೀಯ ಗ್ರಾಮಾಂತರ ಮತ್ತು ಕೆ.ಆರ್.ಪೇಟೆಯಲ್ಲೂ ಕಳ್ಳತನ ಪ್ರಕರಣ ದಾಖಲಾಗಿದೆ.

ಇಬ್ಬರ ಸೆರೆ: ಮತ್ತೊಂದು ಪ್ರಕರಣದಲ್ಲಿ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.



ಮೇ 28 ರಂದು ಶ್ರೀಮತಿ ಕವಿತ ಶಿಖರನಹಳ್ಳಿ ಗ್ರಾಮದ ತಮ್ಮ ತೋಟದಲ್ಲಿ ಎಮ್ಮೆ ಮೇಯಿಸುತ್ತಿದ್ದಾಗ ಮೋಟಾರ್ ಬೈಕಿನಲ್ಲಿ ಬಂದ ಇಬ್ಬರು ವಿಳಾಸ ಕೇಳುವ ನೆಪದಲ್ಲಿ ಅವರ ಕತ್ತಿನಲ್ಲಿದ್ದ 70 ಗ್ರಾಂ ಚಿನ್ನದ ಸರವನ್ನು ಕಿತ್ತುಕೊಂಡು ಪರಾರಿಯಾಗಿದ್ದು, ಬಿಂಡಿಗನವಿಲೆ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಅದ್ದಿಹಳ್ಳಿ ವೃತ್ತದ ಬಳಿ ಅನುಮಾನಾಸ್ಪದವಾಗಿ ಮೋಟಾರ್ ಬೈಕಿನೊಂದಿಗೆ ನಿಂತಿದ್ದ ಬೆಳ್ಳೂರಿನ ಉಮರ್ ನಗರದ ಸಯ್ಯದ್ ದಾವತ್ ಅಲಿಯಾಸ್ ಆದಿಲ್ ಅಲಿಯಾಸ್ ಆದಿ ಮತ್ತು ತುಮಕೂರು ಜಿಲ್ಲೆ ತುರುವೇಕೆರೆ ತಾಲೂಕಿನ ವಿಠಲಾಪುರ ಗ್ರಾಮದ ಯಶವಂತನಾಯಕ ಎಂಬುವರನ್ನು ಬಿಂಡಿಗನವಿಲೆ ಪೊಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಲಿಂಗರಾಜು ಮತ್ತು ಪ್ರಶಾಂತ್ ಕುಮಾರ್ ಅವರು ಬೈಕಿನ ಸಮೇತ ಕರೆತಂದು ವಿಚಾರಣೆಗೊಳಪಡಿಸಿದಾಗ ಪ್ರಕರಣ ಬಯಲಿಗೆ ಬಂದಿತು. ಆರೋಪಿಗಳಿಂದ ಎರಡು ಲಕ್ಷ ರೂ. ಮೌಲ್ಯದ 70 ಗ್ರಾಂ ಚಿನ್ನದ ಸರ ಮತ್ತು ಕೃತ್ಯಕ್ಕೆ ಬಳಸುತ್ತಿದ್ದ ಹೊಂಡಾ ಡಿಯೋ ದ್ವಿಚಕ್ರ ವಾಹನವನ್ನು ವಶ ಪಡಿಸಿಕೊಂಡರು. ವೃತ್ತ ಆರಕ್ಷಕ ಸುಧಾಕರ್, ಗ್ರಾಮಾಂತರ ಠಾಣೆಯ ಸತೀಶ್, ಪೊಲೀಸ್ ಸಿಬ್ಬಂದಿಗಳಾದ ರಮೇಶ್ ಮತ್ತಿತರರು ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ವಿಶ್ವ ಯುವ ಕೌಶಲ್ಯ ದಿನಾಚರಣೆ

ಸಾಂಪ್ರದಾಯಿಕ ಶಿಕ್ಷಣದೊಂದಿಗೆ ಕೌಶಲ್ಯಾಧಾರಿತ ಜ್ಞಾನವೂ ಅಗತ್ಯ

ಹಿರಿಯ ನ್ಯಾಯಾಧೀಶ ಬಿ.ಎಸ್.ಹೊನ್ನಸ್ವಾಮಿ ಅಭಿಮತ

ಚಾಮರಾಜನಗರ, ಜು.15–ವಿದ್ಯಾರ್ಥಿಗಳಿಗೆ ಸಾಂಪ್ರಾದಾಯಿಕ ಶಿಕ್ಷಣದ ಜೊತೆಗೆ ಕೌಶಲ್ಯ ಆಧಾರಿತ ಶಿಕ್ಷಣ ದೊರೆತಾಗ ಮಾತ್ರ ಅರ್ಹ ಉದ್ಯೋಗ ದೊರೆಯಲು ಸಾಧ್ಯ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಮುಖ್ಯ ನ್ಯಾಯಿಕ ದಂಡಾಧಿಕಾರಿ ಬಿ.ಎಸ್.ಹೊನ್ನಸ್ವಾಮಿ ತಿಳಿಸಿದರು.

ನಗರದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿಂದು ಜಿಲ್ಲಾಡಳಿತ, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು, ಮೂಡಲಧ್ವನಿ ವೃದ್ಧಾಶ್ರಮ ಟ್ರಸ್ಟ್ ಹಾಗೂ ಸಮಷ್ಠಿ ಸಮಗ್ರ ಅಭಿವೃದ್ಧಿ ಟ್ರಸ್ಟ್ ಸಹಯೋಗದೊಂದಿಗೆ ಹಮ್ಮಿಕೊಂಡಿದ್ದ 'ವಿಶ್ವ ಯುವ ಕೌಶಲ್ಯ ದಿನಾಚರಣೆ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.



ವಿದ್ಯಾರ್ಥಿಗಳು ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಉದ್ಯೋಗ ಪಡೆಯಲು ಕೇವಲ ಸಾಂಪ್ರದಾಯಿಕ ಶಿಕ್ಷಣ ಪಡೆದರೆ ಸಾಲದು, ಜೊತೆಗೆ ಕೌಶಲ್ಯ ಆಧಾರಿತ ಶಿಕ್ಷಣವೂ ಅಗತ್ಯವಾಗಿದೆ. ಪ್ರತಿಯೊಬ್ಬ ವಿದ್ಯಾರ್ಥಿಯಲ್ಲೂ ತನ್ನದೇ ಆದ ಪ್ರತಿಭೆ ಇರುತ್ತದೆ. ಸೂಕ್ತ ವೇದಿಕೆ ದೊರೆತಾಗ ಮಾತ್ರ ಪ್ರತಿಭೆ ಹೊರಹೊಮ್ಮಲು ಸಾಧ್ಯ ಎಂದರು.

ಜಿಲ್ಲಾ ಕೌಶಲ್ಯಾಭಿವೃದ್ಧಿ ಇಲಾಖೆಯ ಕೌಶಲ್ಯಾಭಿವೃದ್ಧಿ ಅಧಿಕಾರಿ ಎ.ಮಹಮ್ಮದ್ ಅಕ್ಬರ್ ಮಾತನಾಡಿ, ಕೈಗಾರಿಕೆಗಳಲ್ಲಿ ಉದ್ಯೋಗ ಪಡೆಯಬೇಕಾದರೆ ತಂತ್ರಜ್ಞಾನ ಕುರಿತು ಕೌಶಲ್ಯ ಜ್ಞಾನ ಅಗತ್ಯ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ತಾಂತ್ರಿಕ ಜ್ಞಾನ ಶಿಕ್ಷಣ ಪಡೆಯುವತ್ತ ಆಸಕ್ತಿ ತೋರಬೇಕು. ಪಠ್ಯದ ಜೊತೆಗೆ ತಾಂತ್ರಿಕ ಕೌಶಲ್ಯವನ್ನೂ ಜೀವನದಲ್ಲಿ ಅಳವಡಿಸಿಕೊಂಡರೆ ಜೀವನದ ಪರಿಭಾಷೆ ಬದಲಾಗುತ್ತದೆ ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ನಗರದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ಪ್ರಭಾರ ಪ್ರಾಂಶುಪಾಲ ಟಿ.ಪುಟ್ಟಸ್ವಾಮಿ, ಸಿಡಾಕ್ ಜಂಟಿ ನಿರ್ದೇಶಕ ಮಂಜುನಾಥ್‌ಸ್ವಾಮಿ, ಜಿಲ್ಲಾ ಕೌಶಲ್ಯಾಭಿವೃದ್ಧಿ ಇಲಾಖೆಯ ಡೇ ನಲ್ಮ್ ನಗರ ಅಭಿಯಾನ ವ್ಯವಸ್ಥಾಪಕ ಹಮ್‌ಜತ್ ಪಾಷ, ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನ ನಿಯೋಜನಾಧಿಕಾರಿ ಆರ್.ಮಲ್ಲೇಶ್, ಜಿಲ್ಲಾ ಕೌಶಲ್ಯಾಭಿವೃದ್ಧಿ ಇಲಾಖೆ ಸಂಯೋಜಕ ಡಿ.ನಾಗರಾಜು, ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಸಮಾಲೋಚಕರು ಮತ್ತು ಟ್ರೈನರ್ ವಿನೋದ್‌ಕುಮಾರ್, ಸಮಷ್ಠಿ ಜಾಬ್ ಪೋರ್ಟಲ್ ವ್ಯವಸ್ಥಾಪಕ ನಿರ್ದೇಶಕ ಎಂ.ಸಿದ್ದರಾಜು, ಸಮಷ್ಠಿ ಸಮಗ್ರ ಅಭಿವೃದ್ಧಿ ಟ್ರಸ್ಟ್ ಕಾರ್ಯನಿರ್ವಾಹಕ ಗಂಗಾಧರ್‌ಸ್ವಾಮಿ, ಮೂಡಲಧ್ವನಿ ವೃದ್ಧಾಶ್ರಮ ಟ್ರಸ್ಟ್‌ನ ಅಧ್ಯಕ್ಷ ಶಂಕರ್ ಇತರರಿದ್ದರು.

ಧನಗೆರೆ ಗ್ರಾಪಂಗೆ ರೈತ ಸಂಘ ಮುತ್ತಿಗೆ

ಕೊಳ್ಳೇಗಾಲ,ಜು.15–ಆಡಳಿತ ಅವ್ಯವಸ್ಥೆ, ಮೂಲಸೌಕರ್ಯ ಕೊರತೆ ಹಾಗೂ ಅಧಿಕಾರಿಗಳ ನಿರ್ಲಕ್ಷ್ಯ ಧೋರಣೆ ಖಂಡಿಸಿ ತಾಲೂಕಿನ ಧನಗೆರೆ ಗ್ರಾಪಂಗೆ ರೈತ ಸಂಘದ ಕಾರ್ಯಕರ್ತರು ಮುತ್ತಿಗೆ ಹಾಕಿ ಪ್ರತಿಭಟಿಸಿದರು.

ಗ್ರಾಪಂ ಮುಂಭಾಗ ಜಮಾಯಿಸಿದ ಪ್ರತಿಭಟನಾಕಾರರು, ಗ್ರಾಪಂ ಆಡಳಿತ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ರೈತ ಸಂಘದ ಹಿರಿಯ ಹೋರಾಟಗಾರ ಅಣಗಳ್ಳಿ ಬಸವರಾಜು, ಈ ಪಂಚಾಯಿತಿಯಲ್ಲಿ ಅನೇಕ ಭ್ರಷ್ಟಾಚಾರ ನಡೆದಿದ್ದು, ಹಿಂದೆ ಲೋಕಾಯುಕ್ತರ ಪ್ರವೇಶವಾಗಿದೆ. ಗ್ರಾಪಂ ಕೆಲ ಸದಸ್ಯರು, ಜನಪ್ರತಿನಿಧಿಗಳು ಸಹ ಶಿಕ್ಷೆಗೊಳಗಾಗಿದ್ದಾರೆ. ಆಗಿದ್ದರೂ ಗ್ರಾಪಂ ಆಡಳಿತ ಸುಧಾರಣೆಯಾಗಿಲ್ಲ. ಗ್ರಾಮದಲ್ಲಿ ಅಭಿವೃದ್ಧಿ ಕಾರ್ಯಗಳು ನಡೆದಿಲ್ಲ. ಮೂಲ ಸೌಕರ್ಯ ಸಮಸ್ಯೆಗಳ ತಾಂಡವವಾಡುತ್ತಿವೆ ಎಂದು ಕಿಡಿಕಾರಿದರು.

ಕಸವಿಲೇವಾರಿ ವಾಹನ ಇದ್ದರೂ ನಿರುಪಯುಕ್ತವಾಗಿದೆ. ಗ್ರಾಮಸ್ಥರಿಗೆ ನೀರು ಪೂರೈಕೆಯಾಗುತ್ತಿರುವ ತೊಂಬೆ ಕಲುಷಿತವಾಗಿದ್ದು, ಕುಡಿಯಲು ಯೋಗ್ಯವಲ್ಲ. 3 ವರ್ಷದಿಂದ ಇ–ಸ್ವತ್ತು ನೀಡದೆ ಜನರನ್ನು ಅಲೆಸಲಾಗುತ್ತಿದೆ. ಶೌಚಾಲಯ ನಿರ್ಮಿಸಿ 2 ವರ್ಷವಾದರೂ ಫಲಾನುಭವಿಗಳಿಗೆ ಬಿಲ್ ನೀಡಿಲ್ಲ. ಮನೆ ವಿತರಣೆಯಲ್ಲೂ ಲೋಪವಾಗುತ್ತಿದೆ. ಗ್ರಾಮದ ಮುಖ್ಯರಸ್ತೆ ಹದಗೆಟ್ಟಿದ್ದು, ಸರಣಿ ಅಪಘಾತಗಳು ಸಂಭವಿಸುತ್ತಿವೆ ಅಲ್ಲದೆ. ಗ್ರಾಮದಲ್ಲಿ ಸ್ವಚ್ಛತೆ ಇಲ್ಲವಾಗಿದೆ ಎಂದು ಗ್ರಾಪಂ ಅಧಿಕಾರಿಗಳನ್ನು ತರಾಟೆ ತೆಗೆದುಕೊಂಡರು.



ಪ್ರತಿಭಟನಾ ಸ್ಥಳಕ್ಕೆ ಆಗಮಿಸಿ ಅಹವಾಲು ಸ್ವೀಕರಿಸಿದ ಜಿಪಂ ಉಪ ಕಾರ್ಯದರ್ಶಿ ಗೂಡುರು ಭೀಮಸೇನಾ ಮಾತನಾಡಿ, ಶೌಚಾಲಯದ ಬಿಲ್ ಹಾಗೂ ಇ–ಸ್ವತ್ತು ವಿತರಣೆಗೆ ಅಗತ್ಯ ಕ್ರಮ ವಹಿಸಲಾಗುವುದು. ಗ್ರಾಪಂ ವ್ಯಾಪ್ತಿಯ 7 ಗ್ರಾಮಗಳ ರಸ್ತೆ ಅಭಿವೃದ್ಧಿ ಹಾಗೂ ಇನ್ನಿತರೆ ಸಮಸ್ಯೆ ನಿವಾರಣೆಗೆ ಕ್ರಮವಹಿಸುವುದಾಗಿ ಭರವಸೆ ನೀಡಿದ ಹಿನ್ನೆಲೆ ಪ್ರತಿಭಟನೆ ಹಿಂಪಡೆಯಲಾಯಿತು.

ಇದಕ್ಕೂ ಮುನ್ನ ಗ್ರಾಮದ ಮುಖ್ಯರಸ್ತೆ ಅವ್ಯವಸ್ಥೆ ಖಂಡಿಸಿ ಕೆಲಕಾಲ ರಸ್ತೆಯಲ್ಲೇ ಧರಣಿ ನಡೆಸಿದರು. ಈ ಸಂದರ್ಭದಲ್ಲಿ ತಾಪಂ ಇಓ ಮಹೇಶ್, ಗೋಪಾಲಕೃಷ್ಣ ಪಿಡಿಓ ರಂಗರಾಜು, ಅಧ್ಯಕ್ಷೆ ಭಾಗ್ಯಮ್ಮ, ಉಪಾಧ್ಯಕ್ಷ ಮುತ್ತುರಾಜು, ರೈತ ಸಂಘದ ತಾಲೂಕು ಅಧ್ಯಕ್ಷ ಮುಳ್ಳೂರು ಷಣ್ಮುಖಸ್ವಾಮಿ, ರಾಮಕೃಷ್ಣ, ನಿರಂಜನ್‌ಮೂರ್ತಿ, ತೇರಂಬಳ್ಳಿ ಮಹದೇವಪ್ಪ, ರಾಚಪ್ಪ, ಗೌರಮ್ಮ, ಸರಗೂರು ಮಹದೇವ್, ನಿಂಗರಾಜು, ಮಹದೇವ ಆರಾಧ್ಯ, ವೀರಭದ್ರಸ್ವಾಮಿ, ಸಿದ್ದರಾಜು ಇದ್ದರು.

ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಗ್ರಾಪಂ ನೌಕರರ ಪ್ರತಿಭಟನೆ

ಚಾಮರಾಜನಗರ, ಜು.15– ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಜಿಲ್ಲೆಯ ಗ್ರಾಮ ಪಂಚಾಯಿತಿ ನೌಕರರು ನಗರದಲ್ಲಿ ಶುಕ್ರವಾರ ಪ್ರತಿಭಟಿಸಿದರು.

ಇಲ್ಲಿನ ಜಿಲ್ಲಾಡಳಿತ ಭವನದ ಮುಂಭಾಗ ಜಮಾಯಿಸಿದ ನೌಕರರು, ಘೋಷಣೆಗಳನ್ನು ಕೂಗಿ ತಮ್ಮ ನ್ಯಾಯಸಮ್ಮತವಾದ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿದರು.

ಗ್ರಾಪಂ ನೌಕರರಾದ ತಮಗೆ ಕನಿಷ್ಠ ವೇತನ ಜಾರಿಗೊಳಿಸಬೇಕು. ಬಿಲ್ ಕಲೆಕ್ಟರ್‌ಗಳು, ಡಾಟಾ ಎಂಟ್ರಿ ಆಪರೇಟರ್‌ಗಳು, ವಾಟರ್‌ಮೆನ್, ಪಂಪ್ ಆಪರೇಟರ್‌ಗಳು, ಅಟೆಂಡರ್‌ಗಳು ಹಾಗೂ ಸ್ವಚ್ಛತಾಗಾರರಿಗೆ ಸಮರ್ಪಕ ವೇತನ ನೀಡುವಂತೆ ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಜಿಲ್ಲೆಯ ಗ್ರಾಪಂ ನೌಕರರು, ಸಿಬ್ಬಂದಿ ಭಾಗವಹಿಸಿದ್ದರು.



ಹುಲಿ ದಾಳಿಗೆ ಹಸು ಬಲಿ

ಬೇಗೂರು, ಜು.15– ಹುಲಿ ದಾಳಿಗೆ ಹಸು ಬಲಿಯಾಗಿರುವ ಘಟನೆ ಗುಂಡ್ಲುಪೇಟೆ ತಾಲೂಕಿನ ಶಿವಕುಮಾರಪುರ(ಕುರುಬರಹುಂಡಿ)ದಲ್ಲಿ ನಡೆದಿದೆ.

ಗ್ರಾಮದ ಮಹೇಶ್ ಅವರು ಜಮೀನಿನಲ್ಲಿ ಹಸುವನ್ನು ಮೇಯಲು ಬಿಟ್ಟಿದ್ದ ಸಂದರ್ಭ ದಾಳಿ ನಡೆಸಿ ಕೊಂದು ಹಾಕಿದೆ ಇದರಿಂದ ಹಸುವನ್ನೇ ನಂಬಿ ಜೀವನ ಸಾಗಿಸುತ್ತಿದ್ದ ಮಹೇಶ್ ಕಂಗಾಲಾಗಿದ್ದಾರೆ. ಹೊರೆಯಾಲ, ಕೋಟೆಕೆರೆ, ಚನ್ನವಡೆಯನಪುರ, ವಣಕನಪುರ, ಹೊಸಪುರ, ಯಡವನಹಳ್ಳಿ ಗ್ರಾಮಗಳಲ್ಲಿ ಹುಲಿ, ಚಿರತೆ ಹಾವಳಿ ಹೆಚ್ಚಾಗಿದ್ದು, ಸೆರೆಗಾಗಿ ಅರಣ್ಯ ಇಲಾಖೆ ಬೋನ್ ಇಡುವಂತೆ ಈ ಭಾಗದ ರೈತರು ಆಗ್ರಹಿಸಿದ್ದಾರೆ. ಸ್ಥಳಕ್ಕೆ ಓಂಕಾರ ಉಪವಲಯ ಅರಣ್ಯ ಅಧಿಕಾರಿ ಅಮರ್ ಭೇಟಿ ನೀಡಿ, ಪರಿಶೀಲಿಸಿದರು.

ರಾಜಣ್ಣ ನಿಧನ

ಚಾಮರಾಜನಗರ, ಜು.15– ನಗರದ ಪ್ರಾದೇಶಿಕ ಸಾರಿಗೆ ಕಚೇರಿ(ಆರ್‌ಟಿಓ)ಯಲ್ಲಿ 'ಡಿ' ಗ್ರೂಪ್ ನೌಕರರಾಗಿದ್ದ ಕೊಳ್ಳೇಗಾಲ ತಾಲೂಕಿನ ಕಜ್ಜಿಹುಂಡಿ ಗ್ರಾಮದ ನಿವಾಸಿ ರಾಜಣ್ಣ(59) ಶುಕ್ರವಾರ ಮಧ್ಯಾಹ್ನ ನಿಧನರಾದರು. ಮೃತರು ಪತ್ನಿ, ಪುತ್ರ–ಪುತ್ರಿ, ಬಂಧು–ಬಳಗ ಅಗಲಿದ್ದಾರೆ.



ಅಂತ್ಯಕ್ರಿಯೆ ಶನಿವಾರ ಮೃತರ ಸ್ವಗ್ರಾಮ ಕಜ್ಜಿಹುಂಡಿಯಲ್ಲಿ ನಡೆಯಲಿದೆ. ರಾಜಣ್ಣ ನಿಧನಕ್ಕೆ ನಗರದ ಆರ್‌ಟಿಓ ಅಧಿಕಾರಿಗಳು, ಸಿಬ್ಬಂದಿವರ್ಗ ಸಂತಾಪ ಸೂಚಿಸಿದ್ದಾರೆ.

ಅಮಾಯಕರಿಗೆ ಸಿನಿಮೀಯ ರೀತಿ ವಂಚಿಸಿದ ನಕಲಿ ಆರ್‌ಟಿಓ ಬ್ರೇಕ್ ಇನ್ಸ್‌ಪೆಕ್ಟರ್

● ಆರ್‌ಟಿಓ ಇನ್ಸ್‌ಪೆಕ್ಟರ್, ಚಾಲಕನ ಹುದ್ದೆ ಕೊಡಿಸುವುದಾಗಿ 18.58 ಲಕ್ಷ ವಂಚನೆ ● ಮೈಸೂರು ಅಶೋಕ ರಸ್ತೆಯಲ್ಲಿ ಯೂನಿಫಾರಂ ಕೊಡಿಸಿ, ಧರಿಸಿ ಹೋದವರಿಗೆ ಮೋಸ ಹೋಗಿರುವುದು ಬಟಾಬಯಲು

ಹುಣಸೂರು, ಜು.15–ತನ್ನನ್ನು ಆರ್‌ಟಿಓ ಬ್ರೇಕ್ ಇನ್ಸ್‌ಪೆಕ್ಟರ್ ಎಂದು ಪರಿಚಯಿಸಿಕೊಂಡು ಆರ್‌ಟಿಓ ಕಚೇರಿಯಲ್ಲಿ ಕೆಲಸ ಕೊಡಿಸುವುದಾಗಿ ನಂಬಿಸಿ, ನಕಲಿ ನೇಮಕಾತಿ ಪತ್ರ ನೀಡಿ 18.58 ಲಕ್ಷ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ.

ಹೆಚ್.ಡಿ.ಕೋಟೆ ತಾಲೂಕು ಅಣ್ಣೂರು ಗ್ರಾಮದ ಆಕಾಶ್, ನಕಲಿ ನೇಮಕಾತಿ ಪತ್ರ ನೀಡಿ ವಂಚಿಸಿದವನಾಗಿದ್ದು, ಹಾಸನ ಜಿಲ್ಲೆ ಅರಕಲಗೂಡು ತಾಲೂಕು ಕಳ್ಳಿಮುದ್ದನಹಳ್ಳಿ ನಿವಾಸಿ ಕೆಎಸ್‌ಆರ್‌ಟಿಸಿ ಕಂಡಕ್ಟರ್ ರಂಗಸ್ವಾಮಿ, ಸಹೋದರ ಕಾರು ಚಾಲಕ ಶಂಕರ ಮತ್ತು ಸಂಬಂಧಿಕ ಅಶೋಕ್ ವಂಚನೆಗೊಳಗಾದವರು.

ವಿವರ: ಪಿರಿಯಾಪಟ್ಟಣ ಕೆಎಸ್‌ಆರ್‌ಟಿಸಿ ಡಿಪೋ ಬಸ್ ಕಂಡಕ್ಟರ್ ರಂಗಸ್ವಾಮಿ ಮಲೆಮಹದೇಶ್ವರ ಬೆಟ್ಟಕ್ಕೆ ಬಸ್‌ನಲ್ಲಿ ಹೋಗುತ್ತಿದ್ದಾಗ 2021ರ ಅಕ್ಟೋಬರ್‌ನಲ್ಲಿ ಪರಿಚಯವಾದ ಆಕಾಶ್, ತನ್ನನ್ನು ಚಾಮರಾಜನಗರ ಆರ್‌ಟಿಓ ಕಚೇರಿಯ ಬ್ರೇಕ್ ಇನ್ಸ್‌ಪೆಕ್ಟರ್ ಎಂದು ಪರಿಚಯಿಸಿಕೊಂಡಿದ್ದಾನೆ. ಅಲ್ಲದೇ ತನಗೆ ಹಿರಿಯ ಅಧಿಕಾರಿಗಳು ಹಾಗೂ ನೇಮಕಾತಿ ಪ್ರಾಧಿಕಾರದ ಅಧಿಕಾರಿಗಳೂ ಆಪ್ತರಾಗಿದ್ದಾರೆ. ನೀವು ಬಸ್ ಕಂಡಕ್ಟರ್ ಆಗಿ ಕೆಲಸ ಮಾಡುವ ಬದಲು ಆರ್‌ಟಿಓ ಇನ್ಸ್‌ಪೆಕ್ಟರ್ ಆಗಿ ಕೆಲಸಕ್ಕೆ ಸೇರಬಹುದಲ್ಲವೇ ಎಂದು ಆಸೆ ತೋರಿಸಿದ್ದಾನೆ. ಜೊತೆಗೆ ನಿಮ್ಮ ಕಡೆಯವರಿಗೆ ಸರ್ಕಾರಿ ಕೆಲಸ ಬೇಕೆಂದರೆ ಕೊಡಿಸುತ್ತೇನೆ ಎಂದು ತಿಳಿಸಿ ಮೊಬೈಲ್ ನಂಬರ್ ನೀಡಿದ್ದಾನೆ.

ಕಾರು ಚಾಲಕನಾಗಿರುವ ರಂಗಸ್ವಾಮಿ ಸಹೋದರ ಶಂಕರ, ಕೆಎಸ್‌ಆರ್‌ಟಿಸಿ ಬಸ್ ಚಾಲಕನಾಗಬಹುದು ಎಂದು ಬಯಸಿ ಆಕಾಶ್‌ನನ್ನು ಸಂಪರ್ಕಿಸಿದ್ದಾರೆ. ಡಿಸೆಂಬರ್‌ನಲ್ಲಿ ಅವರ ಮನೆಗೂ ತೆರಳಿದ ಆಕಾಶ್, ರಂಗಸ್ವಾಮಿಯವರ ತಂದೆ–ತಾಯಿಯನ್ನು ಭೇಟಿ ಮಾಡಿ ನಿಮ್ಮ ಮಕ್ಕಳಿಗೆ ಸರ್ಕಾರಿ ಕೆಲಸ ಕೊಡಿಸುತ್ತೇನೆಂದು ನಂಬಿಸಿದ್ದಾನೆ. ಕೊನೆಗೆ ರಂಗಸ್ವಾಮಿ ಮತ್ತು ಅವರ ಸಂಬಂಧಿಕ ಅಶೋಕ್‌ಗೆ ಆರ್‌ಟಿಓ ಇನ್ಸ್‌ಪೆಕ್ಟರ್ ಕೆಲಸ ಹಾಗೂ ಶಂಕರನಿಗೆ ಆರ್‌ಟಿಓ ಕಚೇರಿಯಲ್ಲಿ ಚಾಲಕನ ಕೆಲಸವನ್ನು ಕೊಡಿಸುವುದಾಗಿ ನಂಬಿಸಿದ ಆತ, 2021ರ ಡಿ.12ರಂದು ಹುಣಸೂರಿನ ಬಾಲಾಜಿ ಪ್ಯಾಲೇಸ್ ಹೋಟೆಲ್‌ನಲ್ಲಿ ಈ ಮೂವರಿಂದ ಒಟ್ಟು 16 ಲಕ್ಷ ರೂ. ಪಡೆದಿದ್ದಾನೆ. ಮೂರು ದಿನಗಳ ನಂತರ ಮೂವರಿಗೂ ನೇಮಕಾತಿ ಪತ್ರ ಮತ್ತು ಐಡಿ ಕಾರ್ಡ್‌ಗಳನ್ನು ಕೊಟ್ಟು ಅವರನ್ನು ಮೈಸೂರಿಗೆ ಕರೆತಂದು ಲಷ್ಕರ್ ಠಾಣೆ ಸಮೀಪವಿರುವ ಅಂಗಡಿಯೊಂದರಲ್ಲಿ ಆರ್‌ಟಿಓ ಇನ್ಸ್‌ಪೆಕ್ಟರ್ ಸಮವಸ್ತ್ರ ಕೊಡಿಸಿದ ನಂತರ ಅವರಿಂದ ಮತ್ತೆ 2.58 ಲಕ್ಷ ರೂ. ಪಡೆದಿದ್ದಾನೆ.

ಆರ್‌ಟಿಓ ಕಚೇರಿಯಲ್ಲಿ ಕೆಲಸ ಸಿಕ್ಕಿದೆ ಎಂಬ ಖುಶಿಯಿಂದ ಚಾಮರಾಜನಗರಕ್ಕೆ ಮೂವರೂ ತೆರಳಿದಾಗ ಅಲ್ಲಿನ ಅಧಿಕಾರಿಗಳು ನೇಮಕಾತಿ ಪತ್ರ ಮತ್ತು ಬ್ಯಾಡ್ಜ್ ನಕಲಿ ಎಂದು ತಿಳಿಸಿದ್ದಾರೆ. ಈ ಸಂಬಂಧ ಶಂಕರ್ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಹುಣಸೂರು ಟೌನ್ ಠಾಣೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಮಾದಪ್ಪ ಹುಂಡಿ ಹಣ ಎಣಿಕೆ ವೇಳೆ 40 ಸಾವಿರ ಕಳವು: ಗುತ್ತಿಗೆ ನೌಕರನ ಬಂಧನ



ಮಹದೇಶ್ವರಬೆಟ್ಟ, ಜು.15–ಮಲೆಮಹದೇಶ್ವರಸ್ವಾಮಿ ಬೆಟ್ಟದಲ್ಲಿ ಹುಂಡಿ ಎಣಿಕೆ ಮಾಡುವಾಗ 40 ಸಾವಿರ ರೂ. ಕಳವು ಮಾಡಿದ್ದ ಗುತ್ತಿಗೆ ನೌಕರನೋರ್ವನನ್ನು ಮಹದೇಶ್ವರಬೆಟ್ಟ ಠಾಣೆ ಪೊಲೀಸರು ಬಂಧಿಸಿದ್ದಾರೆ. ಮಹದೇಶ್ವರಬೆಟ್ಟದ ನಿವಾಸಿ ಗುತ್ತಿಗೆ ನೌಕರ ಪನ್ನೀರ್ ಸೆಲ್ವಂ(23) ಬಂಧಿತನಾಗಿದ್ದು, ಜುಲೈ 14ರಂದು ಮಲೆಮಹದೇಶ್ವರಬೆಟ್ಟದ ವಾಣಿಜ್ಯ ಸಂಕೀರ್ಣ ಮಳಿಗೆಯ ಮೊದಲ ಮಹಡಿಯಲ್ಲಿ ನಡೆಯುತ್ತಿದ್ದ ಹುಂಡಿ ಎಣಿಕೆ ಕಾರ್ಯದಲ್ಲಿ ಈತನೂ ಕೂಡ ತೊಡಗಿಕೊಂಡಿದ್ದ. ಆದರೆ ಪದೇ ಪದೆ ಈತ ಹುಂಡಿ ಎಣಿಕೆ ಕೊಠಡಿಯಿಂದ ಹೊರ ಹೋಗಿ ಶೌಚಾಲಯದಲ್ಲಿರುವ ಉಗ್ರಾಣ ಕೊಠಡಿಗೆ ಹೋಗಿ ಬರುತ್ತಿದ್ದ. ಈತನ ಮೇಲೆ ಅನುಮಾನಗೊಂಡ ಭದ್ರತೆಗಿದ್ದ ಪೊಲೀಸ್ ಕಾನ್ಸ್‌ಟೇಬಲ್ ಬಂಗಾರು ಎಂಬುವರು ಉಗ್ರಾಣ ಕೊಠಡಿಯಲ್ಲಿ ಆತನನ್ನು ಹಿಡಿದು ತಪಾಸಣೆ ನಡೆಸಿದಾಗ 40 ಸಾವಿರ ರೂ.ಗಳು ದೊರೆತಿದೆ. ಆನಂತರ ಸಿಸಿ ಕ್ಯಾಮರಾ ಪರಿಶೀಲನೆ ನಡೆಸಿದ ವೇಳೆ ಪನ್ನೀರ್ ಸೆಲ್ವಂ ಹಣವನ್ನು ಜೇಬಿಗೆ ಹಾಕಿಕೊಳ್ಳುತ್ತಿರುವ ದೃಶ್ಯಗಳು ಕಂಡುಬಂದಿದೆ. ಈ ಹಿನ್ನೆಲೆಯಲ್ಲಿ ಮಲೆಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರಿ ಉಪ ಕಾರ್ಯದರ್ಶಿ ಬಸವರಾಜಪ್ಪ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಮಹದೇಶ್ವರಬೆಟ್ಟ ಠಾಣೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಒಂದನೇ ಪುಟದಿಂದ

ನಮಗೆ ಶಾಂತಿ ಬೇಕು...

ಹಲವು ವಾಹನಗಳು ಜಖಂಗೊಂಡಿದ್ದವು. ಕೆರೂರು ಪಟ್ಟಣದಲ್ಲಿ ಸೆಕ್ಷನ್ 144 ಜಾರಿ ಮಾಡಿ ನಿಷೇಧಾಜ್ಞೆ ಹೇರಲಾಗಿತ್ತು. ಘಟನೆಯಲ್ಲಿ ನಾಲ್ವರು ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇಂದು ಕ್ಷೇತ್ರದ ಶಾಸಕರಾಗಿರುವ ಸಿದ್ದರಾಮಯ್ಯ ಗಾಯಗೊಂಡಿದ್ದವರನ್ನು ಆಸ್ಪತ್ರೆಯಲ್ಲಿ ಭೇಟಿ ಮಾಡಿ ಅವರ ಕುಟುಂಬಸ್ಥರಿಗೆ ಪರಿಹಾರ ಹಣ ನೀಡಲು ಹೋಗಿದ್ದರು. ಹಲ್ಲೆಯಲ್ಲಿ ಗಾಯಗೊಂಡಿದ್ದ ಹನೀಫ್, ರಫೀಕ್ ಸೇರಿದಂತೆ ನಾಲ್ವರಿಗೆ ಸಾಂತ್ವನ ಹೇಳಿ ತಲಾ 50 ಸಾವಿರ ರೂ.ಗಳಂತೆ 2 ಲಕ್ಷ ರೂ. ನೀಡಿದ್ದರು. ಆಗ ರಫೀಕ್ ಸೋದರಿ ರಜ್ಮಾ, ನಮಗೆ ದುಡ್ಡು ಬೇಡ, ನಾವು ಕಷ್ಟಪಟ್ಟು ಕೆಲಸ ಮಾಡಿ ಜೀವನ ನಡೆಸುತ್ತೇವೆ. ನಮಗೆ ಶಾಂತಿ ಬೇಕು, ನಮ್ಮನ್ನು ನಮ್ಮ ಪಾಡಿಗೆ ಶಾಂತಿಯಿಂದ ಬದುಕಲು ಬಿಡಿ ಎಂದು ಕಾರಿನತ್ತ ಬಿಸಾಕಿದರು. ಸಿದ್ದರಾಮಯ್ಯನವರು ಮಹಿಳೆಯನ್ನು ಸಮಾಧಾನ ಮಾಡುವ ಪ್ರಯತ್ನ ಮಾಡಿದರು. ಆದರೆ ಮಹಿಳೆಯರು ಸಮಾಧಾನಕ್ಕೆ ಬಗ್ಗಲಿಲ್ಲ. ಮಹಿಳೆಗೆ ಇದು ಸರ್ಕಾರದ ದುಡ್ಡಲ್ಲ, ನಾನು ವೈಯಕ್ತಿಕವಾಗಿ ಕೊಡುತ್ತಿದ್ದೇನೆ ಎಂದು ಹೇಳಿದರೂ ಮಹಿಳೆ ಕೇಳುವ ಸ್ಥಿತಿಯಲ್ಲಿರಲಿಲ್ಲ.

ಮಹಿಳೆ ಹೇಳುವುದೇನು: ಘಟನೆ ನಡೆದು ಇಷ್ಟು ದಿನಗಳಾದ ಮೇಲೆ ಬರುತ್ತಿದ್ದಾರೆ, ಅವರ ದುಡ್ಡು ಯಾರಿಗೆ ಬೇಕು, ನಮ್ಮ ಕಷ್ಟ ಕೇಳುವವರು ಯಾರು ಎಂದು ಮಹಿಳೆ ಆಕ್ರೋಶ ವ್ಯಕ್ತಪಡಿಸಿದರು. ನಮಗೆ ಯಾರ ಪರಿಹಾರವೂ ಬೇಡ. ಈ ರೀತಿಯ ಗಲಭೆಗಳು ಮತ್ತೆ ನಡೆಯದಂತೆ ನೋಡಿಕೊಳ್ಳಬೇಕು. ನಮಗೆ ಬಂದ ಪರಿಸ್ಥಿತಿ ಯಾವ ಹಿಂದೂ, ಮುಸ್ಲಿಮರಿಗೂ ಬರಬಾರದು. ಒಂದು ವೇಳೆ ಈ ಘಟನೆಯಲ್ಲಿ ನಮ್ಮದು ತಪ್ಪು ಎಂದು ತಿಳಿದುಬಂದರೆ ಕುಟುಂಬ ಸಮೇತ ನಾವು ಪೊಲೀಸರಿಗೆ ಶರಣಾಗುತ್ತೇವೆ ಎಂದು ಸಹ ಮಹಿಳೆಯರು ಹೇಳಿದರು.

ಜನಪರ ತೀರ್ಮಾನಕ್ಕೈಗೊಳ್ಳಿ

ಮತ್ತು ಗ್ರಾಮೀಣ ಪ್ರದೇಶ ಗಳಲ್ಲಿ ನೆನೆಗುದಿಗೆ ಬಿದ್ದಿರುವ ಅಕ್ರಮ ಮನೆ, ನಿವೇಶನಗಳನ್ನು ಸಕ್ರಮಗೊಳಿಸುವ ಕಾರ್ಯ ತಕ್ಷಣ ಕೈಗೆತ್ತಿಕೊಳ್ಳಿ. ಅರಣ್ಯ ಭೂಮಿಯಲ್ಲಿ ಉಳುಮೆ ಮಾಡುತ್ತಿರುವವರಿಗೆ ಹಕ್ಕುಪತ್ರ ಕಲ್ಪಿಸಿ, ಎಷ್ಟು ಸಾಧ್ಯವೋ ಅಷ್ಟು ಮನೆಗಳನ್ನು ಬಡವರಿಗೆ ನಿರ್ಮಿಸಿಕೊಡಿ. ಅಕ್ರಮ ಸಕ್ರಮ ಮಾಡುವುದರಿಂದ ಸರ್ಕಾರದ ಬೊಕ್ಕಸಕ್ಕೂ ಮತ್ತು ಸ್ಥಳೀಯ ಸಂಸ್ಥೆಗಳಿಗೂ ಸಾವಿರಾರು ಕೋಟಿ ರೂ. ಹಣ ಬರುತ್ತದೆ. ಜನರಿಗೂ ಒಂದು ಬಾರಿಗೆ ನೆಮ್ಮದಿ ದೊರೆತಂತಾಗುತ್ತದೆ. ಅರಣ್ಯ ಭೂಮಿ ಒತ್ತುವರಿ ಮಾಡುತ್ತಿರುವವರಿಗೆ ಹಕ್ಕುಪತ್ರ ನೀಡುವ ಕಾರ್ಯಕ್ಕೆ ಚಾಲನೆ ನೀಡಿ. ಇಂತಹ ಜನಪರ ಯೋಜನೆಗಳು ಕಡತದಲ್ಲಿ ಕೊಳೆಯುತ್ತಿವೆ. ಅವುಗಳ ಧೂಳು ಹೊಡೆದು ಅನುಷ್ಠಾನಗೊಳಿಸಿ, ಇದರಿಂದ ಸರ್ಕಾರದ ವರ್ಚಸ್ಸು ಹೆಚ್ಚುತ್ತದೆ. ಸರ್ಕಾರದ ವರ್ಚಸ್ಸು ಹೆಚ್ಚಿದರೆ, ಪಕ್ಷದ ವರ್ಚಸ್ಸು ತಾನಾಗಿಯೇ ಹೆಚ್ಚಾಗುತ್ತದೆ.

ಬಹುತೇಕ ಸಚಿವರು ಕ್ಷೇತ್ರ, ಜಿಲ್ಲೆಗೆ ಸೀಮಿತರಾಗಿದ್ದೀರಿ.ರಾಜ್ಯವನ್ನು ಒಂದು ಬಾರಿಯು ಸುತ್ತಾಡಿಲ್ಲ. ಇನ್ನು ಕಾರ್ಯಕ್ರಮಗಳನ್ನು ಎಲ್ಲಿಂದ ಅನುಷ್ಠಾನಕ್ಕೆ ತರುತ್ತೀರಿ. ಸಚಿವರಾಗ ಬೇಕೆಂದಿರುವ ಆಸಕ್ತಿ ನಂತರ ಯಾಕೆ ಇರುವುದಿಲ್ಲ. ಇನ್ನು ಸಮಯವಿಲ್ಲ. ಇರುವ ವೇಳೆಯನ್ನು ಬಳಕೆ ಮಾಡಿ, ಕಾರ್ಯಕ್ರಮ ರೂಪಿಸಿ, ಜನರ ಬಳಿಗೆ ತೆರಳಿ.

ಕೆಲವು ಇಲಾಖೆಗಳಲ್ಲಿ ಭ್ರಷ್ಟಾಚಾರದ ಆರೋಪಗಳ ಸುರಿಮಳೆ ಬರುತ್ತಿದೆ. ಇದಕ್ಕೆ ಯಾರು ಕಾರಣರು. ನೀವು ಸಮರ್ಥರಿದ್ದರೆ, ಇಂತಹ ಆರೋಪಗಳು ಬರುವುದಿಲ್ಲ. ಪ್ರತಿಪಕ್ಷಗಳು ಇರುವುದೇ ಆರೋಪ ಮಾಡುವುದಕ್ಕೆ, ಅದನ್ನು ನಿಭಾಯಿಸುವ ಶಕ್ತಿಯು ನಿಮಗಿರಬೇಕು. ನಮ್ಮ ಪಕ್ಷದ ಶಾಸಕರ ಅರ್ಜಿಗಳಿಗೆ ನಿಮ್ಮಿಂದ ಮನ್ನಣೆ ಸಿಗುತ್ತಿಲ್ಲವಂತೆ, ಹೀಗಾದರೆ ಹೇಗೆ, ಮುಂದೆ ಅವರು ಚುನಾವಣೆ ಎದುರಿಸಬೇಕು. ಕ್ಷೇತ್ರದ ಜನರಿಗೆ ಉತ್ತರದಾಯಕರಾಗಬೇಕು. ಅಧಿಕಾರದಲ್ಲಿರುವವರು ಅವರ ಕೆಲಸ ಮಾಡಲಿಲ್ಲ ಎಂದರೆ ಹೇಗೆ ಎಂದು ಸಚಿವರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ರಾಷ್ಟ್ರೀಯ ಸಂಘಟನಾ ಕಾರ್ಯ ದರ್ಶಿ ಸಂತೋಷ್ ಹಾಗೂ ರಾಜ್ಯ ಉಸ್ತುವಾರಿ ಅರುಣ್ ಅವರ ಮಾರ್ಗದರ್ಶನದಲ್ಲೇ ನಡೆಯುತ್ತಿದೆ. ಸಭೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ರಾಜ್ಯ ಉಸ್ತುವಾರಿ ಹೊಣೆ ಹೊತ್ತ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್, ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪ, ಜಗದೀಶ್ ಶೆಟ್ಟರ್, ಡಿ.ವಿ. ಸದಾನಂದಗೌಡ, ರಾಜ್ಯಾಧ್ಯಕ್ಷ ನಳೀನ್‌ಕುಮಾರ್ ಕಟೀಲ್, ಸಂಪುಟದ ಸದಸ್ಯರುಗಳು, ಆಯ್ದ ಶಾಸಕರು ಹಾಗೂ ಮುಖಂಡರು ಭಾಗವಹಿಸಿದ್ದರು.

ಕರ್ನಾಟಕಕ್ಕೆ 'ನಾಲ್ವಡಿ' ಅಂತಹವರು ಮುಖ್ಯಮಂತ್ರಿ ಆಗುವವರೆಗೂ ರಾಜ್ಯದ ಆಡಳಿತದಲ್ಲಿ ಯಾವ ಸುಧಾರಣೆಯೂ ಸಾಧ್ಯವಿಲ್ಲ: ಕೆಬಿಜಿ

ರಾಜವಂಶದ ರಾಜಾಚಂದ್ರರಿಂದ ಹಿರಿಯ ಪತ್ರಕರ್ತ ಗೌರಿ ಸತ್ಯ ಅವರ 'ಕಾವ್ಯಗಳಲ್ಲಿ ಒಡೆಯರು' ಕೃತಿ ಬಿಡುಗಡೆ

ಮೈಸೂರು, ಜು.15(ಎಸ್‌ಬಿಡಿ)– ಕರ್ನಾಟಕದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಂತಹ ಸಮಾಜಮುಖಿ ನಾಯಕ ಮುಖ್ಯಮಂತ್ರಿ ಆಗುವವರೆಗೆ ಒಳ್ಳೆಯ ಆಡಳಿತ ನಿರೀಕ್ಷಿಸಲು ಸಾಧ್ಯವಿಲ್ಲ ಎಂದು 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳ ಸಂಸ್ಥಾಪಕ ಸಂಪಾದಕ ಕೆ.ಬಿ.ಗಣಪತಿ ಅವರು ಅಭಿಪ್ರಾಯಿಸಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯ ನಾದಬ್ರಹ್ಮ ಸಂಗೀತ ಸಭಾದಲ್ಲಿ ಭಾರತಿ ಪ್ರಕಾಶನ ಹಾಗೂ ಪರಂಪರೆ ಮೈಸೂರು ಸಂಯುಕ್ತಾಶ್ರಯದಲ್ಲಿ ಶುಕ್ರವಾರ ಏರ್ಪಡಿಸಿದ್ದ ಹಿರಿಯ ಪತ್ರಕರ್ತ, 'ಸ್ಟಾರ್ ಆಫ್ ಮೈಸೂರ್' ಅಂಕಣಕಾರ ಗೌರಿ ಸತ್ಯ ಅವರ 'ಕಾವ್ಯಗಳಲ್ಲಿ ಒಡೆಯರು' ಕೃತಿ ಬಿಡುಗಡೆ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಇಡೀ ಭಾರತದಲ್ಲಿ ಮೈಸೂರು ರಾಜಮನೆತನ 550 ವರ್ಷಗಳ ಸುದೀರ್ಘ ಆಡಳಿತ ನಡೆಸಿದೆ. ಮಗಧ, ಮೌರ್ಯ, ಸುಲ್ತಾನರು, ಮೊಘಲರು, ಬ್ರಿಟಿಷರು, ವಿಜಯನಗರ, ಶಿವಾಜಿ, ಚೋಳರು, ಚೇಳರು, ಪಾಂಡ್ಯರು ಸೇರಿದಂತೆ ಯಾವ ರಾಜಮನೆತನವೂ ಇಷ್ಟು ಸುದೀರ್ಘ ಆಡಳಿತ ನಡೆಸಿಲ್ಲ. ಮುಮ್ಮಡಿ ಕೃಷ್ಣರಾಜ ಒಡೆಯರ್ ಕಾಲದಿಂದ ಸಮಾಜಮುಖಿ ಕಾರ್ಯಗಳೊಂದಿಗೆ ಪ್ರಜೆಗಳ ಅನುಕೂಲಕ್ಕಾಗಿ ಹಲವು ಕ್ಷೇತ್ರಗಳ ಅಭಿವೃದ್ಧಿಯಾಯಿತು. ನಂತರ ಚಾಮರಾಜ ಒಡೆಯರ್ ಉತ್ತಮ ಆಡಳಿತ ಮುಂದುವರೆಸಿದರು. ಬಳಿಕ ಮಹಾತ್ಮ ಗಾಂಧೀಜಿ ಮೈಸೂರು ಸಂಸ್ಥಾನವನ್ನು 'ರಾಮರಾಜ್ಯ' ಎಂದು ಬಣ್ಣಿಸಲು ನಾಲ್ವಡಿ ಕೃಷ್ಣರಾಜ ಒಡೆಯರ್ ಆಡಳಿತ ಕಾರಣವಾಯಿತು ಎಂದು ತಿಳಿಸಿದರು.


ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ತಮ್ಮೊಡನೆ ಕೆಲಸ ಮಾಡಲು ಅರ್ಹರನ್ನೇ ನೇಮಿಸಿಕೊಂಡಿದ್ದು ಅವರ ಉತ್ತಮ ಆಡಳಿತ ಸಾಧನೆಗೆ ಸಹಕಾರಿಯಾಯಿತು. ಉದಾಹರಣೆಗೆ ಸರ್.ಎಂ. ವಿಶ್ವೇಶ್ವರಯ್ಯ, ಸರ್ ಮಿರ್ಜಾ ಇಸ್ಮಾಯಿಲ್ ಅವರಂತಹ ಸಮರ್ಥರನ್ನು ದಿವಾನರನ್ನಾಗಿ ಆಯ್ಕೆ ಮಾಡಿ ಅಪಾರ ಸಮಾಜಮುಖಿ ಕಾರ್ಯಗಳನ್ನು ಸಾಕಾರಗೊಳಿಸಿದರು. ಆದರೆ ನಾಲ್ವಡಿ ಅವರ ನೆಲೆಗಟ್ಟಿನ ಮೇಲೆ ಮುಂದುವರೆಯುವುದಕ್ಕೆ ಸ್ವಾತಂತ್ರ್ಯದ ನಂತರದ ಪ್ರಜಾಸತ್ತಾತ್ಮಕ ಸರ್ಕಾರಗಳಿಂದ ಸಾಧ್ಯವಾಗಿಲ್ಲ. ಒಡೆಯರ್ ಆಳ್ವಿಕೆ ಹಾದಿಯಲ್ಲಿ ಮುನ್ನಡೆಯುವುದಕ್ಕೂ ಯೋಗ್ಯತೆ ಇಲ್ಲ ಎಂಬುದಕ್ಕೆ ಮಂಡ್ಯದ ಮೈಷುಗರ್ ಕಾರ್ಖಾನೆ, ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಮೈಸೂರಿನಲ್ಲಿದ್ದ ಸ್ಯಾಂಡಲ್‌ವುಡ್ ಆಯಿಲ್ ಕಾರ್ಖಾನೆ ದುಸ್ಥಿತಿಯೇ ಜ್ವಲಂತ ಸಾಕ್ಷಿ. **ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಂತಹವರು ಕರ್ನಾಟಕದ ಮುಖ್ಯಮಂತ್ರಿ ಆಗುವವರೆಗೂ ಒಳ್ಳೆಯ ಆಡಳಿತ ನಿರೀಕ್ಷಿಸಲು ಸಾಧ್ಯವೇ ಇಲ್ಲ** ಎಂದು ಹೇಳಿದರು.

ಅತ್ಯುತ್ತಮ ಪುಸ್ತಕ: ರಾಜಮಹಾರಾಜರನ್ನು ಕುರಿತ ಸಾಹಿತ್ಯದಲ್ಲಿ ಹೊಗಳಿಕೆ ಸಹಜವಾಗಿರುತ್ತದೆ ಎಂಬ ಭಾವನೆಯಿಂದಲೇ ಗೌರಿ ಸತ್ಯ ಅವರ 'ಕಾವ್ಯಗಳಲ್ಲಿ ಒಡೆಯರು' ಪುಸ್ತಕ ಓದಿದಾಗ ಇದರಲ್ಲಿ ಒಡೆಯರ್ ಚರಿತ್ರೆಯೂ ಇದೆ ಎಂಬುದು ಗೊತ್ತಾಯಿತು. ಒಡೆಯರ್ ಮನೆತನದ ಪೂರ್ಣ ಚರಿತ್ರೆಯನ್ನು ಸಂಕ್ಷಿಪ್ತವಾಗಿ ಹಿಡಿದಿಟ್ಟಿದ್ದಾರೆ. ಈ ಪುಸ್ತಕವನ್ನು ಓದಿ ತುಂಬಾ ಸಂತೋಷವಾಯಿತು. ಜೊತೆಗೆ ಒಡೆಯರ್ ಬಗ್ಗೆ ಸಾಕಷ್ಟು ವಿಚಾರಗಳನ್ನು ತಿಳಿದುಕೊಂಡಿದ್ದೇನೆ. ಇದೊಂದು ಜ್ಞಾನ ವೃದ್ಧಿಸುವ ಮಹತ್ವಪೂರ್ಣ ಉಪಯುಕ್ತ ಪುಸ್ತಕವಾಗಿದೆ. ಈ ರೀತಿಯ ಬರವಣಿಗೆಯನ್ನು ಗೌರಿ ಸತ್ಯ ಅವರು ಮುಂದುವರೆಸಬೇಕೆಂದು ಆಶಿಸಿದರು.

ಅಪಾರ ಸಾಹಿತ್ಯ ಸೇವೆ: ಪುಸ್ತಕ ಬಿಡುಗಡೆ ಮಾಡಿದ ಮೈಸೂರು ರಾಜವಂಶದ ರಾಜಾಚಂದ್ರ ಅವರು ಮಾತನಾಡಿ, ಹಯವದನರಾವ್ ಅವರ 'ಹಿಸ್ಟರಿ ಆಫ್ ಮೈಸೂರ್' ಪ್ರಕಟವಾಗುವವರೆಗೂ ಪ್ರಾಯಶಃ ಒಡೆಯರ್ ಸಾಹಿತ್ಯ ಪರಿಚಯವಾಗಿರಲಿಲ್ಲ. ಮೂರು ಸಂಪುಟದಲ್ಲಿರುವ ಅಂತಹ ಪುಸ್ತಕಕ್ಕೆ ಮತ್ತೊಂದು ಸಾಟಿಯಿಲ್ಲ. ರಾಜ ಒಡೆಯರ್ ಮೊಮ್ಮಗನ ಕಾಲದಲ್ಲಿ ಕವಿಗಳಿಗೆ ಉತ್ತಮ ಉತ್ತೇಜನ ಲಭಿಸಿತ್ತು ಐದನೇ ಚಾಮರಾಜ ಒಡೆಯರ್ ಅವರು 'ಚಾಮರಾಜೋಕ್ತಿ ವಿಲಾಸ' ರಚಿಸಿದರೆಂದು ಹೇಳಲಾಗಿದೆಯಾದರೂ ಈ ಬಗ್ಗೆ ಗೊಂದಲ ಮುಂದುವರೆದಿದೆ. ದೊಡ್ಡಕೃಷ್ಣರಾಜ ಒಡೆಯರ್ ಧರ್ಮಪತ್ನಿ ಬಹಳಷ್ಟು ಕೃತಿಗಳನ್ನು ಬರೆದಿದ್ದಾರೆ. ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಕನ್ನಡ ಸಾಹಿತ್ಯ ಸೇವೆ ಸ್ಮರಣೀಯ ಎಂದು ಮೈಸೂರು ಒಡೆಯರ ಸಾಹಿತ್ಯ ಸೇವೆಯನ್ನು ಸ್ಮರಿಸಿಕೊಂಡರಲ್ಲದೆ, ಇದೆಲ್ಲವನ್ನೂ ಕ್ರೋಢೀಕರಿಸಿ ಪುಸ್ತಕ ರೂಪ ನೀಡಿರುವ ಗೌರಿ ಸತ್ಯ ಅವರ ಕಾರ್ಯವನ್ನು ಶ್ಲಾಘಿಸಿದರು.

ಉದ್ದೇಶ ಸಾಕಾರವಾಗಲಿ: ಲೇಖಕ ಗೌರಿ ಸತ್ಯ ಅವರು ಮಾತನಾಡಿ, ಮೂರು ದಶಕಗಳ ಹಿಂದೆ ಕನ್ನಡ ಪ್ರಭದಲ್ಲಿ ಪ್ರಕಟವಾದ 20 ಲೇಖನಗಳಿಗೆ ಮತ್ತಷ್ಟು ಸೇರ್ಪಡೆ ಮಾಡಿ, ಕಾವ್ಯ ಹಾಗೂ ಅದರ ಅರ್ಥವನ್ನು ದಾಖಲಿಸಿ ಕೃತಿ ರೂಪ ನೀಡಿದ್ದೇನೆ. ಯದುರಾಯರಿಂದ ಜಯಚಾಮರಾಜ ಒಡೆಯರ್ ವರೆಗಿನ ಕಾವ್ಯಗಳಲ್ಲಿ ಸಿಗುವ ಮಾಹಿತಿಯನ್ನು ನೀಡುವ ಪ್ರಯತ್ನ ಮಾಡಿದ್ದೇನೆ. ಮೈಸೂರಿನ ಬಹುತೇಕ ಜನ ಇಲ್ಲಿನ ಇತಿಹಾಸ ತಿಳಿದಿಲ್ಲ ಎನ್ನುವುದು ವಿಷಾಧನೀಯ. ಮೈಸೂರಿನವರು ಅದರಲ್ಲೂ ಇಂದಿನ ಯುವ ಪೀಳಿಗೆಗೆ ಒಡೆಯರ್ ಸಾಹಿತ್ಯ ಸೇವೆಯ ಬಗ್ಗೆ ತಿಳಿಯಬೇಕು ಎನ್ನುವುದು ನನ್ನ ಉದ್ದೇಶ. ಪುಸ್ತಕದ ಮೂಲಕ ಈ ಉದ್ದೇಶ ಸಾಕಾರವಾಗಲಿ ಎಂಬ ಆಶಯ ಹೊಂದಿದ್ದೇನೆ ಎಂದು ತಿಳಿಸಿದರು.

ವಿನೂತನ ಪರಿಚಯ: ಖ್ಯಾತ ಗಮಕಿಗಳಾದ ಕೃ.ರಾಮಚಂದ್ರ ಹಾಗೂ ಡಾ.ಜ್ಯೋತಿ ಶಂಕರ್ ಅವರು ಗಮಕ ವಾಚನ ಹಾಗೂ ವ್ಯಾಖ್ಯಾನದ ಮೂಲಕ 'ಕಾವ್ಯಗಳಲ್ಲಿ ಒಡೆಯರು' ಪುಸ್ತಕವನ್ನು ನೆರೆದಿದ್ದವರಿಗೆ ವಿನೂತನ ರೀತಿಯಲ್ಲಿ ಪರಿಚಯಿಸಿದರು. ಕಾರ್ಯಕ್ರಮದ ಆರಂಭದಲ್ಲಿ ವಿದ್ವಾನ್ ಮನಮೋಹನ್ ಅವರು ದೇವರನಾಮಗಳನ್ನು ಸುಶ್ರಾವ್ಯವಾಗಿ ಪ್ರಸ್ತುತಪಡಿಸಿದರು. ಭಾರತಿ ಪ್ರಕಾಶನದ ಬಿ.ಎನ್.ಶ್ರೀನಿವಾಸ್ ಮತ್ತಿತರ ಗಣ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



ಮೈಸೂರಿನ ಜೆಎಲ್‌ಬಿ ರಸ್ತೆಯ ನಾದಬ್ರಹ್ಮ ಸಂಗೀತ ಸಭಾದಲ್ಲಿ ಶುಕ್ರವಾರ ಹಿರಿಯ ಪತ್ರಕರ್ತ, 'ಸ್ಟಾರ್ ಆಫ್ ಮೈಸೂರ್' ಅಂಕಣಕಾರ ಗೌರಿ ಸತ್ಯ ಅವರ 'ಕಾವ್ಯಗಳಲ್ಲಿ ಒಡೆಯರು' ಕೃತಿಯನ್ನು ಮೈಸೂರು ರಾಜವಂಶದ ರಾಜಾಚಂದ್ರ(ಎಡದಿಂದ 2ನೆಯವರು) ಬಿಡುಗಡೆ ಮಾಡಿದರು. ಭಾರತಿ ಪ್ರಕಾಶನದ ಬಿ.ಎನ್.ಶ್ರೀನಿವಾಸ್, 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕ ಕೆ.ಬಿ.ಗಣಪತಿ ಹಾಗೂ ಲೇಖಕ ಗೌರಿ ಸತ್ಯ ಉಪಸ್ಥಿತರಿದ್ದರು.

ಸರ್ಕಾರ ಸಾಹಿತ್ಯಕ್ಕೂ ಸಬ್ಸಿಡಿ ನೀಡಲಿ

● ರಾಜಾಚಂದ್ರ ಆಗ್ರಹ ● ಅರ್ಹರ ಪರಿಗಣಿಸಲಿ: ಕೆಬಿಜಿ

ಮೈಸೂರು, ಜು.15– ಸರ್ಕಾರ ಸಾಹಿತ್ಯ ಕ್ಷೇತ್ರಕ್ಕೂ ಸಬ್ಸಿಡಿ ನೀಡಿ ಪ್ರೋತ್ಸಾಹಿಸಬೇಕೆಂದು ಮೈಸೂರು ರಾಜವಂಶದ ರಾಜಾಚಂದ್ರ ಆಗ್ರಹಿಸಿದರು.

ಇತ್ತ ಪುಸ್ತಕದ ಲೇಖಕರಿಗೆ ಒಂದು ರೂ. ಕೂಡ ಆದಾಯವಿಲ್ಲ. ಅತ್ತ ಪ್ರಕಾಶಕರು ಖರ್ಚು ಮಾಡಿದ ಹಣ ಸಂಪಾದಿಸುವುದಕ್ಕೂ ಹರಸಾಹಸಪಡುವ ಪರಿಸ್ಥಿತಿ ಇದೆ. ಸಿನಿಮಾ ರಂಗದಲ್ಲಿ ಮುಳುಗಿ ಹೋಗಿರುವ ಸರ್ಕಾರ, ಸಾಹಿತ್ಯ ಕ್ಷೇತ್ರವನ್ನೂ ಗಮನಿಸಬೇಕು. ಸಿನಿಮಾಗೆ ಸಬ್ಸಿಡಿ ನೀಡುವಂತೆ ಲೇಖಕರಿಗೆ ಹಾಗೂ ಪುಸ್ತಕ ಪ್ರಕಟಿಸಲು ಪ್ರತಿವರ್ಷ ಸಬ್ಸಿಡಿ ನೀಡುವ ಮೂಲಕ ಸಾಹಿತ್ಯದ ಜೊತೆ ನಿಲ್ಲಬೇಕು. ಆಗ ಮಾತ್ರ ಕನ್ನಡ ಅಭಿವೃದ್ಧಿಯಾಗುತ್ತದೆ ಎಂದು ಅಭಿಪ್ರಾಯಿಸಿದರು.

ಈ ವಿಚಾರವನ್ನು ಕೆ.ಬಿ.ಗಣಪತಿ ಅವರು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿ, ಸ್ವಂತ ಅನುಭವಗಳೊಂದಿಗೆ ಸಾಹಿತ್ಯ ಕ್ಷೇತ್ರಕ್ಕೆ ಸಬ್ಸಿಡಿ ಎಷ್ಟು ಔಚಿತ್ಯಪೂರ್ಣ ಎನ್ನುವುದನ್ನು ಓರೆಗಚ್ಚಿದರು.

ನಾನು ಪತ್ರಿಕೆ ಆರಂಭಿಸುವ ಸಂದರ್ಭದಲ್ಲಿ ಮೈಸೂರಿನಿಂದ 40 ಹಾಗೂ ಬೆಂಗಳೂರಿನಲ್ಲಿ 80 ಪತ್ರಿಕೆಗಳು ಪ್ರಕಟವಾಗುತ್ತಿದ್ದವು. ಆದರೂ ಮೈಸೂರಿನಲ್ಲಿ ಪತ್ರಿಕೆ ತರಬೇಕೆಂಬ ಛಲದಿಂದ ಸ್ನೇಹಿತರೊಬ್ಬರ ಭೇಟಿಯಾಗಿ, ಅವರ ಸಲಹೆ ಕೇಳಿದೆ. ಆಗ ಅವರು 'ನಿಮ್ಮದು 41ನೇ ಪತ್ರಿಕೆ ಯಾರು ಓದುತ್ತಾರೆ' ಎಂದು ವ್ಯಂಗ್ಯಭರಿತ ಎಚ್ಚರಿಕೆ ನೀಡಿದರು. ಹಾಗಾದರೆ 40 ಪತ್ರಿಕೆಗಳನ್ನು ಹೇಗೆ ಪ್ರಕಟಿಸುತ್ತಾರೆ, ಆರ್ಥಿಕ ಮೂಲವೇನು? ಎಂದು ಪ್ರಶ್ನಿಸಿದೆ. ಯಾರದೋ ಪ್ರಭಾವದಿಂದ ಸರ್ಕಾರದ ಜಾಹಿರಾತು ತರುತ್ತಾರೆ. ಜಾಹಿರಾತು ಬಂದ ದಿನ ಪತ್ರಿಕೆ ಅಚ್ಚು ಹಾಕಿ, ವೋಚರ್ ಕಾಪಿ ಕಳುಹಿಸಿ ಬಿಲ್ ಪಡೆಯುತ್ತಾರೆ. ಇದು ವ್ಯಾಪಾರವಷ್ಟೇ. ಅವರದು ಇತ್ತ ವೃತ್ತಿಯೂ ಅಲ್ಲ, ಅತ್ತ ಸೇವೆಯೂ ಅಲ್ಲ ಎಂದು ವಿವರಿಸಿದರು. ಹಾಗೆ ಖರ್ಚು ಮಾಡಿದ್ದಕ್ಕಿಂತ ಸರ್ಕಾರ ಹೆಚ್ಚು ಸಬ್ಸಿಡಿ ನೀಡುತ್ತದೆ ಎನ್ನುವ ಕಾರಣಕ್ಕೆ ಹಲವರು ಸಿನಿಮಾ ತೆಗೆಯುತ್ತಾರೆ. ಇನ್ನು ಪುಸ್ತಕ ಪ್ರಕಟಿಸಲು ಸಬ್ಸಿಡಿ ನೀಡಿದರೆ ಯಾರು, ಏನು ಬೇಕಾದರೂ ಬರೆದು ಪ್ರಕಟಿಸಬಹುದು. ಆದರೆ ಗೌರಿ ಸತ್ಯ ಅವರಂತಹ ಲೇಖಕರ ಪುಸ್ತಕಗಳಿಗೆ ಸಬ್ಸಿಡಿ ನೀಡುವುದು ಸ್ತುತ್ಯಾರ್ಹ. ಹಾಗಾಗಿ ಬೇಕಾಬಿಟ್ಟಿ ಬರೆದು ಪ್ರಕಟಿಸುವವರ ನಿಯಂತ್ರಿಸಿ, ಅರ್ಹರಿಗೆ ಸೌಲಭ್ಯ ನೀಡುವ ಬಗ್ಗೆ ಚಿಂತನೆ ನಡೆಸಿ, ಮುಂದುವರೆದರೆ ಸೂಕ್ತ ಎಂದು ಹೇಳಿದರು.

ಚಾಮುಂಡಿಬೆಟ್ಟಕ್ಕೆ ಉಚಿತ ಬಸ್ ವ್ಯವಸ್ಥೆ ಕಲ್ಪಿಸಿರುವ ಸ್ಥಳ ಆಯ್ಕೆ ಸಂಬಂಧ ಸಾರ್ವಜನಿಕರ ಅಸಮಾಧಾನ



ಬಸ್ ಇಳಿದು ಪಾರ್ಕಿಂಗ್ ಸ್ಥಳಕ್ಕೆ ವಾಹನ ದಟ್ಟಣೆ ನಡುವೆ ಸಾಗುತ್ತಿರುವ ಮಹಿಳೆಯರು.



ಪಾರ್ಕಿಂಗ್ ಸ್ಥಳದಿಂದ ಬಸ್ ಹೊರ ಹೋಗುವ ರಸ್ತೆ ಕೆಸರುಗದ್ದೆಯಂತಿದೆ.

ಮೈಸೂರು, ಜು.15–ಆಷಾಢ ಶುಕ್ರವಾರಗಳು ಹಾಗೂ ವರ್ಧಂತ್ಯೋತ್ಸವ ದಿನ ಚಾಮುಂಡಿ ಬೆಟ್ಟಕ್ಕೆ ಉಚಿತ ಬಸ್ ಸೌಕರ್ಯ ಕಲ್ಪಿಸಿರುವುದು ಸ್ತುತ್ಯಾರ್ಹವಾದರೂ ಅದಕ್ಕೆ ಸೂಕ್ತ ಸ್ಥಳಾವಕಾಶ ಮಾಡಿಕೊಳ್ಳದೇ ಇರುವುದಕ್ಕೆ ಸಾರ್ವಜನಿಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಆಷಾಢ ಮಾಸದ ವಿಶೇಷ 5 ದಿನ ಚಾಮುಂಡಿ ಬೆಟ್ಟಕ್ಕೆ ಖಾಸಗಿ ವಾಹನಗಳನ್ನು ನಿರ್ಬಂಧಿಸಿ, ಭಕ್ತರಿಗಾಗಿ ಜಿಲ್ಲಾಡಳಿತದಿಂದ ಉಚಿತ ಬಸ್ ವ್ಯವಸ್ಥೆ ಮಾಡಲಾಗಿದೆ. ನಗರದ ಲಲಿತಮಹಲ್ ಪ್ಯಾಲೇಸ್ ಹೋಟೆಲ್ ಪಕ್ಕ, ತಿ.ನರಸೀಪುರ ರಸ್ತೆ ಜಂಕ್ಷನ್‌ನ ಖಾಲಿ ಜಾಗದಿಂದ ಈ ಬಾರಿ ಬೆಟ್ಟಕ್ಕೆ ಬಸ್‌ಗಳು ಸಂಚರಿಸಲು ವ್ಯವಸ್ಥೆ ಮಾಡಲಾಗಿದೆ. ಆದರೆ ಇಲ್ಲಿ ಭಕ್ತರಿಗೆ ಅಗತ್ಯ ವ್ಯವಸ್ಥೆ ಮಾತ್ರ ಅರೆಬರೆ. ಚಾಮುಂಡಿ ಬೆಟ್ಟದಿಂದ ವಾಪಸ್ಸಾಗುವ ಬಸ್‌ನಿಂದ ಇಳಿದು ಮುಖ್ಯ ರಸ್ತೆಯಲ್ಲೇ ನಡೆದು ವಾಹನ ಪಾರ್ಕಿಂಗ್ ಸ್ಥಳಕ್ಕೆ ತೆರಳಬೇಕು. ಈ ವೇಳೆ ಹಿರಿಯರು, ಮಹಿಳೆಯರು ಮತ್ತು ಮಕ್ಕಳು ಆತಂಕದಲ್ಲೇ ಇಲ್ಲಿ ಓಡಾಡುವಂತಾಗಿದೆ.

ಉಚಿತ ಬಸ್ ಸೇವೆಗೆ ಆಯ್ಕೆ ಮಾಡಿರುವ ಜಾಗದಿಂದಲೇ ಸಮಸ್ಯೆ ಶುರುವಾಗುತ್ತದೆ. ಬೈಕ್, ಸ್ಕೂಟರ್, ಕಾರು, ಬಸ್ಸು, ಟೆಂಪೋ, ಆಟೋ ಸೇರಿದಂತೆ ಭಕ್ತರ ಸಾವಿರಾರು ವಾಹನಗಳ ನಿಲುಗಡೆಗೆ ಅಗತ್ಯವಾದಷ್ಟು ಸ್ಥಳಾವಕಾಶ ಇಲ್ಲಿಲ್ಲ. ಪರಿಣಾಮ ಸಿಕ್ಕ ಸಿಕ್ಕ ಜಾಗದಲ್ಲಿ ವಾಹನಗಳನ್ನು ನಿಲ್ಲಿಸುವುದು ಅನಿವಾರ್ಯವಾಗಿದೆ. ಕಾರುಗಳಿಗೆ ನಿಗದಿಪಡಿಸಿರುವ ಸ್ಥಳ ಸಕಾಗದೆ ಹಲವು ಮಿನಿ ಬಸ್‌ಗಳು ತಿ.ನರಸೀಪುರ ರಸ್ತೆ ಜಂಕ್ಷನ್‌ನಲ್ಲಿ ರಸ್ತೆ ಇಕ್ಕೆಗಳಲ್ಲಿ ನಿಲ್ಲಿಸಲಾಗುತ್ತಿದೆ. ಅಲ್ಲದೆ ಎದುರಿನ ಶ್ರೀ ಗಣಪತಿ ಸಚ್ಚಿದಾನಂದ ಶಾಲೆ, ಉದ್ಯಾನವನದ ಬಳಿ ಹೀಗೆ ಸುತ್ತಮುತ್ತಲ ರಸ್ತೆಗಳಲ್ಲೆಲ್ಲಾ ವಾಹನಗಳ ಸಾಲು ಕಾಣಿಸುತ್ತದೆ. ಮುಖ್ಯರಸ್ತೆಯಲ್ಲಿ ವಿಪರೀತ ವಾಹನ ದಟ್ಟಣೆ ಸೃಷ್ಟಿಯಾಗುತ್ತದೆ. ಜನ ಜೀವ ಕೈಯ್ಯಲ್ಲಿಡಿದು ರಸ್ತೆ ದಾಟಬೇಕು. ಸ್ವಲ್ಪ ಎಚ್ಚರ ತಪ್ಪಿದರೂ ಯಾವುದಾದರೂ ವಾಹನ ಡಿಕ್ಕಿ ಹೊಡೆಯುತ್ತದೆ ಎಷ್ಟು ಜನ ಪೊಲೀಸರಿದ್ದರೂ ನಿರ್ವಹಣೆ ಮಾಡಲು ಸಾಧ್ಯವಾಗುವುದಿಲ್ಲ ಎಂದು ಕಿಡಿಕಾರಿದ್ದಾರೆ.



ವಾಹನ ಪಾರ್ಕಿಂಗ್, ಟ್ರಾಫಿಕ್ ಜಾಮ್ ಸಮಸ್ಯೆಗಳಷ್ಟೇ ಅಲ್ಲ, ಆಡಳಿತ ವ್ಯವಸ್ಥೆಯ ನಿರ್ಲಕ್ಷ್ಯಕ್ಕೆ ಮತ್ತಷ್ಟು ಸಾಕ್ಷಿಗಳಿವೆ. ಸಾವಿರಾರು ಜನ ಸೇರುವ ಈ ಸ್ಥಳದಲ್ಲಿ ಒಂದೇ ಒಂದು ಕಡೆ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ. ಇನ್ನು ಶೌಚಾಲಯ ದುಸ್ಥಿತಿಯಂತೂ ಹೇಳತೀರದು. 8–10 ತಾತ್ಕಾಲಿಕ ಹಾಗೂ ಒಂದು ಮೊಬೈಲ್ ಟಾಯ್ಲೆಟ್ ಇದೆ. ಅಲ್ಲಿನ ಜನಸಂದಣಿ ಹಾಗೂ ದುರ್ವಾಸನೆ ಸಹಿಸಲಾಗದೆ ಅನೇಕರು ವಾಹನಗಳ ಮರೆಯಲ್ಲಿ, ಸಿಕ್ಕ ಸಿಕ್ಕಲ್ಲಿ ಮೂತ್ರ ವಿಸರ್ಜನೆ ಮಾಡುತ್ತಿದ್ದಾರೆ. ಮಹಿಳೆಯರು, ಮಕ್ಕಳು ಮುಜುಗರದಿಂದ ಓಡಾಡುವ ಸ್ಥಿತಿ ನಿರ್ಮಾಣವಾಗಿದೆ.

ಮಳೆಯಾದರಂತೂ ಇನ್ನೂ ಅಧ್ವಾನ. ವಾಹನ ನಿಲುಗಡೆ ಸ್ಥಳವೆಲ್ಲಾ ರಾಡಿಯಾಗಿ ಓಡಾಡುವುದಕ್ಕೂ ಕಷ್ಟವಾಗುತ್ತದೆ. ಅಲ್ಲದೆ ಬಸ್ ಬೆಟ್ಟಕ್ಕೆ ಹೊರಡುವಾಗ ಲಲಿತಮಹಲ್ ರಸ್ತೆ ಸಂಪರ್ಕಿಸುವ ಸ್ಥಳದಲ್ಲಿ ಕೆಸರು ಗದ್ದೆಯಂತಾಗಿದ್ದು, ಬಸ್‌ಗಳ ಚಕ್ರಗಳು ಹೂತುಕೊಳ್ಳುವ ಆತಂಕ ಸ್ಥಿತಿ ಇದೆ. ಇಲ್ಲಿ ಭಕ್ತರ ಸೂರಿಗಾಗಿ ನಿರ್ಮಿಸಿರುವ ವಾಟರ್‌ಫ್ರೂಫ್ ಪೆಂಡಾಲ್‌ನಲ್ಲಿ ಭಾರೀ ಜನ ಆಸರೆ ಪಡೆಯಲು ಸಾಧ್ಯವಿಲ್ಲ. ಮಳೆಯಲ್ಲಿ ತೊಯ್ದುಕೊಂಡೇ ಬಸ್ ಹತ್ತಿಳಿಯಬೇಕು. ತಮ್ಮ ವಾಹನಗಳನ್ನು ಮಳೆಯಲ್ಲಿಯೇ ಚಾಲಿಸಿಕೊಂಡು ಹೋಗಬೇಕು ಎಂದು ಸಾರ್ವಜನಿಕರು ಅವ್ಯವಸ್ಥೆಗಳ ಬಗ್ಗೆ ವಿಷಾಧ ವ್ಯಕ್ತಪಡಿಸಿದ್ದಾರೆ.

ಹೆಲಿಪ್ಯಾಡ್ ಸೂಕ್ತ ಸ್ಥಳವಾಗಿತ್ತು: ಎಸ್.ಎ.ರಾಮದಾಸ್ ಅವರು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾಗ ಬೆಟ್ಟಕ್ಕೆ ಖಾಸಗಿ ವಾಹನಗಳ ನಿರ್ಬಂಧಿಸಿ, ಹೆಲಿಪ್ಯಾಡ್‌ನಿಂದ ಉಚಿತ ಬಸ್ ಸೇವೆ ಆರಂಭಿಸಲಾಯಿತು. ಮುಖ್ಯರಸ್ತೆಯಿಂದ ಸಾಕಷ್ಟು ಅಂತರದಲ್ಲಿದ್ದ ಹೆಲಿಪ್ಯಾಡ್ ಬಳಿ ವಾಹನ ನಿಲುಗಡೆಗೆ ವಿಶಾಲವಾದ ಸ್ಥಳವಿದ್ದ ಕಾರಣ ಯಾವುದೇ ತೊಂದರೆಯಾಗಿರಲಿಲ್ಲ. ಆ ರಸ್ತೆಯನ್ನು ಡಾಂಬರೀಕರಣ ಮಾಡಿ, ಎಲ್ಲಾ ಮೂಲ ಸೌಕರ್ಯಗಳನ್ನೂ ಕಲ್ಪಿಸಲಾಗುತ್ತಿತ್ತು. ವಾಹನ ನಿಲ್ಲಿಸಿ, ಬಸ್ ನಿಲುಗಡೆ ಸ್ಥಳಕ್ಕೆ ಹೋಗಲು ಸೂಕ್ತ ಬ್ಯಾರಿಕೇಡ್, ಶೌಚಾಲಯ ವ್ಯವಸ್ಥೆ, ಭದ್ರತಾ ವ್ಯವಸ್ಥೆ ಯಾವುದರಲ್ಲೂ ಲೋಪವಾಗುತ್ತಿರಲಿಲ್ಲ. ಆದರೆ ಈ ಬಾರಿ ಸ್ಥಳ ಬದಲಿಸಿದ್ದು, ಇಲ್ಲಿನ ವ್ಯವಸ್ಥೆ ಗೊಂದಲಮಯವಾಗಿದೆ.

ನ್ಯಾಯಾಲಯದ ಆದೇಶದಂತೆ ಹೆಲಿಪ್ಯಾಡ್ ಸುತ್ತಮುತ್ತಲ ಪ್ರದೇಶ ರಾಜವಂಶಸ್ಥೆ ಪ್ರಮೋದಾ ದೇವಿ ಒಡೆಯರ್ ಅವರಿಗೆ ಸೇರಿದ್ದು, ಅವರು ಆ ಜಾಗವನ್ನು ಖಾಸಗಿ ಸಂಸ್ಥೆಗೆ ಲೀಸ್‌ಗೆ ನೀಡಿದ್ದಾರೆನ್ನಲಾಗಿದೆ. ಈ ಬಗ್ಗೆ ಶಾಸಕ ಎಸ್.ಎ.ರಾಮದಾಸ್ ಅವರು ಪೂರ್ವಭಾವಿ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ಗಮನಕ್ಕೆ ತಂದಿದ್ದರು. ಆದರೆ, ಆಷಾಢ ಮಾಸದಲ್ಲಿ ಸಾರ್ವಜನಿಕರಿಗೆ ಉಚಿತ ಬಸ್ ಸೇವೆ ಕಲ್ಪಿಸುವ ಸದುದ್ದೇಶಕ್ಕೆ ಹೆಲಿಪ್ಯಾಡ್ ಆವರಣವನ್ನು ಬಳಸಿಕೊಳ್ಳುವ ಸಂಬಂಧ ಆ ಜಾಗವನ್ನು ಲೀಸ್‌ಗೆ ಪಡೆದಿರುವ ಸಂಸ್ಥೆಯವರೊಂದಿಗೆ ಮಾತುಕತೆ ನಡೆಸಿದ್ದಾರೋ? ಇಲ್ಲವೋ? ಎನ್ನುವುದು ತಿಳಿದು ಬಂದಿಲ್ಲ. ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳಿಗೆ ಇಚ್ಛಾಶಕ್ತಿ ಇದ್ದಿದ್ದರೆ ಸಂಬಂಧಪಟ್ಟವರೊಂದಿಗೆ ಮಾತನಾಡಿ ಹಿಂದಿನಂತೆ ವ್ಯವಸ್ಥಿತವಾಗಿ ನಿರ್ವಹಣೆ ಮುಂದುವರೆಸಬಹುದಿತ್ತು. ಹೀಗೆ ಪೂರ್ವಯೋಜನೆ ಇಲ್ಲದೆ ಬೇರೆ ಸ್ಥಳದಲ್ಲಿ ವ್ಯವಸ್ಥೆ ಮಾಡಿ, ಅಮಾಯಕ ಭಕ್ತರಿಗೆ ಕಿರಿಕಿರಿ ತಪ್ಪಿಸಬಹುದಿತ್ತು. ಆದರೆ ಆಡಳಿತ ವ್ಯವಸ್ಥೆಯ ನಿರ್ಲಕ್ಷ್ಯದಿಂದ ಅಧ್ವಾನಗಳ ನಡುವೆಯೇ ಭಕ್ತರು ಚಾಮುಂಡೇಶ್ವರಿ ದರ್ಶನ ಪಡೆಯುವ ಸ್ಥಿತಿ ಬಂದೊದಗಿದೆ ಎಂದು ತೀವ್ರ ಆಕ್ಷೇಪ ವ್ಯಕ್ತವಾಗುತ್ತಿದೆ.

ಒಂದನೇ ಪುಟದಿಂದ

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಘೋಷಣೆ

ಡಿ.ಕೆ.ಶಿವಕುಮಾರ್ ಅಭಿಮಾನಿ ಬಳಗದ ಅಧ್ಯಕ್ಷ ಜಿ.ಶ್ರೀನಾಥ್ ಬಾಬು, ಜಿ.ರಾಘವೇಂದ್ರ ಸೇರಿದಂತೆ ಇನ್ನಿತರರೊಂದಿಗೆ ಸಾಮಾನ್ಯ ಭಕ್ತರಂತೆ ಬೆಟ್ಟಕ್ಕೆ ಪ್ರಯಾಣ ಬೆಳೆಸಿದರು. ಖಾಸಗಿ ಕಾರ್ಯಕ್ರಮದಲ್ಲಿ ಭಾಗವಹಿಸಬೇಕಾದ್ದರಿಂದ ಡಿಕೆಶಿ ಪತ್ನಿ ಉಷಾ ಖಾಸಗಿ ಕಾರಿನಲ್ಲಿ ಬೆಟ್ಟಕ್ಕೆ ತೆರಳಿದರು. ಬೆಟ್ಟದಲ್ಲಿ ಬಸ್ ಇಳಿದ ನಂತರ ಕಾಲ್ನಡಿಗೆಯಲ್ಲೇ ಡಿ.ಕೆ.ಶಿವಕುಮಾರ್, ದೇವಸ್ಥಾನದತ್ತ ತೆರಳುತ್ತಿದ್ದಾಗ ಅವರ ಬೆಂಬಲಿಗರು ಜಯಘೋಷ ಮೊಳಗಿಸಿದರು. ದೇವಸ್ಥಾನ ಪ್ರವೇಶಿಸುವ ಮುನ್ನ ಬ್ಯಾರಿಕೇಡ್ ಬಳಿ ನಿಂತು ತಮ್ಮ ಬೆಂಬಲಿಗರತ್ತ ಡಿಕೆಶಿ ಕೈಬೀಸಿದರು. ಕೆಲವರು ಡಿಕೆಶಿ ಕೈಕುಲುಕಿದರು. ದೇವಸ್ಥಾನದ ಮುಂಭಾಗ ಈಡುಗಾಯಿ ಒಡೆದ ನಂತರ ಡಿಕೆಶಿ ದೇವಿ ದರ್ಶನ ಪಡೆದರು

ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ರಾಜ್ಯದ ಜನತೆಗೆ ಒಳಿತಾಗಲೆಂದು ಪ್ರಾರ್ಥಿಸಿ, ವಿಶೇಷ ಪೂಜೆ ಸಲ್ಲಿಸಿದ್ದೇನೆ. ನಾಡಿಗೆ ಎದುರಾಗಿರುವ ಸಂಕಷ್ಟವನ್ನೆಲ್ಲಾ ನಿವಾರಣೆ ಮಾಡೆಂದು ದೇವಿಯಲ್ಲಿ ಕೋರಿದ್ದೇನೆ. ಎಲ್ಲ ಭಕ್ತರು ಹಾಗೂ ಅವರ ಕುಟುಂಬಕ್ಕೆ ದೇವಿ ಆಶೀರ್ವಾದ ಪ್ರಾಪ್ತಿಯಾಗಲಿ ಎಂದು ಬೇಡುತ್ತೇನೆ ಎಂದರು.

ಬಾಗಲಕೋಟೆಯಲ್ಲಿ ವಿಪಕ್ಷ ನಾಯಕ ಸಿದ್ದರಾಮಯ್ಯ ಕೊಟ್ಟ ನೆರವಿನ ಹಣವನ್ನು ಮಹಿಳೆ ಬಿಸಾಕಿ, ನಮಗೆ ಹಣ ಬೇಡ, ಶಾಂತಿ ಬೇಕು ಎಂದು ನೀಡಿರುವ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಈ ವಿಚಾರವಾಗಿ ರಾಜ್ಯದ ಮುಖ್ಯಮಂತ್ರಿಗಳನ್ನು ಕೇಳಬೇಕು. ಶಾಂತಿ ಕದಡುತ್ತಿರುವವರಿಗೆ ಈ ಪ್ರಶ್ನೆ ಕೇಳಬೇಕು. ಸರ್ಕಾರ ಹಾಗೂ ರಾಜ್ಯದ ನಾಯಕತ್ವ ವಹಿಸಿಕೊಂಡಿರುವವರು ಈ ಬಗ್ಗೆ ಮೊದಲು ಗಮನ ಹರಿಸಬೇಕು. ರಾಜ್ಯದ ಅಲ್ಪಸಂಖ್ಯಾತ ವರ್ಗದ ಜನ ನೊಂದು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ವಿರೋಧ ಪಕ್ಷದ ನಾಯಕರು ಸಹಾಯ ಮಾಡಲು ಹೋದಾಗ ನೊಂದವರ ಭಾವನೆ ವ್ಯಕ್ತವಾಗಿದ್ದು, ಇದನ್ನು ಸರ್ಕಾರ ಗಮನಿಸಿ, ಎಚ್ಚೆತ್ತುಕೊಳ್ಳಬೇಕು ಎಂದು ಸಲಹೆ ನೀಡಿದರು..

ರಾಷ್ಟ್ರ ಲಾಂಛನ ಕಾಪಾಡಬೇಕು: ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಯಾವ ಲಾಂಛನ ಇತ್ತೊ ಅದನ್ನೇ ಮುಂದುವರಿಸಿಕೊಂಡು ಹೋಗಬೇಕು. ಲಾಂಛನದಲ್ಲಿ ಶಾಂತಿಯ ಸಿಂಹವೇ ಇರಬೇಕೇ ಹೊರತು ಘರ್ಜನೆಯ ಸಿಂಹ ಬರಬಾರದು. ಅಲ್ಲದೇ, ದೇಶದಲ್ಲೂ ಶಾಂತಿ ನೆಲೆಸಿರಬೇಕು. ಎಲ್ಲಿಯೂ ಘರ್ಜನೆ ಇರಬಾರದು ಎಂದು ಅಭಿಪ್ರಾಯಪಟ್ಟರು.

ಕೇರಳದಿಂದ ಕರ್ನಾಟಕಕ್ಕೆ ಪಾದಯಾತ್ರೆ: 75ನೇ ಸ್ವಾತಂತ್ರ್ಯೋತ್ಸವ ಹಿನ್ನೆಲೆಯಲ್ಲಿ ಕಾಂಗ್ರೆಸ್ ವರಿಷ್ಠ 'ರಾಹುಲ್ ಗಾಂಧಿ ಅವರ ನೇತೃತ್ವದಲ್ಲಿ ಕೇರಳದಿಂದ ಚಾಮರಾಜನಗರ ಜಿಲ್ಲೆಯ ಮಾರ್ಗವಾಗಿ ಕರ್ನಾಟಕದಲ್ಲಿ ಸುಮಾರು 350ಕ್ಕೂ ಹೆಚ್ಚು ಕಿ.ಮೀ ಉದ್ದದ ಪಾದಯಾತ್ರೆ ನಡೆಸಲು ಉದ್ದೇಶಿಸಲಾಗಿದೆ. ಆ.1 ರಿಂದ 10ರವರೆಗೂ ಪ್ರತಿ ಜಿಲ್ಲೆಯಲ್ಲಿ 75 ಕಿ.ಮೀ ಪಾದಯಾತ್ರೆ ನಡೆಸಲಾಗುತ್ತದೆ. ನಂತರ ಆ.15 ರಂದು 1 ಲಕ್ಷಕ್ಕೂ ಹೆಚ್ಚು ಜನ ಪಕ್ಷಾತೀತವಾಗಿ ಸ್ವಾತಂತ್ರ್ಯ ನಡಿಗೆ ಕಾರ್ಯಕ್ರಮದಲ್ಲಿ ರಾಷ್ಟ್ರ ಧ್ವಜ ಹಿಡಿದು ಹೆಜ್ಜೆ ಹಾಕಲಿದ್ದಾರೆ. ದೇಶಕ್ಕೆ ಸ್ವಾತಂತ್ರ್ಯ, ರಾಷ್ಟ್ರಧ್ವಜ, ರಾಷ್ಟ್ರಗೀತೆ, ಸಂವಿಧಾನ ಕೊಟ್ಟು ದೇಶವನ್ನು ಅಭಿವೃದ್ಧಿಶೀಲ ರಾಷ್ಟ್ರ ಮಾಡಿದ್ದು ಕಾಂಗ್ರೆಸ್ ಹೊರತು ಬೇರೆ ಪಕ್ಷವಲ್ಲ ಎಂದರು.

ಕೇವಲ ಹುಟ್ಟುಹಬ್ಬದ ಕಾರ್ಯಕ್ರಮವಲ್ಲ: ಸಿದ್ದರಾಮೋತ್ಸವ ಕಾರ್ಯಕ್ರಮ ಕೇವಲ ಸಿದ್ದರಾಮಯ್ಯನವರ 75ನೇ ಹುಟ್ಟುಹಬ್ಬಕ್ಕೆ ಮಾತ್ರ ಸೀಮಿತವಾಗಿಲ್ಲ. ಈ ಹಿಂದಿನ ಕಾಂಗ್ರೆಸ್ ಸರ್ಕಾರದ ಸಾಧನೆಯ ಬಗ್ಗೆ ಅವಲೋಕಿಸುವ ಕಾರ್ಯಕ್ರಮ ಅದಾಗಿದೆ. ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ನುಡಿದಂತೆ ನಡೆದು ಆಡಳಿತ ನಡೆಸಿರುವ ಬಗ್ಗೆ, ನಮ್ಮ ಸರ್ಕಾರದ ಅವಧಿಯಲ್ಲಿನ ಎಲ್ಲ ಇಲಾಖೆಗಳಲ್ಲಿನ ಸಾಧನೆ ತಿಳಿಸಲಾಗುವುದು. ಜಾರಿಗೆ ತಂದ ಜನಪ್ರಿಯ ಯೋಜನೆಗಳಾದ ಕ್ಷೀರಭಾಗ್ಯ, ಅನ್ನಭಾಗ್ಯ, ರಸ್ತೆ ಅಭಿವೃದ್ಧಿ, ರೈತರಿಗೆ ನೀಡಲಾದ ನೆರವು, ಕೃಷಿ ಕ್ಷೇತ್ರಕ್ಕೆ ನೀಡಿದ ಪ್ರೋತ್ಸಾಹ ಸೇರಿದಂತೆ ಇನ್ನಿತರ ವಿಚಾರಗಳನ್ನು ಜನರಿಗೆ ತಲುಪಿಸುವ ಕಾರ್ಯಕ್ರಮವಾಗಿದೆ ಎಂದು ಸ್ಪಷ್ಟಪಡಿಸಿದರು.

ಜನರದ್ದು ದುಸ್ಥಿತಿ

ಉಂಟಾಗಿದ್ದು, ಆ ಸಂದರ್ಭ ಭೂಗರ್ಭ ಶಾಸ್ತ್ರ ವಿಜ್ಞಾನಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿ ಅಪಾಯದ ಮುನ್ಸೂಚನೆ ನೀಡಿದ್ದರು. ಇದೀಗ ಮಳೆ ಹೆಚ್ಚಾಗಿರುವ ಕಾರಣ ಬೆಟ್ಟ ಕುಸಿಯುವ ಭೀತಿ ಇರುವ ಹಿನ್ನೆಲೆಯಲ್ಲಿ ಅಲ್ಲಿ ನೆಲೆಸಿರುವ 68 ಕುಟುಂಬಗಳನ್ನು ಸುರಕ್ಷತಾ ಕ್ರಮವಾಗಿ ಸಂತ ಅನ್ನಮ್ಮ ಶಾಲೆಯಲ್ಲಿ ತೆರೆಯಲಾಗಿರುವ ಕಾಳಜಿ ಕೇಂದ್ರಕ್ಕೆ ಸ್ಥಳಾಂತರ ಮಾಡಲಾಗಿದೆ. ಈ ಕುಟುಂಬಗಳಿಗೆ ಆಹಾರ ಕಿಟ್‌ಗಳು, ಹಾಸಿಗೆ, ಹೊದಿಕೆ ಸೇರಿದಂತೆ ದಿನ ಬಳಕೆ ವಸ್ತುಗಳನ್ನು ಒದಗಿಸಲಾಗಿದೆ. ಕಾಳಜಿ ಕೇಂದ್ರಗಳಲ್ಲಿ ವೈದ್ಯರು, ಶುಶ್ರೂಷಕಿಯರು, ಆರೋಗ್ಯ ಸಹಾಯಕರನ್ನು ಕರ್ತವ್ಯಕ್ಕೆ ನಿಯೋಜಿಸಲಾಗಿದೆ. ಕರಡಿಗೋಡುವಿನಲ್ಲಿ ಕಾವೇರಿ ನದಿ ಪ್ರವಾಹ ಮಟ್ಟ ಮೀರಿ ಹರಿಯುತ್ತಿದ್ದು, ಕರಡಿಗೋಡು ನದಿ ತಟದ ಮನೆಗಳಿಗೆ ನೀರು ನುಗ್ಗಿದೆ. ಕಂದಾಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ತೆರಳಿ ಅಲ್ಲಿನ ನಿವಾಸಿಗಳನ್ನು ಸಮೀಪದ ಕಾಳಜಿ ಕೇಂದ್ರಕ್ಕೆ ತೆರಳುವಂತೆ ಸೂಚಿಸಿದ್ದಾರೆ.

ಪ್ರವಾಹ ಪರಿಸ್ಥಿತಿ: ಜಿಲ್ಲೆಯಾದ್ಯಂತ ಬಿರುಸಿನ ಮಳೆ ಮುಂದುವರೆದಿರುವ ಕಾರಣ ಎಲ್ಲಾ ನದಿಗಳಲ್ಲಿ ಪ್ರವಾಹ ಪರಿಸ್ಥಿತಿ ತಲೆದೋರಿದೆ. ಕಾವೇರಿ, ಲಕ್ಷ್ಮಣ ತೀರ್ಥ, ರಾಮತೀರ್ಥ ಸೇರಿದಂತೆ ಎಲ್ಲಾ ನದಿ ತೊರೆಗಳು ಉಕ್ಕಿ ಹರಿಯುತ್ತಿದ್ದು, ಕೆಲವು ಕಡೆಗಳಲ್ಲಿ ರಸ್ತೆ ಸಂಪರ್ಕ ಪ್ರವಾಹ ನೀರಿನಿಂದ ಬಂದ್ ಆಗಿದೆ. ಭಾಗಮಂಡಲ–ಅಯ್ಯಂಗೇರಿ, ಗುಹ್ಯ–ಕಕ್ಕಟ್ಟುಕಾಡು, ಹೊದ್ದೂರು–ನಾಪೋಕ್ಲು, ನಾಪೋಕ್ಲು–ಮೂರ್ನಾಡು, ಕರಡಿಗೋಡು–ಚಿಕ್ಕನಲ್ಲಿ ಗ್ರಾಮೀಣ ರಸ್ತೆಗಳು ಪ್ರವಾಹ ನೀರಿನಿಂದ ಸಂಪರ್ಕ ಕಡಿದುಕೊಂಡಿವೆ. ಕಾವೇರಿ ನದಿ ಪಾತ್ರದ ಗ್ರಾಮಗಳಾದ ಎಮ್ಮೆಮಾಡು, ಕೊಟ್ಟಮುಡಿ, ಬಲ್ಲಮಾವಟಿ, ನಾಪೋಕ್ಲು ವ್ಯಾಪ್ತಿಯಲ್ಲಿ ಪ್ರವಾಹ ಕಂಡು ಬಂದಿದೆ. ನಾಪೋಕ್ಲುವಿನ ಪಾಲೂರು ಹರಿಶ್ಚಂದ್ರ ದೇವಾಲಯ ಆವರಣ ಕಾವೇರಿ ನದಿ ನೀರಿನಿಂದ ಆವೃತ್ತವಾಗಿದೆ.

ದಕ್ಷಿಣ ಕೊಡಗಿನಲ್ಲಿ ಮಳೆಯಿಂದಾಗಿ ಲಕ್ಷ್ಮಣ ತೀರ್ಥ ಹಾಗೂ ರಾಮ ತೀರ್ಥ ನದಿಗಳಲ್ಲಿ ಪ್ರವಾಹ ಉಂಟಾಗಿದೆ. ಲಕ್ಷ್ಮಣ ತೀರ್ಥ ನದಿಯ ಉಪನದಿ ರಾಮತೀರ್ಥ ಉಕ್ಕಿ ಹರಿಯುತ್ತಿದ್ದು, ಪೊನ್ನಂಪೇಟೆ ತಾಲೂಕಿನ ಶ್ರೀಮಂಗಲ, ನಾಲ್ಕೇರಿ ಗ್ರಾಮಗಳಲ್ಲಿ ಪ್ರವಾಹ ಪರಿಸ್ಥಿತಿ ನಿರ್ಮಾಣವಾಗಿದೆ. ಕಾಫಿ, ಅಡಿಕೆ ಹಾಗೂ ಬಾಳೆ ತೋಟಗಳಿಗೆ ನೀರು ನುಗ್ಗಿದ್ದು, ಹತ್ತಾರು ಏಕರೆ ಕೃಷಿ ಭೂಮಿ ಸಂಪೂರ್ಣ ಜಲಾವೃತವಾಗಿದೆ. ಅಲ್ಲದೇ ರಾಮ ತೀರ್ಥ ನದಿ ಪ್ರವಾಹದಿಂದಾಗಿ ನಾಲ್ಕೇರಿ ಸೇತುವೆ ಸಂಪೂರ್ಣ ಮುಳುಗಡೆಯಾಗಿದೆ. ಸೇತುವೆ ಮೇಲೆ 5 ಅಡಿಗಳಷ್ಟು ನೀರು ಹರಿಯುತ್ತಿದ್ದು, ಬ್ಯಾರಿಕೇಡ್ ಅಳವಡಿಸಿ ಸಂಚಾರ ನಿಷೇಧಿಸಲಾಗಿದೆ. ಇನ್ನು ಉಕ್ಕಿ ಹರಿಯುತ್ತಿರುವ ಪ್ರವಾಹ ದಾಟಲಾರದೆ ನಾಲ್ಕೇರಿ ಗ್ರಾಮಸ್ಥರು ಪರದಾಡುವಂತಾಗಿದೆ.

ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಭೂ ಕುಸಿತ: ಕಳೆದ ರಾತ್ರಿ ಸುರಿದ ಧಾರಾಕಾರ ಮಳೆಗೆ ಕೊಡಗಿನ ಇತಿಹಾಸ ಪ್ರಸಿದ್ಧ ಪಾಲೂರು ಮಹಾಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ಭಾರೀ ಪ್ರಮಾಣದ ಮಣ್ಣು ಕುಸಿದಿದೆ. ಮಣ್ಣು ಕುಸಿದ ರಭಸಕ್ಕೆ ದೇವಾಲಯದ ಕೆಳ ಭಾಗದಲ್ಲಿ ವಾಸವಿರುವ ಅರ್ಚಕರ ಮನೆಗೆ ಹಾನಿಯಾಗಿದೆ. ಇಂದು ಮುಂಜಾನೆ 4 ಗಂಟೆ ಸುಮಾರಿಗೆ ಅರ್ಚಕರಾದ ದೇವಿಪ್ರಸಾದ್ ವಾಸವಿದ್ದ ಮನೆ ಏಕಾಏಕಿ ನಲುಗಿದಂತಾಗಿದೆ. ಈ ವೇಳೆ ಅಡುಗೆ ಮನೆಯಲ್ಲಿ ಕೆಸರು ಮಣ್ಣು ಕಾಣಿಸಿಕೊಂಡಿದೆ. ಇದರಿಂದ ಭೀತಿಗೊಂಡ ಅರ್ಚಕರ ಕುಟುಂಬಸ್ಥರು ಮನೆಯ ಹಿಂಭಾಗದಲ್ಲಿ ನೋಡಿದಾಗ ಭಾರೀ ಪ್ರಮಾಣದ ಮಣ್ಣು ಕುಸಿದಿರುವುದು ಕಂಡು ಬಂದಿದೆ. ಅಷ್ಟೇ ಅಲ್ಲದೇ ಮಣ್ಣಿನ ಜೊತೆಗೆ ಬಂಡೆಗಳು ಮನೆಯ ಗೋಡೆಗೆ ಅಪ್ಪಳಿಸಿದ್ದರಿಂದ ಮನೆಯ ಗೋಡೆಗಳಲ್ಲಿ ಬಿರುಕು ಕಾಣಿಸಿಕೊಂಡಿದೆ.

ಸೋಮವಾರಪೇಟೆ, ಶನಿವಾರಸಂತೆ, ಶಾಂತಳ್ಳಿ ವ್ಯಾಪ್ತಿಯಲ್ಲೂ ಧಾರಾಕಾರ ಮಳೆ ಸುರಿಯುತ್ತಿದ್ದು, ಮನೆ ಮೇಲೆ ಭೂ ಕುಸಿತ, ಜಾನುವಾರು ಸಾವನ್ನಪ್ಪಿದ ಘಟನೆಗಳು ನಡೆಸಿರುವ ಬಗ್ಗೆ ವರದಿಯಾಗಿದೆ. ಶಾಂತಳ್ಳಿ ಹೋಬಳಿ ಕೊತ್ತನಳ್ಳಿ ಗ್ರಾಮದ ಎನ್.ಟಿ. ಮೇದಪ್ಪ ಎಂಬುವರ ಮನೆಗೆ ಹಾನಿಯಾಗಿದೆ. ಪ್ರಸ್ತುತ ಮನೆ ವಾಸಕ್ಕೆ ಯೋಗ್ಯವಾಗಿಲ್ಲದ ಕಾರಣ ಈ ಕುಟುಂಬವನ್ನು ಸಮೀಪದ ಅಂಗನವಾಡಿ ಕೇಂದ್ರಕ್ಕೆ ಸ್ಥಳಾಂತರ ಮಾಡಲಾಗಿದೆ.

ಮಳೆ ವಿವರ: ಕಳೆದ 24 ಗಂಟೆ ಅವಧಿಯಲ್ಲಿ ಭಾಗಮಂಡಲ ವ್ಯಾಪ್ತಿಯಲ್ಲಿ 200 ಮಿ.ಮೀ, ಪೊನ್ನಂಪೇಟೆ ತಾಲೂಕಿನ ಹುದಿಕೇರಿಗೆ 190.60, ಸೋಮವಾರಪೇಟೆ ತಾಲೂಕಿನ ಶಾಂತಳ್ಳಿ ವ್ಯಾಪ್ತಿಯಲ್ಲಿ 178, ಮಡಿಕೇರಿ ತಾಲೂಕಿನ ಬಲ್ಲಮಾವಟಿ 155 ಮಿ.ಮೀ, ನಾಪೋಕ್ಲು ವ್ಯಾಪ್ತಿಯಲ್ಲಿ 107.40 ಮಿ.ಮೀ, ಶ್ರೀಮಂಗಲ 85, ಪೊನ್ನಂಪೇಟೆ ವ್ಯಾಪ್ತಿಯಲ್ಲಿ 82 ಮಿ.ಮೀ. ಮಳೆ ಸುರಿದಿದೆ. ಪರಿಣಾಮ ಸಹಜವಾಗಿಯೇ ನದಿಗಳಲ್ಲಿ ನೀರಿನ ಪ್ರಮಾಣ ಉಕ್ಕೇರಿ, ಪ್ರವಾಹ ಉಂಟಾಗಲು ಕಾರಣವಾಗಿದೆ.

ಪ್ರವಾಹದಿಂದ ನೂರಾರು ಕುಟುಂಬಗಳು ಸಂಕಷ್ಟ





ಅತೀವ ಮಳೆ, ಭೂ ಕುಸಿತ, ನದಿ ಪ್ರವಾಹದಿಂದ ಇದುವರೆಗೆ 580 ಮಂದಿ ಸಂಕಷ್ಟಕ್ಕೆ ಸಿಲುಕಿದ್ದಾರೆ. 174 ಕುಟುಂಬಗಳ 556 ಮಂದಿಯನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ. ಈಗಾಗಲೇ ಜಿಲ್ಲೆಯಲ್ಲಿ 4 ಕಾಳಜಿ ಕೇಂದ್ರಗಳು ಕಾರ್ಯಾರಂಭ ಮಾಡಿದ್ದು, 122 ಕುಟುಂಬಗಳ 353 ಮಂದಿ ಆಶ್ರಯ ಪಡೆದಿದ್ದಾರೆ.

ಈವರೆಗೆ 180 ಮನೆಹಾನಿ ಪ್ರಕರಣಗಳು ದಾಖಲಾಗಿದ್ದು, ಈ ಪೈಕಿ 4 ಮನೆಗಳು ಸಂಪೂರ್ಣ ಧ್ವಂಸವಾಗಿವೆ. 33 ಮನೆಗಳಿಗೆ ತೀವ್ರ ಹಾನಿಯಾಗಿದ್ದು, 143 ಮನೆಗಳಿಗೆ ಭಾಗಶಃ ಹಾನಿ ಸಂಭವಿಸಿದೆ. 76 ಮನೆಹಾನಿ ಪ್ರಕರಣಗಳಿಗೆ ಈಗಾಗಲೇ ಪರಿಹಾರ ವಿತರಿಸಲಾಗಿದೆ. ಮಳೆ ಕಾರಣದಿಂದ 84 ಶಾಲೆಗಳು, 39 ಅಂಗನವಾಡಿ ಕೇಂದ್ರಗಳಿಗೆ ಹಾನಿಯಾಗಿದೆ. ಚೆಸ್ಕಾಂ ಇಲಾಖೆಗೆ ಸಂಬಂಧಿಸಿದಂತೆ 1378 ವಿದ್ಯುತ್ ಕಂಬಗಳಿಗೆ ಹಾನಿಯಾಗಿದ್ದು, ಈ ಪೈಕಿ 1175 ಕಂಬಗಳು ಹಾಗೂ 132 ಟ್ರಾನ್ಸ್‌ಫಾರ್ಮರ್‌ಗಳನ್ನು ಬದಲಿಸಲಾಗಿದೆ. ಭಾರೀ ಮಳೆ, ಪ್ರವಾಹ ಮತ್ತು ಶೀತ ವಾತಾವರಣದಿಂದ 17 ಜಾನುವಾರುಗಳು ಮೃತಪಟ್ಟಿದ್ದು, 4 ಪ್ರಕರಣಗಳಲ್ಲಿ ಪರಿಹಾರ ನೀಡಲಾಗಿದೆ ಎಂದು ಜಿಲ್ಲಾಡಳಿತ ಮಾಹಿತಿ ನೀಡಿದೆ.

ಮೂರನೇ ಆಷಾಢ ಶುಕ್ರವಾರ

ಭಕ್ತಿಭಾವದಿಂದ ಜಿಟಿ ಜಿಟಿ ಮಳೆ ನಡುವೆ ನಾಡದೇವಿ ಚಾಮುಂಡೇಶ್ವರಿ ದರ್ಶನ ಪಡೆದ ಭಕ್ತ ಸಾಗರ





ಚಾಮುಂಡಿಬೆಟ್ಟದಲ್ಲಿ ಕಂಡು ಬಂದ ಭಕ್ತಸಾಗರ



ದೇವಿಯ ದರ್ಶನ ಪಡೆಯುತ್ತಿರುವ ಭಕ್ತರು.

ಮೈಸೂರು,ಜು.15(ಎಂಟಿವೈ)– ಜಿಟಿ ಜಿಟಿ ಮಳೆ, ಕೊರೆಯುವ ಚಳಿಯ ನಡುವೆಯೂ ಆಷಾಢ ಮೂರನೇ ಶುಕ್ರವಾರವಾದ ಇಂದು ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಾಲಯದಲ್ಲಿ ನಡೆದ ವಿಶೇಷ ಪೂಜಾ ಮಹೋತ್ಸವದಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡು ನಾಡ ದೇವತೆಯ ದರ್ಶನ ಪಡೆದರು.

ಕಳೆದ ಎರಡು ವಾರಗಳಿಗೆ ಹೋಲಿಸಿದರೆ ಮೂರನೇ ಶುಕ್ರವಾರವಾದ ಇಂದು ಬೆಟ್ಟಕ್ಕೆ ಬಂದ ಭಕ್ತರ ಸಂಖ್ಯೆ ಹೆಚ್ಚಾಗಿತ್ತು. ರಾಜ್ಯದ ವಿವಿಧ ಜಿಲ್ಲೆಗಳಿಂದ ಭಕ್ತರ ದಂಡೇ ಬೆಟ್ಟಕ್ಕೆ ಆಗಮಿಸಿ ದೇವಿಯ ದರ್ಶನ ಪಡೆದು ಪುನೀತರಾದರು. ಮುಂಜಾನೆಯಿಂದ ಬೆಳಗ್ಗೆ 10 ಗಂಟೆವರೆಗೂ ಬೆಟ್ಟದಲ್ಲಿ ಮೋಡ ಕವಿದ ವಾತಾವರಣದೊಂದಿಗೆ ಜಿಟಿ ಜಿಟಿ ಮಳೆ ಬೀಳುತ್ತಿದ್ದರೂ, ಭಕ್ತರು ಯಾವುದನ್ನು ಲೆಕ್ಕಿಸದೇ ನಾಡದೇವಿಯ ದರ್ಶನ ಪಡೆಯಲು ಮುಂದಾದರು.

ಮುಂಜಾನೆಯಿಂದಲೇ ಪೂಜೆ: ನಾಡದೇವಿ ಚಾಮುಂಡೇಶ್ವರಿಗೆ ದೇವಾಲಯದ ಪ್ರಧಾನ ಆಗಮಿಕ ಡಾ.ಎನ್ ಶಶಿಶೇಖರ್ ದೀಕ್ಷಿತ್ ನೇತೃತ್ವದಲ್ಲಿ ಮುಂಜಾನೆ 3.30 ರಿಂದಲೇ ಮಹಾನ್ಯಾಸಕ ಪೂರ್ವಕ ರುದ್ರಾಭಿಷೇಕ, ಪಂಚಾಮೃತ ಅಭಿಷೇಕ, ಅರ್ಚನೆ ಸೇರಿದಂತೆ ವಿವಿಧ ಪೂಜಾ ಕೈಂಕರ್ಯ ಜರುಗಿದವು. ಮಹಾಮಂಗಳಾರತಿ ಬೆಳಗಿದ ಬಳಿಕ ಮುಂಜಾನೆ 5.30ರಿಂದ ಭಕ್ತರಿಗೆ ದರ್ಶನಕ್ಕೆ ಅವಕಾಶ ಮಾಡಿಕೊಡಲಾಯಿತು. ಬೆಳಗ್ಗೆ 9.30ಕ್ಕೆ ದೇವಾಲಯದ ಪ್ರಾಂಗಣದಲ್ಲೇ ಉತ್ಸವ ಮೂರ್ತಿ ಮೆರವಣಿಗೆ ನಡೆಸಲಾಯಿತು. ಸಂಪ್ರದಾಯದಂತೆ ದೇವತೆಗೆ ಪೊಲೀಸ್ ಇಲಾಖೆಯಿಂದ ಗಾರ್ಡ್ ಆಫ್ ಹಾನರ್(ಗನ್ ಸೆಲ್ಯೂಟ್) ಸಲ್ಲಿಸಲಾಯಿತು. ರಾತ್ರಿ 9.30 ರವರೆಗೆ ಭಕ್ತರಿಗೆ ದೇವರ ದರ್ಶನ ಅವಕಾಶ ಕಲ್ಪಿಸಲಾಗಿತ್ತು.

ಮಹಾಲಕ್ಷ್ಮಿ ಅಲಂಕಾರ: ಆಷಾಢ ಶುಕ್ರವಾರದ ಪೂಜಾ ಮಹೋತ್ಸವದ ಹಿನ್ನೆಲೆಯಲ್ಲಿ ಚಾಮುಂಡೇಶ್ವರಿ ದೇವಾಲಯದ ಮುಖ್ಯದ್ವಾರದಿಂದ ಗರ್ಭಗುಡಿಯ ಮುಂಭಾಗದ ಪ್ರಾಂಗಣವನ್ನು ಬಣ್ಣ ಬಣ್ಣದ ಹೂವುಗಳಿಂದ ಅಲಂಕರಿಸಲಾಗಿತ್ತು. ಅಲ್ಲದೇ, ದೇವಿಗೆ ಮಹಾಲಕ್ಷ್ಮಿ ಅಲಂಕಾರ ಮಾಡಲಾಗಿತ್ತು.

ಮೆಟ್ಟಿಲು ಮೂಲಕ ವಿವಿಧ ಹರಕೆ ಹೊತ್ತ ಮಹಿಳೆಯರು, ಯುವತಿಯರೂ ಸೇರಿದಂತೆ ವಿವಿಧೆಡೆಯಿಂದ ಆಗಮಿಸಿದ್ದ ಭಕ್ತರು ಗುರುವಾರ ರಾತ್ರಿಯಿಂದ ಶುಕ್ರವಾರ ಸಂಜೆವರೆಗೂ ನಿರಂತರವಾಗಿ ಬೆಟ್ಟಕ್ಕೆ ಆಗಮಿಸಿ ದೇವಿಯ ದರ್ಶನ ಪಡೆದರು. ಮಲ್ಟಿಲೆವೆಲ್ ಪಾರ್ಕಿಂಗ್ ಕಟ್ಟಡದಲ್ಲಿ ಪ್ರಸಾದ ವಿನಿಯೋಗಿಸಲು ವ್ಯವಸ್ಥೆ ಮಾಡಲಾಗಿತ್ತು ಬೆಳಗ್ಗೆ 7.30ರಿಂದ ಆರಂಭವಾದ ಪ್ರಸಾದ ವಿತರಣೆ ಸಂಜೆವರೆಗೂ ನಡೆಯಿತು.

ಗಣ್ಯರಿಂದ ದರ್ಶನ: ಆಷಾಢ ಶುಕ್ರವಾರದ ಹಿನ್ನೆಲೆಯಲ್ಲಿ ಮಾಜಿ ಸಚಿವ ಹೆಚ್.ಡಿ. ರೇವಣ್ಣ ಶಾಸಕರಾದ ಎಸ್.ಎ. ರಾಮದಾಸ್, ಎಲ್.ನಾಗೇಂದ್ರ, ಕೆಪಿಸಿಸಿ ಅಧ್ಯಕ್ಷ ಡಿಕೆ ಶಿವಕುಮಾರ್, ಮಾಜಿ ಸಂಸದ ಆರ್.ಧ್ರುವನಾರಾಯಣ್, ಮಾಜಿ ಶಾಸಕರಾದ ಎಂ.ಕೆ. ಸೋಮಶೇಖರ್, ವಾಸು ಸೇರಿದಂತೆ ಇನ್ನಿತರ ಗಣ್ಯರು ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡಿ ಚಾಮುಂಡೇಶ್ವರಿ ದರ್ಶನ ಪಡೆದರು.

ಉಚಿತ ಬಸ್ ವ್ಯವಸ್ಥೆ: ಚಾಮುಂಡಿಬೆಟ್ಟಕ್ಕೆ ಖಾಸಗಿ ವಾಹನಗಳ ಸಂಚಾರ ನಿರ್ಬಂಧಿಸಲಾಗಿತ್ತು. ಹೀಗಾಗಿ ಲಲಿತಮಹಲ್ ಪ್ಯಾಲೇಸ್ ಮೈದಾನದಿಂದ ಸಾರಿಗೆ ಸಂಸ್ಥೆಯ 50 ಬಸ್‌ಗಳನ್ನು ಭಕ್ತರಿಗಾಗಿ ನಿಯೋಜಿಸಲಾಗಿತ್ತು ಖಾಸಗಿ ವಾಹನಗಳಲ್ಲಿ ಬಂದ ಭಕ್ತರು ತಮ್ಮ ವಾಹನಗಳನ್ನು ನಿಲ್ಲಿಸಿ, ಸಾರಿಗೆ ಬಸ್ ಮೂಲಕ ಉಚಿತವಾಗಿ ಬೆಟ್ಟಕ್ಕೆ ಪ್ರಯಾಣಿಸಿದರು. ಎರಡು ಪಾಳಿಯದಲ್ಲಿ ತಲಾ 14 ಮಂದಿ ಸಾರಿಗೆ ಸಿಬ್ಬಂದಿಗಳು ಬೆಟ್ಟ ಹಾಗೂ ಲಲಿತಮಹಲ್ ಮೈದಾನದಲ್ಲಿ ಕರ್ತವ್ಯ ನಿರ್ವಹಿಸಿ ಬಸ್‌ಗಳ ಸುಗಮ ಸಂಚಾರಕ್ಕೆ ಶ್ರಮಿಸಿದರು. ಒಂದೊಂದು ಬಸ್ ನಲ್ಲಿ 45 ಮಂದಿ ಪ್ರಯಾಣಿಕರು ತೆರಳು ವುದಕ್ಕೆ ಅವಕಾಶ ಮಾಡಿಕೊಡಲಾಗಿತ್ತು.

ಪಾಸ್‌ವುಳ್ಳವರಿಗೆ ನಿರಾಸೆ, ವಾಗ್ವಾದ

ಕಳೆದ ವಾರ ಬೆಂಗಳೂರು ಸೇರಿದಂತೆ ಹೊರ ಜಿಲ್ಲೆಯವರು ನೂರಾರು ವಿಐಪಿ ಪಾಸ್ ತಂದು ಚಾಮುಂಡಿಬೆಟ್ಟಕ್ಕೆ ಆಗಮಿಸಿ, ಗಣ್ಯರ ಸಾಲಿನಲ್ಲಿ ನೇರವಾಗಿ ತೆರಳಿ ದೇವಿ ದರ್ಶನ ಪಡೆದಿದ್ದರು. ಅಲ್ಲದೆ, ಹಲವು ಖಾಸಗಿ ವಾಹನಗಳು ಬೆಟ್ಟಕ್ಕೆ ಪ್ರವೇಶಿಸಿದ್ದವು. ಇದಕ್ಕೆ ಸಾರ್ವಜನಿಕ ವಲಯದಿಂದ ಆಕ್ಷೇಪ ವ್ಯಕ್ತವಾಗಿತ್ತು. ಈ ಹಿನ್ನೆಲೆಯಲ್ಲಿ ವಿಐಪಿ ಪಾಸ್‌ಗಳನ್ನು ರದ್ದುಗೊಳಿಸಲಾಗಿತ್ತು. ಆದರೆ ಈಗಾಗಲೇ ಪಾಸ್ ಪಡೆದಿದ್ದ ನೂರಾರು ಮಂದಿ ಇಂದು ತಮ್ಮ ಖಾಸಗಿ ವಾಹನದಲ್ಲಿ ಬೆಟ್ಟಕ್ಕೆ ಪ್ರವೇಶ ಪಡೆಯಲು ಮುಂದಾದರು. ಪಾಸ್ ರದ್ದು ಮಾಡಿದ್ದ ಹಿನ್ನೆಲೆಯಲ್ಲಿ ಪೊಲೀಸರು ಯಾವುದೇ ಖಾಸಗಿ ವಾಹನಗಳು ಬೆಟ್ಟ ಪ್ರವೇಶಿಸಲು ಬಿಡಲಿಲ್ಲ. ಈ ವೇಳೆ ಪಾಸ್ ಪಡೆದಿದ್ದ ಹಲವು ಮಂದಿ ಪೊಲೀಸರೊಂದಿಗೆ ವಾಗ್ವಾದ ನಡೆಸಿದರು. ಸಚಿವರಿಂದಲೇ ಪಾಸ್ ಪಡೆದಿದ್ದೇವೆ. ಹಿರಿಯ ಅಧಿಕಾರಿಗಳೇ ಪಾಸ್ ನೀಡಿದ್ದಾರೆ ಎಂದು ಹೇಳಿದರೂ ಕೂಡ ಪೊಲೀಸರು ಸೊಪ್ಪು ಹಾಕದೆ ಬೆಟ್ಟಕ್ಕೆ ಖಾಸಗಿ ವಾಹನ ಪ್ರವೇಶಕ್ಕೆ ಅವಕಾಶ ನೀಡಲಿಲ್ಲ. ಈ ವೇಳೆ ಕೆಲವರು ಯಾರಿಗೋ ಮೊಬೈಲ್ ಕರೆ ಮಾಡಿ, ಸಚಿವರ ಆಪ್ತ ಕಾರ್ಯದರ್ಶಿಗಳು ಮಾತನಾಡುತ್ತಿದ್ದಾರೆ ಎಂದು ಪೊಲೀಸರಿಗೆ ಮೊಬೈಲ್ ಕೊಡಲು ಮುಂದಾದರೂ, ಭದ್ರತೆಗೆಂದು ನಿಯೋಜಿಸಿದ್ದ ಪೊಲೀಸರು ಯಾರ ಮಾತಿಗೆ ಮನ್ನಣೆ ನೀಡದೆ ತಮ್ಮ ಕರ್ತವ್ಯ ನಿಭಾಯಿಸಿದರು. ಕೊನೆಗೆ ಲಲಿತಮಹಲ್ ಮೈದಾನದಲ್ಲಿ ತಮ್ಮ ವಾಹನ ನಿಲ್ಲಿಸಿ, ಸರ್ಕಾರಿ ಬಸ್‌ನಲ್ಲಿ ಬೆಟ್ಟಕ್ಕೆ ಪ್ರಯಾಣಿಸಿದರು.

ಕಾರಿನಲ್ಲಿ ಕುಳಿತು ಬೆಂಕಿ ಹಚ್ಚಿಕೊಂಡು ಕೆಎಂಎಫ್ ನಿವೃತ್ತ ಅಧಿಕಾರಿ ಆತ್ಮಹತ್ಯೆ

ಕಾರಿನೊಂದಿಗೆ ಸುಟ್ಟು ಕರಕಲಾದ ಶಿವಣ್ಣ



ಮೈಸೂರು, ಜು. 15(ಆರ್‌ಕೆ)– ಕೆಎಂಎಫ್‌ನ ನಿವೃತ್ತ ಅಧಿಕಾರಿಯೊಬ್ಬರು ಕಾರಿನಲ್ಲೇ ಕುಳಿತು ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆಗೆ ಶರಣಾದ ಘಟನೆ ಮೈಸೂರಿನ ಬಾಪೂಜಿ ನಗರದಲ್ಲಿರುವ ಹರಿ ವಿದ್ಯಾಲಯದ ಹಿಂಭಾಗ ಶುಕ್ರವಾರ ಮಧ್ಯಾಹ್ನ ನಡೆದಿದೆ.

ಮಂಗಳೂರಿನ ಕೆಎಂಎಫ್‌ನಲ್ಲಿ ಅಧಿಕಾರಿಯಾಗಿದ್ದು, ಸ್ವಯಂ ನಿವೃತ್ತಿ ಪಡೆದು ಮೈಸೂರಿನ ಬಾಪೂಜಿ ನಗರದ ಹರಿ ವಿದ್ಯಾಲಯದ ಬಳಿ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದ ಶಿವಣ್ಣ(61) ಆತ್ಮಹತ್ಯೆಗೆ ಶರಣಾದವರಾಗಿದ್ದು, ಅನಾರೋಗ್ಯದ ಕಾರಣದಿಂದ ಇವರು ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಪ್ರಾಥಮಿಕ ವರದಿಯಿಂದ ಗೊತ್ತಾಗಿದ್ದು, ಬೇರೆ ಏನಾದರೂ ಕಾರಣವಿರಬಹುದೇ ಎಂಬುದರ ಬಗ್ಗೆ ತನಿಖೆ ನಡೆಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಅನಾರೋಗ್ಯದಿಂದ ಬಳಲುತ್ತಿದ್ದ ಶಿವಣ್ಣ, ತಮ್ಮ ಯೋಗಕ್ಷೇಮ ನೋಡಿಕೊಳ್ಳಲೆಂದು ಮಹಿಳೆಯೊಬ್ಬರನ್ನು ಕೇರ್ ಟೇಕರ್ ಆಗಿ ನಿಯೋಜಿಸಿಕೊಂಡಿದ್ದರು. ಇಂದು ಮಧ್ಯಾಹ್ನ ಮನೆಯಿಂದ ತಮ್ಮ ಆಲ್ಟೋ ಕಾರಿನಲ್ಲಿ ತೆರಳಿದ ಅವರು, ಮನೆಯಿಂದ ಸುಮಾರು ಅರ್ಧ ಕಿ.ಮೀ. ದೂರದಲ್ಲಿ ಹರಿ ವಿದ್ಯಾಲಯದ ಹಿಂಭಾಗ ಕಾರಿನ ಡ್ರೈವಿಂಗ್ ಸೀಟ್‌ನಲ್ಲಿ ಕುಳಿತು ಬೆಂಕಿ ಹಚ್ಚಿಕೊಂಡಿದ್ದಾರೆ. ಕಾರು ಹೊತ್ತಿ ಉರಿಯುತ್ತಿರುವುದನ್ನು ಕಂಡ ಸಾರ್ವಜನಿಕರು ಪೊಲೀಸರಿಗೆ ಮಾಹಿತಿ ನೀಡಿದ್ದರು. ವಿಷಯ ತಿಳಿಯುತ್ತಿದ್ದಂತೆಯೇ ಅಗ್ನಿಶಾಮಕ ದಳದ ಸಿಬ್ಬಂದಿಗಳೊಂದಿಗೆ ಘಟನಾ ಸ್ಥಳಕ್ಕೆ ಧಾವಿಸಿದ ಸರಸ್ವತಿಪುರಂ ಠಾಣೆ ಪೊಲೀಸರು ಧಾವಿಸುವುದರೊಳಗಾಗಿ ಕಾರು ಸಂಪೂರ್ಣವಾಗಿ ಸುಟ್ಟು ಕರಕಲಾಗಿದ್ದು, ಡ್ರೈವಿಂಗ್ ಸೀಟ್‌ನಲ್ಲಿ ಶಿವಣ್ಣ ಅವರೂ ಸಹ ಸುಟ್ಟು ಹೋಗಿದ್ದರು. ಶಿವಣ್ಣ ಅವರು ಅನಾರೋಗ್ಯದಿಂದ ಬಳಲುತ್ತಿದ್ದರು. ಅಲ್ಲದೇ ಕೌಟುಂಬಿಕ ಸಮಸ್ಯೆಯೂ ಕೂಡ ಅವರಿಗಿತ್ತು ಎನ್ನಲಾಗಿದ್ದು, ಕಳೆದ ಕೆಲ ವರ್ಷಗಳಿಂದ ಪತ್ನಿ ಮತ್ತು ಮಕ್ಕಳು ಅವರಿಂದ ದೂರ ಉಳಿದಿದ್ದರು. ಎಂದು ಪೊಲೀಸರ ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ. ಶಿವಣ್ಣ ಅವರ ಸಹೋದರರು, ಮತ್ತಿತರ ಸಂಬಂಧಿಕರು ವಿಷಯ ತಿಳಿಯುತ್ತಿದ್ದಂತೆಯೇ ಸರಸ್ವತಿಪುರಂ ಠಾಣೆಗೆ ಆಗಮಿಸಿದ್ದಾರೆ. ಆದರೆ ಪತ್ನಿ ಯಾಗಲೀ, ಮಕ್ಕಳಾಗಲೀ ಬಂದಿಲ್ಲ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಸರಸ್ವತಿಪುರಂ ಠಾಣೆ ಪೊಲೀಸರು ಮೃತದೇಹವನ್ನು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರಕ್ಕೆ ಸ್ಥಳಾಂತರಿಸಿ, ತನಿಖೆ ಮುಂದುವರೆಸಿದ್ದಾರೆ.

ಅಮರನಾಥ ಯಾತ್ರೆಗೆ ತೆರಳಿದ್ದ
ಮೈಸೂರಿನ ನಿವೃತ್ತ ಪ್ರಾಂಶುಪಾಲ ಹೃದಯಾಘಾತದಿಂದ ಸಾವು



ಮೈಸೂರು, ಜು.15– ಅಮರನಾಥ ಯಾತ್ರೆಗೆ ತೆರಳಿದ್ದ ಮೈಸೂರಿನ ವ್ಯಕ್ತಿಯೊಬ್ಬರು ಹೃದಯಾಘಾತದಿಂದ ಸಾವನ್ನಪ್ಪಿದ್ದಾರೆ. ಮೈಸೂರಿನ ಬೋಗಾದಿ 2ನೇ ಹಂತದ ನಿವಾಸಿ ಹಾಗೂ ಸುತ್ತೂರು ಜೆಎಸ್‌ಎಸ್ ಡಿಇಡಿ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಡಿ.ಎನ್.ಬಸವರಾಜು(68) ಸಾವನ್ನಪ್ಪಿದವರು. ಇವರು ಕುಟುಂಬ ಸದಸ್ಯರೊಂದಿಗೆ ವೈಷ್ಣವಿದೇವಿ, ಅಮರನಾಥ ಯಾತ್ರೆ ಸೇರಿದಂತೆ ಉತ್ತರ ಭಾರತದ ಪ್ರವಾಸ ಕೈಗೊಂಡಿದ್ದರು. ಅದರಂತೆ ಅಮರನಾಥ ಯಾತ್ರೆ ಮುಗಿಸಿ ವಾಪಾಸ್ಸಾಗುವಾಗ ಬಸವರಾಜು ಅವರು ಹೃದಯಾಘಾತದಿಂದ ಸಾವನ್ನಪ್ಪಿದ್ದಾರೆ. ಮೃತರು ಜೆಎಸ್‌ಎಸ್ ಸಂಸ್ಥೆಗಳಲ್ಲಿ ಶಿಕ್ಷಕರಾಗಿ, ಪ್ರಾಂಶುಪಾಲರಾಗಿ 33 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು ಎನ್ನಲಾಗಿದೆ. ಮೃತರ ಪಾರ್ಥಿವ ಶರೀರ ಶನಿವಾರ ಮುಂಜಾನೆ ಮೈಸೂರಿಗೆ ಆಗಮಿಸಲಿದ್ದು, ಬೋಗಾದಿಯ ಅವರ ನಿವಾಸದಲ್ಲಿ ಪಾರ್ಥಿವ ಶರೀರವನ್ನು ಬೆಳಗ್ಗೆ 6 ರಿಂದ 9.30ರವರೆಗೆ ಅಂತಿಮ ದರ್ಶನಕ್ಕೆ ಇಡಲಾಗುವುದು. ಮೃತರು ಪತ್ನಿ, ದಾಕ್ಷಾಯಿಣಿ ಬಿ.ಎಸ್, ಮಕ್ಕಳಾದ ಎಂ.ಬಿ ದರ್ಶನ್ ಮತ್ತು ಹಿಂದೂದರ ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ. ಬೆಳಗ್ಗೆ 10 ಗಂಟೆ ಬಳಿಕ ಬೋಗಾದಿಯಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಮೂಲಗಳು ತಿಳಿಸಿವೆ.

ಸಂಗೀತ, ನೃತ್ಯ ತರಗತಿಗಳು

ಮೈಸೂರು, ಜು. 15– ಮೈಸೂರಿನ ಆದಿಚುಂಚನಗಿರಿ ರಸ್ತೆಯಲ್ಲಿರುವ ವೀಣೆ ಶೇಷಣ್ಣ ಭವನದಲ್ಲಿರುವ ಗಾನಭಾರತೀ ಸಂಗೀತ ನೃತ್ಯ ಶಾಲೆಯಲ್ಲಿ ಮೇ ತಿಂಗಳಿಂದ ಸಂಗೀತ ಮತ್ತು ನೃತ್ಯ ತರಗತಿಗಳನ್ನು ಪ್ರಾರಂಭಿಸಲಾಗಿದೆ. ಶಾಸ್ತ್ರೀಯ ಸಂಗೀತ, ಸುಗಮ ಸಂಗೀತ, ಭರತನಾಟ್ಯ, ವೀಣೆ, ಪಿಟೀಲು, ಮೃದಂಗ, ತಬಲಾ, ಕೊಳಲು ಮತ್ತು ಕೀಬೋರ್ಡ್ ವಿಭಾಗಗಳಿಗೆ ಪ್ರವೇಶ ಲಭ್ಯವಿದೆ. ಹೆಚ್ಚಿನ ಮಾಹಿತಿಗೆ ದೂ.0821–2560313 ಸಂಪರ್ಕಿಸಬಹುದು.

ಬ್ರಾಂಡೆಡ್ ಆಹಾರ ಪದಾರ್ಥಗಳ ಮೇಲಿನ ಶೇ.5 ಜಿಎಸ್‌ಟಿ ವಿರೋಧಿಸಿ
ಮೈಸೂರಲ್ಲಿ ಎಪಿಎಂಸಿ ಧಾನ್ಯ ವರ್ತಕರಿಂದ ವಹಿವಾಟು ಬಂದ್



ಮೈಸೂರು, ಜು. 15 (ಆರ್‌ಕೆ)– ಬ್ರಾಂಡೆಡ್ ಆಹಾರ ಪದಾರ್ಥಗಳ ಮೇಲೆ ಶೇ. 5 ರಷ್ಟು ಜಿಎಸ್‌ಟಿ ವಿಧಿಸಿರುವುದನ್ನು ಖಂಡಿಸಿ ಮೈಸೂರಿನ ಬಂಡಿಪಾಳ್ಯ ಎಪಿಎಂಸಿ ಧಾನ್ಯವರ್ತಕರು ಇಂದು ತಮ್ಮ ವಹಿವಾಟು ಬಂದ್ ಮಾಡಿ, ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್ ಅವರಿಗೆ ಮನವಿ ಸಲ್ಲಿಸಿದರು.

ಬ್ರಾಂಡೆಡ್ ಆಹಾರ ಪದಾರ್ಥಗಳ ಮೇಲೆ ಶೇ.5ರಷ್ಟು ಜಿಎಸ್‌ಟಿ ವಿಧಿಸಿರುವುದನ್ನು ಖಂಡಿಸಿ ರಾಜ್ಯ ಧಾನ್ಯ ವರ್ತಕರ ಸಂಘ ನೀಡಿದ್ದ ಬಂದ್ ಕರೆ ಹಿನ್ನೆಲೆಯಲ್ಲಿ ಮೈಸೂರಿನ ಬಂಡಿಪಾಳ್ಯ ಎಪಿಎಂಸಿಯಲ್ಲಿರುವ ಧಾನ್ಯ ವರ್ತಕರು ಇಂದು ತಮ್ಮ ವಹಿವಾಟನ್ನು ಬಂದ್ ಮಾಡಿದ್ದರು. ಇದಕ್ಕೆ ಮೈಸೂರು ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರೀ (ಎಂಸಿಸಿಐ) ಬೆಂಬಲ ಸೂಚಿಸಿತ್ತು.

ಬಂಡಿಪಾಳ್ಯ ಎಪಿಎಂಸಿಯಲ್ಲಿ ಇಂದು ತರಕಾರಿ ವಹಿವಾಟು ಹೊರತುಪಡಿಸಿ, ಧಾನ್ಯ ವರ್ತಕರು ಸೇರಿದಂತೆ ಎಲ್ಲಾ ರೀತಿಯ ವರ್ತಕರ 1800 ಮಳಿಗೆಗಳನ್ನು ಬಂದ್ ಮಾಡಲಾಗಿತ್ತು ಎಂದು ಮೈಸೂರು ಧಾನ್ಯ ವರ್ತಕರ ಸಂಘದ ಕಾರ್ಯದರ್ಶಿ ಆರ್.ಆನಂದ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು. ಸಂತೆಪೇಟೆ ವರ್ತಕರು ತಮ್ಮ ಸಂಘದ ಸದಸ್ಯತ್ವ ಪಡೆಯದ ಕಾರಣದಿಂದ ವಹಿವಾಟು ನಡೆಸಿದರು ಎಂದು ಹೇಳಿದ ಅವರು, ಮುಂದಿನ ದಿನಗಳಲ್ಲಿ ಅವರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಹೋರಾಟ ರೂಪಿಸಲಾಗುವುದು ಎಂದರು. ಬಂದ್ ಬಗ್ಗೆ ವ್ಯಾಪಕ ಪ್ರಚಾರ ನೀಡಿರಲಿಲ್ಲ. ನಿನ್ನೆಯಷ್ಟೇ ವಾಟ್ಸಾಪ್ ಗ್ರೂಪ್‌ಗಳ ಮೂಲಕ ಮಾಹಿತಿ ರವಾನಿಸಲಾಗಿತ್ತು. ಹೀಗಾಗಿ ಗ್ರಾಮಾಂತರ ಪ್ರದೇಶದಲ್ಲಿರುವ ಹಲವಾರು ಚಿಲ್ಲರೆ ಅಂಗಡಿ ಮಾಲೀಕರಿಗೆ ಬಂದ್ ವಿಷಯ ಗೊತ್ತಿಲ್ಲದೇ ಧಾನ್ಯಗಳ ಖರೀದಿಗಾಗಿ ಎಪಿಎಂಸಿಗೆ ಬಂದಿದ್ದರು. ಅವರಿಗೆ ಸ್ವಲ್ಪ ತೊಂದರೆಯಾಯಿತು ಎಂದ ಅವರು, ಇಂದಿನ ಬಂದ್‌ನಿಂದಾಗಿ ಸುಮಾರು 30 ಕೋಟಿ ರೂ.ಗಳಷ್ಟು ವ್ಯವಹಾರ ಸ್ಥಗಿತವಾಗಿದೆ ಎಂದು ಹೇಳಿದರು.

ಎಲ್ಲಾ ರೀತಿಯ ವರ್ತಕರು ವಹಿವಾಟು ಬಂದ್ ಮಾಡಿದ್ದರಿಂದ ಬಂಡಿಪಾಳ್ಯ ಎಪಿಎಂಸಿ ಬಿಕೋ ಎನ್ನುತ್ತಿತ್ತು. ಆಹಾರ ಧಾನ್ಯಗಳನ್ನು ಸಾಗಿಸುವ ಗೂಡ್ಸ್ ವಾಹನಗಳ ಸಂಚಾರ ಸ್ಥಗಿತಗೊಂಡಿತ್ತು. ಎಪಿಎಂಸಿಯ ಲೋಡರ್‌ಗಳು ಕೆಲಸವಿಲ್ಲದೇ ವಿಶ್ರಾಂತಿ ಪಡೆಯುತ್ತಿದ್ದ ದೃಶ್ಯ ಕಂಡುಬಂತು.

ಜುಲೈ 18 ರಿಂದ ಜಾರಿಗೆ ಬರುವಂತೆ ಅಕ್ಕಿ, ಜೋಳ, ರಾಗಿ ಮುಂತಾದ ಆಹಾರ ಧಾನ್ಯಗಳ ಮೇಲೆ ಶೇ. 5 ರಷ್ಟು ಜಿಎಸ್‌ಟಿ ವಿಧಿಸಿರುವುದರಿಂದ ಬಡವರು, ಮಧ್ಯಮ ವರ್ಗದ ಗ್ರಾಹಕರುಗಳಿಗೆ ತೀವ್ರ ತೊಂದರೆಯಾಗುತ್ತದೆ. ಜನಸಾಮಾನ್ಯರು, ಕಾರ್ಮಿಕ ವರ್ಗ, ರೈತರಿಗೆ ಜಿಎಸ್‌ಟಿಯಿಂದಾಗಿ ಆರ್ಥಿಕ ಹೊರೆಯಾಗುವುದರಿಂದ ಆಹಾರ ಧಾನ್ಯಗಳ ಮೇಲೆ ವಿಧಿಸಿರುವ ಜಿಎಸ್‌ಟಿಯನ್ನು ತೆಗೆದು ಹಾಕಬೇಕು ಎಂದು ವರ್ತಕರು ಒತ್ತಾಯಿಸಿದ್ದಾರೆ.

ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್ ಅವರನ್ನು ಭೇಟಿ ಮಾಡಿದ ಮೈಸೂರು ಧಾನ್ಯ ವರ್ತಕರ ಸಂಘದ ಅಧ್ಯಕ್ಷ ಎಂ.ಎನ್. ಬಸವರಾಜು, ಉಪಾಧ್ಯಕ್ಷ ಎಸ್. ಪ್ರಕಾಶ್, ಕಾರ್ಯದರ್ಶಿ ಆರ್. ಆನಂದ್, ಖಜಾಂಚಿ ಕೆಟಿ. ಶಾಮಸುಂದರ, ನಿರ್ದೇಶಕರಾದ ದೊರೈ, ಸತೀಶ್, ಸೇರಿದಂತೆ ಹಲವರು ಮನವಿ ಸಲ್ಲಿಸಿದರು.

ಕೆಆರ್‌ಎಸ್ ನೀರಿನ ಮಟ್ಟ




ಗರಿಷ್ಠ ಮಟ್ಟ	124.80 ಅಡಿ
ಶುಕ್ರವಾರ	123.32 ಅಡಿ
ಒಳಹರಿವು	78166 ಕ್ಯೂಸೆಕ್
ಹೊರಹರಿವು	84729 ಕ್ಯೂಸೆಕ್

ಕಬಿನಿ ನೀರಿನ ಮಟ್ಟ



ಗರಿಷ್ಠ ಮಟ್ಟ	2284.00 ಅಡಿ
ಶುಕ್ರವಾರ	2282.00 ಅಡಿ
ಒಳ ಹರಿವು	33000 ಕ್ಯೂಸೆಕ್
ಹೊರ ಹರಿವು	32000 ಕ್ಯೂಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಶುಕ್ರವಾರ	2853.81 ಅಡಿ
ಒಳ ಹರಿವು	13602 ಕ್ಯೂಸೆಕ್
ಹೊರ ಹರಿವು	15520 ಕ್ಯೂಸೆಕ್

ಹೇಮಾವತಿ ನೀರಿನ ಮಟ್ಟ



ಗರಿಷ್ಠ ಮಟ್ಟ	2922 ಅಡಿ
ಶುಕ್ರವಾರ	2920.50 ಅಡಿ
ಒಳ ಹರಿವು	41420 ಕ್ಯೂಸೆಕ್
ಹೊರ ಹರಿವು	40250 ಕ್ಯೂಸೆಕ್

ಮೈಸೂರು ಮಿತ್ರ ಶನಿವಾರ 16 ಜುಲೈ 2022

ನುಗು ಜಲಾಶಯಕ್ಕೆ ಶಾಸಕರಿಂದ ಬಾಗಿನ

ಅನಿಲ್ ಚಿಕ್ಕಮಾದು, ನಾವು ಶಾಸಕರಾದ ಮೇಲೆ ಉತ್ತಮ ಮಳೆಯಾಗಿ ನುಗು ಜಲಾಶಯ ಭರ್ತಿಯಾಗುತ್ತಿದೆ. ಶೀಘ್ರ ನುಗು ಏತ ನೀರಾವರಿ ಯೋಜನೆಗೆ ಚಾಲನೆ ನೀಡಲಾಗುವುದು. ಇನ್ನು 11 ತಿಂಗಳೊಳಗೆ ಎರಡೂ ತಾಲೂಕುಗಳ ಕುಡಿಯುವ ನೀರಿನ ಸಮಸ್ಯೆ ಸೇರಿದಂತೆ ಇನ್ನಿತರ ಸಮಸ್ಯೆಗಳನ್ನು ಶಾಶ್ವತವಾಗಿ ಬಗೆಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು.
-ಹರ್ಷವರ್ಧನ್, ಶಾಸಕ



ಸರಗೂರು, ಜು.15– ತಾಲೂಕಿನ ನುಗು ಜಲಾಶಯಕ್ಕೆ ಶಾಸಕರಾದ ಹರ್ಷವರ್ಧನ್ ಹಾಗೂ ಅನಿಲ್ ಚಿಕ್ಕಮಾದು ವಿಶೇಷ ಪೂಜೆ ಸಲ್ಲಿಸಿ, ಬಾಗಿನ ಅರ್ಪಿಸಿದರು.

ನುಗು ಜಲಾಶಯ ಭರ್ತಿಯಾಗಿರುವ ಹಿನ್ನೆಲೆಯಲ್ಲಿ ಶುಕ್ರವಾರ ಅಭಿಜಿತ್ ಮುಹೂರ್ತದಲ್ಲಿ ಗಣಪತಿ ಹಾಗೂ ಲಕ್ಷ್ಮಿ ದೇವಿಗೆ ಪೂಜೆ ಸಲ್ಲಿಸಿ, ನಂತರ ಪೂರ್ಣ ಕುಂಭದೊಂದಿಗೆ ಶಾಸಕರಾದ ಅನಿಲ್ ಚಿಕ್ಕಮಾದು, ಹರ್ಷವರ್ಧನ್ ಜಲಾಶಯಕ್ಕೆ ಬಾಗಿನ ಅರ್ಪಿಸಿ, ನಾಡು ಸುಭಿಕ್ಷವಾಗಿರಲಿ ಎಂದು ದೇವರಲ್ಲಿ ಪ್ರಾರ್ಥಿಸಿದರು.

ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿ, ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಇಂದಿನಿಂದಲೇ ನುಗು ಮೇಲ್ದಂಡೆ ನಾಲೆಗೆ ನೀರು ಹರಿಸಲಾಗುವುದು. ಜಲಾಶಯದ ಎಡ, ಬಲ ದಂಡೆ ನಾಲೆಗಳ ಹೂಳು, ಜಂಗಲ್ ಕಟ್ಟಿಂಗ್ ನಂತರ ಆ.5ರಿಂದ ಎಡ, ಬಲ ದಂಡೆ ನಾಲೆಗಳಿಗೂ ನೀರು ಹರಿಸಲಾಗುವುದು ಎಂದರು.

ನುಗು ಅತಿಥಿ ಗೃಹ, ಜಲಾಶಯವನ್ನು ಸಮರ್ಪಕವಾಗಿ ನಿರ್ವಹಣೆ ಮಾಡಬೇಕು. ಬಿರ್ವಾಳ್‌ನಿಂದ ಮುಳ್ಳೂರು ರಸ್ತೆ, ಹಲಸೂರಿನಿಂದ ಮುಳ್ಳೂರು ಸೇತುವೆವರೆಗೂ ರಸ್ತೆ ಹದಗೆಟ್ಟಿದ್ದು, ಅದನ್ನು ಶೀಘ್ರ ದುರಸ್ತಿಪಡಿಸಲು ಕ್ರಮ ವಹಿಸಲಾಗುವುದು. ನುಗು ಜಲಾಶಯದ ನಿರ್ವಹಣೆಗಾಗಿ ಶಾಶ್ವತವಾಗಿ ನುಗು ಅತಿಥಿ ಗೃಹದಲ್ಲಿ ಇಂಜಿನಿಯರ್ ಉಪ ವಿಭಾಗದ ಕಚೇರಿ ತೆರೆಯಲು ಕ್ರಮ ವಹಿಸಲಾಗುವುದು ಎಂದು ಭರವಸೆ ನೀಡಿದರು.

ಹಲಸೂರು ಅಣೆಕಟ್ಟೆ ವ್ಯಾಪ್ತಿಯಲ್ಲಿ 5,110, ಮೇಲ್ದಂಡೆ ನಾಲೆ ವ್ಯಾಪ್ತಿಯಲ್ಲಿ 13 ಸಾವಿರ ಎಕರೆ ಅಚ್ಚುಕಟ್ಟು ಪ್ರದೇಶವಿದ್ದು, ಜಲಾಶಯ ಭರ್ತಿಯಿಂದ ಸಾಕಷ್ಟು ರೈತರಿಗೆ ಅನುಕೂಲವಾಗುತ್ತಿದೆ. ಅಧಿಕಾರಿಗಳು ಜಲಾಶಯ ಹಾಗೂ ನಾಲೆಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು. ನಾಲೆಗಳಿಗೆ ಸಂಬಂಧಿಸಿದ ಸಮಸ್ಯೆಗಳ ಕುರಿತಂತೆ ಅಧಿವೇಶನದಲ್ಲಿ ಶಾಸಕ ಹರ್ಷವರ್ಧನ್ ಜೊತೆಗೂಡಿ ಚರ್ಚಿಸಲಾಗುವುದು ಎಂದರು.

ಇದೇ ಸಂದರ್ಭ ನಡೆದ ಸಮಾಲೋಚನಾ ಸಭೆಯಲ್ಲಿ ರೈತರು ಶಾಸಕರ ಬಳಿ ಅಹವಾಲು ಹೇಳಿಕೊಂಡರು. ನಂತರ ಮಳೆಯಿಂದ ಹಾನಿಗೀಡಾದ ಪ್ರದೇಶಗಳಿಗೆ ಶಾಸಕ ಅನಿಲ್ ಚಿಕ್ಕಮಾದು ಭೇಟಿ ನೀಡಿ ಪರಿಶೀಲಿಸಿದರು. ಕಂದಾಯ ಇಲಾಖೆ ಅಧಿಕಾರಿಗಳೊಂದಿಗೆ ತೆರಳಿ ಜಂಟಿ ಸಮೀಕ್ಷೆ ನಡೆಸುವಂತೆ ಕೃಷಿ ಇಲಾಖೆ ಅಧಿಕಾರಿ ರಂಗಸ್ವಾಮಿ ಅವರಿಗೆ ತಾಕೀತು ಮಾಡಿದರು.

ಈ ವೇಳೆ ರೈತ ಮುಖಂಡರಾದ ಶಂಭುಲಿಂಗನಾಯಕ, ಚಾಮಲಾಪುರ ಗಿರೀಶ್, ಬಿರ್ವಾಳ್ ಚಿಕ್ಕಣ್ಣ, ಬಸವರಾಜು, ಗೋವಿಂದಾಚಾರ್, ಪುರದಕಟ್ಟೆ ಬಸವರಾಜು, ಸಿದ್ದರಾಜು, ಮಹೇಶ್, ವಾಣಿ, ಮಂಜು, ರವಿಕುಮಾರ್, ದಡದಹಳ್ಳಿ ಡಿ.ಪಿ.ನಟರಾಜು, ಕುರ್ಣೇಗಾಲ ಬೆಟ್ಟಸ್ವಾಮಿ, ಕಂದೇಗಾಲ ಶಿವರಾಜು, ಎಂ.ಕೆಂಡಗಣ್ಣಸ್ವಾಮಿ, ಕುಂಬ್ರಳ್ಳಿ ಸುಬ್ಬಣ್ಣ, ಜಿ.ಎಸ್. ಮಹದೇವಪ್ಪ, ಶಿವರುದ್ರ, ಚಂದು, ಬಸವರಾಜು, ನುಗು ಜಲಾಶಯದ ಇಇ ಎಂ.ಬಿ.ಪಾಟೀಲ್, ಎಇಇ ಎ.ಸಿ.ಕೃಷ್ಣ, ಎಇ ದೀಪಕ್, ಶ್ರೀಪತಿ, ಅಶೋಕ್, ಪಿಎಸ್ಐ ಶ್ರವಣದಾಸ್‌ರೆಡ್ಡಿ, ಜಯಪ್ರಕಾಶ್ ಸೇರಿದಂತೆ ಇನ್ನಿತರರಿದ್ದರು.

ಕಪಿಲಾ ನದಿಯಲ್ಲಿ ಈಜಲು ಹೋಗಿ ಯುವಕ ನಾಪತ್ತೆ ಪ್ರಕರಣ

ಎರಡು ದಿನಗಳ ನಂತರ ಶವ ಪತ್ತೆ



ನಂಜನಗೂಡು, ಜು.15– ಕಪಿಲಾ ನದಿಯಲ್ಲಿ ಈಜಲು ಹೋಗಿ ನಾಪತ್ತೆಯಾಗಿದ್ದ ಯುವಕನ ಶವ ಇಲ್ಲಿನ ಹೆಜ್ಜಿಗೆ ಸೇತುವೆ ಬಳಿ ಪತ್ತೆಯಾಗಿದೆ.

ನಗರದ ನೀಲಕಂಠ ನಗರದ ನಿವಾಸಿ ಅಬ್ದುಲ್ ರಹೀಂ ಪಾಷ (23) ಸಾವನ್ನಪ್ಪಿದವರು. ಈತ ತನ್ನ ಇಬ್ಬರು ಸ್ನೇಹಿತರೊಂದಿಗೆ ಬುಧವಾರ ಈಜಲು ಹೆಜ್ಜಿಗೆ ಸೇತುವೆಯಿಂದ ತುಂಬಿ ಹರಿಯುತ್ತಿರುವ ಕಪಿಲಾ ನದಿಗೆ ಹಾರಿದ್ದರು. ಇಬ್ಬರು ಯುವಕರು ನದಿಯಲ್ಲಿ ಈಜಿ ದಡ ಸೇರಿದರೆ, ಅಬ್ದುಲ್ ರಹೀಂ ಪಾಷ ದಡ ಸೇರಿರಲಿಲ್ಲ. ವಿಷಯ ತಿಳಿದ ರಕ್ಷಣಾ ತಂಡಗಳು ಕಳೆದ 2 ದಿನಗಳಿಂದ ನದಿಯಲ್ಲಿ ರಹೀಂ ಪಾಷನ ಪತ್ತೆಗೆ ಶೋಧ ಕಾರ್ಯ ಕೈಗೊಂಡಿದ್ದರು. ಯುವಕನ ತಂದೆ ಮುನಾವರ್ ಪಾಷಾ ನನ್ನ ಮಗನನ್ನು ಜೊತೆಗಿದ್ದವರೆ ಸಂಚು ರೂಪಿಸಿ ಕೊಲೆಗೈದಿದ್ದಾರೆ. ಆತ ಬಟ್ಟೆ ಹಾಗೂ ಚಪ್ಪಲಿ ಬಿಚ್ಚದೆ ನೀರಿಗೆ ಬಿದ್ದಿದ್ದಾನೆ. ಆದ್ದರಿಂದ ಜೊತೆಗಿದ್ದವರೇ ಕೊಲೆಗೈದಿರಬಹುದೆಂಬ ಅನುಮಾನ ಮೂಡಿದೆ ಎಂದು ಆರೋಪಿಸಿದ್ದರು. ಆದರೆ ಇಂದು ರಹೀಂ ಪಾಷನ ಶವ ಇಲ್ಲಿನ ಹೆಜ್ಜಿಗೆ ಸೇತುವೆ ಬಳಿ ಪತ್ತೆಯಾಗಿದೆ. ಈ ಸಂಬಂಧ ನಂಜನಗೂಡು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗೂಡ್ಸ್ ಆಟೋ ಸುಟ್ಟು ಹಾಕಿದ ದುಷ್ಕರ್ಮಿಗಳು



ಹುಣಸೂರು, ಜು.15– ದರೋಡೆಗೆ ಅವಕಾಶ ನೀಡದೆ ಚಾಲಕ ಆಟೋ ಬಿಟ್ಟು ಪರಾರಿಯಾದ ಹಿನ್ನೆಲೆಯಲ್ಲಿ ಗೂಡ್ಸ್ ಆಟೋಗೆ ಪೆಟ್ರೋಲ್ ಹಾಕಿ ಆಟೋವನ್ನೇ ಸುಟ್ಟು ಹಾಕಿರುವ ಘಟನೆ ತಾಲೂಕಿನ ರತ್ನಪುರಿ ರಸ್ತೆಯ ಸಣ್ಣೇಗೌಡರ ಕಾಲೋನಿ ಬಳಿ ಗುರುವಾರ ತಡರಾತ್ರಿ ನಡೆದಿದೆ.

ತಾಲೂಕಿನ ಸಂತೆಕೆರೆಕೋಡಿ ಗ್ರಾಮದ ನೂರ್ ಎಂಬಾವರ ಗೂಡ್ಸ್ ಆಟೋ ಸುಟ್ಟು ಕರಕಲಾಗಿದೆ. ರಾತ್ರಿ ಆಟೋ ಚಾಲಕ ನೂರ್ ಹುಣಸೂರು ಕಡೆಯಿಂದ ಗ್ರಾಮಕ್ಕೆ ತೆರಳುತ್ತಿದ್ದ ವೇಳೆ ವಿನೋಬಾ ಕಾಲೋನಿಯಿಂದ ಬೈಕ್ ಸವಾರರು ಸಣ್ಣೇಗೌಡರ ಕಾಲೋನಿ ಬಳಿಯ ಹೊಸ ಕಾಲುವೆವರೆಗೆ ಹಿಂಬಾಲಿಸಿಕೊಂಡು ಬಂದು ಆಟೋ ನಿಲ್ಲಿಸಿ ಹಣ ನೀಡುವಂತೆ ಬೆದರಿಸಿದ್ದಾರೆ. ಆಟೋ ನಿಲ್ಲಿಸಿ ಹಣ ಕೇಳುತ್ತಿದ್ದಂತೆ ಯಾರೋ ದರೋಡೆಕೋರರಿರಬಹುದೆಂದು ಹೆದರಿದ ನೂರ್ ಕತ್ತಲಿನಲ್ಲಿ ಓಡಿ ತಪ್ಪಿಸಿಕೊಂಡಿದ್ದಾನೆ. ಇದರಿಂದ ಕಿಡಿಗೇಡಿಗಳು ಹತಾಶರಾಗಿ ಆಟೋಗೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ವಿಕೃತಿ ಮೆರೆದಿದ್ದಾರೆ. ಘಟನೆ ಹುಣಸೂರು ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದು, ಸ್ಥಳಕ್ಕೆ ಡಿವೈಎಸ್‌ಪಿ ರವಿಪ್ರಸಾದ್, ಗ್ರಾಮಾಂತರ ಠಾಣೆ ಇನ್ಸ್‌ಪೆಕ್ಟರ್ ಸಿ.ವಿ.ರವಿ ಭೇಟಿ ನೀಡಿ ಪರಿಶೀಲಿಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಆಟೋ ಚಾಲಕ ಆಘಾತಕ್ಕೊಳಗಾಗಿದ್ದಾರೆ. ಇದರಿಂದಾಗಿ ಸಮರ್ಪಕ ಮಾಹಿತಿ ಪಡೆಯಲು ಸಾಧ್ಯವಾಗಿಲ್ಲ. ಆತ ಚೇತರಿಸಿಕೊಂಡ ನಂತರವಷ್ಟೆ ಸತ್ಯಾಸತ್ಯತೆ ಹೊರಬರಲಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಆಡಳಿತ, ವ್ಯವಹಾರದಲ್ಲಿ ಪಾರದರ್ಶಕತೆ ಕಾಪಾಡಿಕೊಳ್ಳಿ

ಮೈಮುಲ್ ನಿರ್ದೇಶಕ ಚೆಲುವರಾಜು ಸಲಹೆ



ತರಬೇತಿ ಪಡೆದ ನಿರ್ವಹಣಾಧಿಕಾರಿಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸಬೇಕು. ಹಾಲು ಉತ್ಪಾದಕ ಸಹಕಾರ ಸಂಘಗಳು ಸ್ವಾರ್ಥ ಬಿಟ್ಟು ಸೇವಾ ಮನೋಭಾವದಿಂದ ಕಾರ್ಯ ನಿರ್ವಹಿಸಬೇಕು.
-ಜೆ.ಸುನೀತಾ ವೀರಪ್ಪಗೌಡ, ಮಾಜಿ ಶಾಸಕಿ, ಮೈಮುಲ್ ನಿರ್ದೇಶಕಿ.

ತಿ.ನರಸೀಪುರ, ಜು.15– ಹಾಲು ಉತ್ಪಾದಕರ ಸಹಕಾರ ಸಂಘಗಳು ಗ್ರಾಮೀಣ ಜನರೊಂದಿಗೆ ವ್ಯವಹರಿಸುವುದರಿಂದ ಆಡಳಿತ ಮತ್ತು ವ್ಯವಹಾರದಲ್ಲಿ ಪಾರದರ್ಶಕತೆ ಕಾಪಾಡಿಕೊಳ್ಳಬೇಕು ಎಂದು ಮೈಮುಲ್ ನಿರ್ದೇಶಕ ಚೆಲುವರಾಜು ಸಲಹೆ ನೀಡಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಮೈಸೂರು ಜಿಲ್ಲಾ ಸಹಕಾರ ಒಕ್ಕೂಟ ನಿ., ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ಮತ್ತು ಸಹಕಾರ ಇಲಾಖೆಯ ಸಹಯೋಗದೊಂದಿಗೆ ನಡೆದ ಹಾಲು ಉತ್ಪಾದಕರ ಸಹಕಾರ ಸಂಘಗಳ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಒಂದು ದಿನದ ವಿಶೇಷ ತರಬೇತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.


ಡೈರಿಗಳು ಗ್ರಾಮೀಣ ಜನರ ಆರ್ಥಿಕತೆಯ ಕೇಂದ್ರವಾಗಿದೆ. ಸಂಘದ ಸಿಬ್ಬಂದಿಗಳು ಹಾಲು ಉತ್ಪಾದಕರ ಜೊತೆ ಸಂಯಮದಿಂದ ವರ್ತಿಸಬೇಕು. ಅಲ್ಲದೇ ಸಂಘದ ಲೆಕ್ಕಪತ್ರ ನಿರ್ವಹಣೆ, ಹಾಲು ಶೇಖರಣೆ ಮತ್ತು ಹಣ ಬಟವಾಡೆಯಲ್ಲಿ ಪಾರದರ್ಶಕತೆ ವಹಿಸಬೇಕು. ಹಾಗಾದಲ್ಲಿ ಜನರಲ್ಲಿ ಸಂಘದ ಬಗ್ಗೆ ನಂಬಿಕೆ ಮೂಡಲಿದೆ. ಅಲ್ಲದೆ ಸ್ಥಳೀಯ ಹಾಲು ಮಾರಾಟದ ಲೆಕ್ಕ ಸರಿಯಾಗಿಟ್ಟಲ್ಲಿ ಸಂಘದ ಲಾಭಾಂಶ ಹೆಚ್ಚಲಿದೆ ಎಂದರು. ಕಾರ್ಯಕ್ರಮದಲ್ಲಿ ಮೈಮುಲ್ ನಿವೃತ್ತ ವ್ಯವಸ್ಥಾಪಕ ನಿರ್ದೇಶಕಿ ಪ್ರಭಾಮಣಿ ಅವರನ್ನು ಸನ್ಮಾನಿಸಲಾಯಿತು.

ಈ ವೇಳೆ ಮೈಮುಲ್ ಮಾಜಿ ಅಧ್ಯಕ್ಷ ಓಂ ಪ್ರಕಾಶ್, ನಿರ್ದೇಶಕರಾದ ಸಿದ್ದೇಗೌಡ, ಉಪ ವ್ಯವಸ್ಥಾಪಕ ಡಾ.ದಿವಾಕರ್, ನಿವೃತ್ತ ಅಪರ ನಿಬಂಧಕ ಎನ್.ಕೃಷ್ಣಾರೆಡ್ಡಿ, ಅಭಿವೃದ್ಧಿ ಅಧಿಕಾರಿ ರಾಜಣ್ಣ, ಮೈಸೂರು ಜಿಲ್ಲಾ ಪ್ರಧಾನ ಮುಖ್ಯ ಕಾರ್ಯದರ್ಶಿ ಎಂ. ವಿಶ್ವೇಶ್ವರಯ್ಯ, ವ್ಯವಸ್ಥಾಪಕ ಪಿ.ಎಸ್. ಹರೀಶ್, ವಿಸ್ತರಣಾಧಿಕಾರಿ ಪ್ರಮೋದ್, ತಲಕಾಡು ಕಾರ್ಯ ನಿರ್ವಣಾಧಿಕಾರಿ ಟಿ.ಪಿ.ಕೃಷ್ಣ ಇತರರಿದ್ದರು.

8 ಮಂದಿ ಜೂಜುಕೋರರ ಬಂಧನ

ಬೈಲಕುಪ್ಪೆ, ಜು.15– ಪ್ರತ್ಯೇಕ ಪ್ರಕರಣದಲ್ಲಿ ಜೂಜಾಡುತ್ತಿದ್ದ 8 ಮಂದಿ ಜೂಜುಕೋರರನ್ನು ಬೈಲುಕುಪ್ಪೆ ಪೊಲೀಸರು ಬಂಧಿಸಿದ್ದಾರೆ.

ಪಿರಿಯಾಪಟ್ಟಣ ತಾಲೂಕಿನ ಕೊಪ್ಪ ಗ್ರಾಮದ ಬಳಿಯ ಟಿಬೆಟಿಯನ್ನರ ಸಿಲ್ವರ್ ತೋಟದಲ್ಲಿ ಹಾಗೂ ಬೈಲುಕುಪ್ಪೆ ಅರಣ್ಯ ವ್ಯಾಪ್ತಿಯಲ್ಲಿ ಜೂಜಾಡುತ್ತಿರುವ ಬಗ್ಗೆ ಬಂದ ಖಚಿತ ಮಾಹಿತಿ ಮೇರೆಗೆ ದಾಳಿ ಮಾಡಿದ ಪೊಲೀಸರು ಪಣಕ್ಕಿಟ್ಟಿದ್ದ 5440 ರೂ. ವಶಪಡಿಸಿಕೊಂಡು ಆರೋಪಿಗಳಾದ ಮಂಜು, ಮಹೇಶ, ವೆಂಕಟೇಶ, ಜೋಸೆಫ್, ರವಿ, ಅಬಿಬ್, ಪಿರು, ರಾಜು ಎಂಬುವವರನ್ನು ಬಂಧಿಸಿ ಪ್ರಕರಣ ದಾಖಲಿಸಿದ್ದಾರೆ. ಕಾರ್ಯಾಚರಣೆಯಲ್ಲಿ ಎಸ್ಐ ಎಸ್.ಯು.ಬಸವರಾಜು, ಎಎಸ್ಐ ಶಿವರಾಜು, ತಿಮ್ಮರಾಜ್ ನಾಯಕ, ಡ್ರೈವರ್ ದೇವರಾಜು, ಸಿಬ್ಬಂದಿ ಅಶೋಕ, ಸುರೇಶ್, ರಾಕೇಶ್, ಚೇತನ್ ಇದ್ದರು.



ಹೆಚ್.ಡಿ.ಕೋಟೆ, ಸರಗೂರು ತಾಲೂಕಿನ ರಾಜೀವ್ ಗಾಂಧಿ ಪಂಚಾಯತ್ ರಾಜ್ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ವಿ.ಶ್ರೀನಿವಾಸ್ ಚಾಮಳ್ಳಿ ಅವರನ್ನು ಹ್ಯಾಂಡ್‌ಪೋಸ್ಟ್‌ನ ಮೈಮುಲ್ ಉಪ ಕಚೇರಿಯಲ್ಲಿ ಮೈಮುಲ್ ನಿರ್ದೇಶಕ ಈರೇಗೌಡ ಸನ್ಮಾನಿಸಿದರು. ಈ ವೇಳೆ ಮಲಾರ ಶಿವಣ್ಣ, ನಾಗರಾಜ್, ಕುಮಾರ್, ಬೆಟ್ಟದಬೀಡು ಗ್ರಾಪಂ ಸದಸ್ಯರಾದ ರಾಮು, ಗಣೇಶ್, ಪರಮೇಶ್, ಪುರ ಸ್ವಾಮಿ, ಹನುಮಂತು ಇನ್ನಿತರರಿದ್ದರು.

ನರೇಗಾದಿಂದ 150 ಕೆರೆಗಳು ಅಭಿವೃದ್ಧಿ

ವಿವಿಧ ಕಾಮಗಾರಿಗೆ ಚಾಲನೆ ನೀಡಿದ ಸಂಸದ ಪ್ರತಾಪ್ ಸಿಂಹ



ಹುಣಸೂರು, ಜು.15– ನರೇಗಾ ಯೋಜನೆಯಿಂದ ತಾಲೂಕಿನಲ್ಲಿ 150ಕ್ಕೂ ಹೆಚ್ಚು ಕೆರೆಗಳು ಅಭಿವೃದ್ಧಿಯಾಗಿದೆ ಎಂದು ಸಂಸದ ಪ್ರತಾಪ್ ಸಿಂಹ ತಿಳಿಸಿದರು.

ತಾಲೂಕಿನ ಧರ್ಮಾಪುರ ಮತ್ತು ಕರಿಮುದ್ದನಹಳ್ಳಿ ಗ್ರಾಪಂ ವ್ಯಾಪ್ತಿಯಲ್ಲಿ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ಕೇಂದ್ರ ಸರ್ಕಾರದ ಬಹಳಷ್ಟು ಯೋಜನೆಗಳು ರೈತರ ಪರವಾಗಿದ್ದು, ನರೇಗಾ ಯೋಜನೆಯಿಂದ ಕೆರೆಗಳು ಅಭಿವೃದ್ಧಿಯಾಗುತ್ತಿದೆ. ಅಂತೆಯೇ ಈ ಯೋಜನೆಯಡಿ ಹಲವು ಸೌಲಭ್ಯಗಳಿದ್ದು ಅವುಗಳನ್ನು ಗ್ರಾಮೀಣ ಭಾಗದ ರೈತರು ಪಡೆದುಕೊಳ್ಳುವ ಮೂಲಕ ಅಭಿವೃದ್ಧಿಯತ್ತ ಸಾಗಬೇಕು ಎಂದರು.

ಗ್ರಾಮದ ಜನರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಅಧಿಕಾರಿಗಳು ಕಾರ್ಯ ನಿರ್ವಹಿಸುತ್ತಿದ್ದು, ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಇರುವ ಸೌಲಭ್ಯಗಳ ಬಗ್ಗೆ ಪಂಚಾಯಿತಿ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಳ್ಳುವ ಮೂಲಕ ಚುನಾಯಿತಿ ಪ್ರತಿನಿಧಿಗಳು ಪಕ್ಷ ಬೇಧ ಮರೆತು ಕಾರ್ಯ ನಿರ್ವಹಿಸಿ ಎಂದು ಸಲಹೆ ನೀಡಿದರು.

ಹೆಚ್.ಪಿ.ಮಂಜುನಾಥ್ ಮಾತನಾಡಿ, ರಾಜ್ಯಕ್ಕೆ ವಿಧಾನಸೌಧಗಳು ಇದ್ದಂತೆ ಗ್ರಾಮೀಣ ಭಾಗದಲ್ಲಿ ಗ್ರಾಪಂಗಳು ಶಕ್ತಿಸೌಧದಂತೆ ಕಾರ್ಯ ನಿರ್ವಹಿಸುತ್ತಿವೆ. ಹಾಗಾಗಿ ಗ್ರಾಪಂನಲ್ಲಿ ಸದಸ್ಯರು ಬಹಳ ಒಗ್ಗಟ್ಟಿನಿಂದ ಕಾರ್ಯ ನಿರ್ವಹಿಸಬೇಕು. ಶಕ್ತಿ ಕೇಂದ್ರಗಳಿಂದ ಸ್ತ್ರೀ ಸಾಮಾನ್ಯನಿಗೆ ನ್ಯಾಯ ಒದಗುವಂತಾಗಬೇಕು ಎಂದರು. ಈ ವೇಳೆ ಅಧ್ಯಕ್ಷೆ ಲತಾ, ಮಂಗಳ, ಸಹಾಯಕ ನಿರ್ದೇಶಕರಾದ ಹೆಚ್.ಡಿ. ಲೋಕೇಶ್, ತಾಲೂಕು ತಾಂತ್ರಿಕ ಸಂಯೋಜಕರಾದ ಎಂ. ಅರವಿಂದ್, ಪಿಡಿಓ ರೂಪಶ್ರೀ ಆರ್, ರಾಘವೇಂದ್ರ ಎಂ.ಸಿ, ತಾಂತ್ರಿಕ ಅಭಿಯಂತರರಾದ ಸುಗಂಧರಾಜ್ ಸೇರಿದಂತೆ ಚುನಾಯಿತ ಪ್ರತಿನಿಧಿಗಳು ಹಾಗೂ ಗ್ರಾಪಂ ಸಿಬ್ಬಂದಿ ಉಪಸ್ಥಿತರಿದ್ದರು.

ನಂ.ಗೂಡು ತಾಪಂಗೆ 149.95 ಕೋಟಿ ಅನುದಾನ ಬಿಡುಗಡೆ



ನಂಜನಗೂಡು, ಜು.15– ಪ್ರಸಕ್ತ ಸಾಲಿನಲ್ಲಿ ತಾಲೂಕು ಪಂಚಾಯಿತಿಗೆ 149.95 ಕೋಟಿ ರೂ. ಅನುದಾನ ಬಿಡುಗಡೆಯಾಗಿದೆ ಎಂದು ಜಿಪಂ ಉಪಕಾರ್ಯದರ್ಶಿ ಹಾಗೂ ತಾಪಂ ಆಡಳಿತಾಧಿಕಾರಿ ಕೃಷ್ಣಂರಾಜು ತಿಳಿಸಿದರು.

ನಗರದ ತಾಪಂ ಸಭಾಂಗಣದಲ್ಲಿ ನಡೆದ ತಾಲೂಕು ಮಟ್ಟದ ಅಧಿಕಾರಿಗಳೊಂದಿಗೆ ಆಯವ್ಯಯ ಮಂಡನೆ ಮತ್ತು ಸಾಮಾನ್ಯ ಸಭೆಯಲ್ಲಿ ಮಾತನಾಡಿದ ಅವರು, ಕಳೆದ ವರ್ಷ 145.77 ಕೋಟಿ ರೂ. ಅನುದಾನ ಬಿಡುಗಡೆಯಾಗಿತ್ತು. ಈ ವರ್ಷ ಕಳೆದ ಬಾರಿಗಿಂತ 4.17 ಕೋಟಿ ರೂ. ಯೋಜನಾ ಕಾರ್ಯಕ್ರಮಗಳಿಗೆ ಹೆಚ್ಚಾಗಿ ಬಿಡುಗಡೆಯಾಗಿದೆ. ಈಗಾಗಲೇ ಇಲಾಖಾವಾರು ಹಂಚಿಕೆ ಮಾಡಿರುವ ಅನುದಾನಕ್ಕೆ ಸಿದ್ಧಪಡಿಸಿರುವ ಕ್ರಿಯಾ ಯೋಜನೆಯನ್ನು ಡಿಸೆಂಬರ್ ಅಂತ್ಯದೊಳಗೆ ಅನುಷ್ಠಾನಗೊಳಿಸಿ ಗರಿಷ್ಠ ಗುರಿ ಸಾಧನೆ ಮಾಡುವ ನಿಟ್ಟಿನಲ್ಲಿ ಅಧಿಕಾರಿಗಳು ಕ್ರಮವಹಿಸುವಂತೆ ಆದೇಶಿಸಿದರು.

ಕೆಲ ಅಂಗನವಾಡಿ ಕಟ್ಟಡಗಳು ಕಳೆದ 6 ವರ್ಷಗಳಿಂದ ಪೂರ್ಣಗೊಂಡಿಲ್ಲ. ಇದಕ್ಕೆ ಕಾರಣ ಅನುದಾನ ಬಿಡುಗಡೆಯಾದ 3 ವರ್ಷಗಳ ನಂತರ ಕೆಲಸ ಪ್ರಾರಂಭ ಮಾಡುತ್ತಿರುವುದು. ಕಳೆದ ಬಾರಿ ಪ್ರತಿ ಕಟ್ಟಡಕ್ಕೆ 8 ಲಕ್ಷ ನಿಯೋಜಿಸಲಾಗಿತ್ತು. ಈ ಬಾರಿ 10 ಲಕ್ಷ ನೀಡಲಾಗುತ್ತಿದೆ ಎಂದರು.

ಸಭೆಯಲ್ಲಿ ತಾಪಂ ಇಓ ಹೆಚ್.ಜಿ. ಶ್ರೀನಿವಾಸ್, ತಾಲೂಕು ಆರೋಗ್ಯಾಧಿಕಾರಿ ಈಶ್ವರ್ ಕಾನಟ್ಕೆ, ತೋಟಗಾರಿಕಾ ಸಹಾಯಕ ನಿರ್ದೇಶಕ ಚಂದ್ರು, ಆಯುಷ್ ಅಧಿಕಾರಿ ಅಶೋಕ್ ಕುಮಾರ್ ಸಿಡಿಪಿಓ ಕವಿತಾ, ಮಂಜುಳಾ, ಸೇರಿದಂತೆ ತಾಲೂಕು ಮಟ್ಟದ ಅಧಿಕಾರಿಗಳು ಇದ್ದರು.

ತಿ.ನರಸೀಪುರ, ಸರಗೂರಲ್ಲಿ ಹಡಪದ ಅಪ್ಪಣ್ಣ ಜಯಂತಿ ಆಚರಣೆ





ತಿ.ನರಸೀಪುರ/ಸರಗೂರು, ಜು.15– ತಿ.ನರಸೀಪುರ, ಸರಗೂರಲ್ಲಿ ಸಮಾಜ ಸುಧಾರಕ ಹಡಪದ ಅಪ್ಪಣ್ಣ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ತಿ.ನರಸೀಪುರ: ತಾಲೂಕು ಆಡಳಿತ ಮತ್ತು ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ, ತಾಲೂಕು ವಿಶ್ವಕರ್ಮ ಜನಾಂಗದ ಒಕ್ಕೂಟದ ಸಹಯೋಗದೊಂದಿಗೆ ಪಟ್ಟಣದ ತಾಪಂ ಸಭಾಂಗಣದಲ್ಲಿ ಹಡಪದ ಅಪ್ಪಣ್ಣ ಜಯಂತಿ ಆಚರಿಸಲಾಯಿತು.

ಅಪ್ಪಣ್ಣನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ತಹಸೀಲ್ದಾರ್ ಸಿ.ಜೆ. ಗೀತಾ, ಜಾತೀಯತೆ ಹೋಗಲಾಡಿಸುವುದು ಅನುಭವ ಮಂಟಪದ ಮುಖ್ಯ ಧ್ಯೇಯವಾಗಿತ್ತು. ಮಂಟಪದ ಮುಖ್ಯ ನಿರ್ವಾಹಕರಾಗಿದ್ದ ಅಪ್ಪಣ್ಣನವರು ಸಮಾಜದಲ್ಲಿದ್ದ ಜಾತಿ ವ್ಯವಸ್ಥೆ ಹೋಗಲಾಡಿಸಲು ಪರಿಶ್ರಮಿಸಿದರು. ಸಮಾಜದಲ್ಲಿನ ಅಸಮಾನತೆ, ಅಸ್ಪೃಶ್ಯತೆ, ಜಾತಿ ವ್ಯವಸ್ಥೆ ವಿರುದ್ಧ ಹೋರಾಡಿ ಸಮಾಜದಲ್ಲಿ ಕೆಲ ಕ್ರಾಂತಿಕಾರಕ ಬದಲಾವಣೆ ತರಲು ಶ್ರಮಿಸಿದ ಅಪ್ಪಣ್ಣನವರು 12ನೇ ಶತಮಾನದಲ್ಲಿ ಬಸವಣ್ಣನವರ ಅನುಯಾಯಿಯಾಗಿ ಸಮಾಜ ಸುಧಾರಣೆಗೆ ಶ್ರಮಿಸಿದ ಮಹಾನ್ ಪುರುಷ ಎಂದರು.

ಚೌಹಳ್ಳಿ ನಿಂಗರಾಜು ಮಾತನಾಡಿ, ಜಾತಿ ವ್ಯವಸ್ಥೆ ವಿಜೃಂಭಿಸುತ್ತಿದ್ದ ಕಾಲಘಟ್ಟದಲ್ಲಿ ಬಸವಣ್ಣನವರು ಅನುಭವ ಮಂಟಪ ಸ್ಥಾಪಿಸಿ, ಅಲ್ಲಿ ವ್ಯಕ್ತಿಗಳ ಕಸುಬಿನ ಆಧಾರದ ಮೇಲೆ ಸಮಾಜದ ಎಲ್ಲಾ ವರ್ಗದ ಜನರಿಗೂ ಪ್ರಾತಿನಿಧ್ಯ ನೀಡಿ ಸಮ ಸಮಾಜದ ನಿರ್ಮಾಣಕ್ಕೆ ಮುನ್ನುಡಿ ಬರೆದಿದ್ದರು. ಅನುಭವ ಮಂಟಪದಲ್ಲಿ ಆಯಕಟ್ಟಿನ ಸ್ಥಾನದಲ್ಲಿದ್ದ ಅಪ್ಪಣನವರು ಜಾತಿ ವ್ಯವಸ್ಥೆ ನಿವಾರಣೆಗಾಗಿ ಹಲವು ವಚನಗಳನ್ನು ರಚಿಸಿದ್ದರು. ಹಾಗಾಗಿ ವ್ಯಕ್ತಿಗಳ ಹುಟ್ಟು ಮತ್ತು ಅವರು ಮಾಡುವ ಕಾಯಕದಿಂದ ಅವರ ವ್ಯಕ್ತಿತ್ವ ಅಳೆಯಲಾಗದು. ವ್ಯಕ್ತಿ ಸಮಾಜದೊಂದಿಗೆ ನಡೆದುಕೊಳ್ಳುವ ರೀತಿ ಅವನ ವ್ಯಕ್ತಿತ್ವ ನಿರ್ಧರಿಸುತ್ತದೆ ಎಂದರು.

ನಯನಜ ಕ್ಷತ್ರಿಯ ಸಮಾಜದ ಅಧ್ಯಕ್ಷ ನಾಗೇಂದ್ರ, ಉಪಾಧ್ಯಕ್ಷ ಮೂರ್ತಿ, ಗಣೇಶ್, ಮುರುಳಿ, ಕಾರ್ಯದರ್ಶಿ ಈ.ರಾಜು, ಖಜಾಂಚಿ ಎಂ.ನಾಗರಾಜು, ಮಂಡಲ ಪಂಚಾಯಿತಿ ಮಾಜಿ ಸದಸ್ಯ ಶೇಖರ್, ಗ್ರಾಪಂ ಸದಸ್ಯ ದೇವರಾಜು, ಪುರಸಭಾ ಸದಸ್ಯೆ ಸೌಮ್ಯರಾಣಿ, ಕೃಷ್ಣಮೂರ್ತಿ, ಗಂಗಾಧರ್, ತಾಲೂಕು ರೈತ ಸಂಘದ ಅಧ್ಯಕ್ಷ ಕುಮಾರಸ್ವಾಮಿ, ತಾಲೂಕು ಡಾ. ಅಂಬೇಡ್ಕರ್ ಸಂಘದ ಅಧ್ಯಕ್ಷ ಮಹದೇವಯ್ಯ, ಉಪತಹಶೀಲ್ದಾರ್ ಜೆ.ಕೆ.ಪ್ರಭುರಾಜ್, ಸಮಾಜ ಕಲ್ಯಾಣಾಧಿಕಾರಿ ರಾಮೇಗೌಡ ಸೇರಿದಂತೆ ಇನ್ನಿತರರಿದ್ದರು.

ಸರಗೂರು: ಹಡಪದ ಅಪ್ಪಣ್ಣ ಜಗಜ್ಯೋತಿ ಬಸವಣ್ಣನವರ ಪ್ರತಿನಿಧಿಯಾಗಿದ್ದರು ಎಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಸಹಾಯಕ ಪ್ರಾಧ್ಯಾಪಕಿ ಡಾ.ವೃಂದ ತಿಳಿಸಿದರು.

ಪಟ್ಟಣದ ತಾಲೂಕು ಕಚೇರಿಯಲ್ಲಿ ನಡೆದ ಹಡಪದ ಅಪ್ಪಣ್ಣ ಜಯಂತಿಯಲ್ಲಿ ಮಾತನಾಡಿದ ಅವರು, ಬಸವಣ್ಣನವರನ್ನು ಭೇಟಿ ಮಾಡಲು ಬರುವವರು ಅಪ್ಪಣ್ಣನವರ ಅನುಮತಿ ಪಡೆಯಬೇಕಿತ್ತು. ಬಸವಣ್ಣನವರೊಂದಿಗೆ ಹಡಪದ ಅಪ್ಪಣ್ಣನವರು ಉತ್ತಮ ಬಾಂಧವ್ಯ ಹೊಂದಿದ್ದರು ಎಂದರು.

ಸಾಹಿತಿ ವೈ.ಡಿ.ರಾಜಣ್ಣ ಮಾತನಾಡಿ, ರಾಜ, ಮಹಾರಾಜರ ಕಾಲದಲ್ಲಿ ಹಾಗೂ ಇತಿಹಾಸದಲ್ಲಿ ಹಡಪದ ಸಮುದಾಯದ ಹಿರಿಮೆ ಗರಿಮೆಗಳ ಕುರಿತು ಸಂಶೋಧನೆ ನಡೆಯಬೇಕು ಹಾಗೂ ಪ್ರಾಚೀನ ಕನ್ನಡ ಸಾಹಿತ್ಯಕ್ಕೆ ಹಡಪದ ಸಮುದಾಯದ ಸಾಹಿತಿಗಳ ಕೊಡುಗೆಯ ಬಗ್ಗೆಯೂ ಸಂಶೋಧನೆ ನಡೆಯಬೇಕಿದೆ. ಇಂತಹ ಜಯಂತಿ ಕಾರ್ಯಕ್ರಮಗಳು ನಿರಂತರವಾಗಿರಲಿ ಎಂದರು.

ತಹಸೀಲ್ದಾರ್ ಚಲುವರಾಜು ಮಾತನಾಡಿದರು. ಸರಗೂರು ಹಾಗೂ ಹೆಚ್.ಡಿ. ಕೋಟೆ ತಾಲೂಕು ಸವಿತಾ ಸಮಾಜದ ಅಧ್ಯಕ್ಷ ನರಸಿಂಹ, ಪಪಂ ಅಧ್ಯಕ್ಷೆ ರಾಧಿಕಾ, ಉಪಾಧ್ಯಕ್ಷ ವಿನಾಯಕ ಪ್ರಸನ್ನ, ಸದಸ್ಯರಾದ ವೀರೇಶ್, ಚಲುವಕೃಷ್ಣ, ನವೀನ್, ಸವಿತಾ ಸಮಾಜದ ಮುಖಂಡರಾದ ಬಸವರಾಜು, ಕುಮಾರ್, ಶ್ರೀನಿ ವಾಸ್, ರಾಮು, ರಘು, ಹನುಮಂತ, ನಾಗರಾಜು, ಮಹೇಶ್, ಶಿಕ್ಷಕರಾದ ಕಿರಣ್, ನಾಗೇಶ್, ತಾಲೂಕು ಆಡಳಿತ ವರ್ಗ ಮತ್ತಿತರರಿದ್ದರು.

ಡಿಆರ್‌ಸಿ ಸಿನಿಮಾಸ್
ದೂ : 4240422/4241800

- ಸ್ಕ್ರೀನ್ 1 ಪೆಟ್ರೋಮ್ಯಾಕ್ಸ್ (ಕ): ಬೆ.10.30ಕ್ಕೆ, ಮ.1.20ಕ್ಕೆ, ಕರ್ಮಣ್ಯೇ ವಾಧಿಕಾರಸ್ತೆ (ಕ): ಸಂ.4.10ಕ್ಕೆ, 777 ಚಾರ್ಲಿ (ಕ): ಸಂ.6.50ಕ್ಕೆ, ದಿ ವಾರಿಯರ್ (ತೆ): ರಾ.10ಕ್ಕೆ.
- ಸ್ಕ್ರೀನ್ 2 ಓ ಮೈ ಲವ್ (ಕ): ಬೆ.10.30ಕ್ಕೆ, ಗಾರ್ಗಿ (ತ): ಮ.1.30ಕ್ಕೆ, ಮೈ ಡಿಯರ್ ಭೂತಂ (ತ): ಸಂ.4.30ಕ್ಕೆ, ಥಾರ್: ಲವ್ ಅಂಡ್ ಥಂಡರ್ (3ಡಿ)(ಇಂ): ರಾ.7.20ಕ್ಕೆ, ಲಡ್ಕಿ (ಹಿಂ): ರಾ.9.55ಕ್ಕೆ.
- ಸ್ಕ್ರೀನ್ 3 ಹರಿಕಥೆ ಅಲ್ಲ ಗಿರಿಕಥೆ (ಕ): ಬೆ.10.55ಕ್ಕೆ, ಶಬ್ಬಾಶ್ ಮಿಥು (ಹಿಂ): ಮ.1.25ಕ್ಕೆ, ರಾ.9.55ಕ್ಕೆ, ಬೆಂಕಿ (ಕ): ಸಂ.4.30ಕ್ಕೆ, ಹಿಟ್: ದಿ ಫಸ್ಟ್ ಕೇಸ್ (ಹಿಂ): ರಾ.7.05ಕ್ಕೆ.
- ಸ್ಕ್ರೀನ್ 4 ಗಾರ್ಗಿ (ಕ): ಬೆ.11.20ಕ್ಕೆ, ಥಾರ್: ಲವ್ ಅಂಡ್ ಥಂಡರ್ (3ಡಿ)(ಇಂ): ಮ.2.05ಕ್ಕೆ, ಸಂ.4.30ಕ್ಕೆ, ರಾಕೆಟ್ರಿ (ಹಿಂ): ಸಂ.6.55ಕ್ಕೆ, ಚೇಜ್ (ಕ): ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

- ಸ್ಕ್ರೀನ್ 1 ಶಬ್ಬಾಶ್ ಮಿಥು (ಹಿಂ): ಬೆ.10.10, ಸಂ.4.05ಕ್ಕೆ, ರಾ.10ಕ್ಕೆ, ಥಾರ್: ಲವ್ ಅಂಡ್ ಥಂಡರ್ (3ಡಿ)(ಇಂ): ಮ.1.25ಕ್ಕೆ, ರಾ.7.20ಕ್ಕೆ.
- ಸ್ಕ್ರೀನ್ 2 777 ಚಾರ್ಲಿ (ಕ): ಬೆ.10ಕ್ಕೆ, ಸಂ.4.10ಕ್ಕೆ, ಪೆಟ್ರೋಮ್ಯಾಕ್ಸ್ (ಕ): ಮ.1.20ಕ್ಕೆ, ರಾ.7.30ಕ್ಕೆ, ದಿ ವಾರಿಯರ್ (ತೆ): ರಾ.10.20ಕ್ಕೆ.
- ಸ್ಕ್ರೀನ್ 3 ಹಿಟ್: ದಿ ಫಸ್ಟ್ ಕೇಸ್ (ಹಿಂ): ಬೆ.10.25ಕ್ಕೆ, ಸಂ.4.10ಕ್ಕೆ, ರಾ.10.10ಕ್ಕೆ, ಗಾರ್ಗಿ (ಕ): ಮ.1.15ಕ್ಕೆ, ಚೇಜ್ (ಕ): ರಾ.7.05ಕ್ಕೆ.
- ಸ್ಕ್ರೀನ್ 4 ಪದ್ಮಾವತಿ (ಕ): ಬೆ.10.50ಕ್ಕೆ, ಕರ್ಮಣ್ಯೇ ವಾಧಿಕಾರಸ್ತೆ (ಕ): ಮ.1.40ಕ್ಕೆ, ದಿ ವಾರಿಯರ್ (ತೆ): ಸಂ.4.15ಕ್ಕೆ, ಬೆಂಕಿ (ಕ): ರಾ.7.25ಕ್ಕೆ, ಓ ಮೈ ಲವ್ (ಕ): ರಾ.10ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

- ಸ್ಕ್ರೀನ್ 1 ಚೇಜ್ (ಕ): ಬೆ.10.45ಕ್ಕೆ, ಸಂ.4ಕ್ಕೆ, ಕರ್ಮಣ್ಯೇ ವಾಧಿಕಾರಸ್ತೆ (ಕ): ಮ.1.30ಕ್ಕೆ, ಪೆಟ್ರೋಮ್ಯಾಕ್ಸ್ (ಕ): ಸಂ.6.45ಕ್ಕೆ, ಮೈ ಡಿಯರ್ ಭೂತ್ (ತ): ರಾ.9.20ಕ್ಕೆ.
- ಸ್ಕ್ರೀನ್ 2 ಪೆಟ್ರೋಮ್ಯಾಕ್ಸ್ (ಕ): ಬೆ.10.45ಕ್ಕೆ, ಮ.1.30ಕ್ಕೆ, ಗಾರ್ಗಿ (ಕ): ಸಂ.4.05ಕ್ಕೆ, ಬೆಂಕಿ (ಕ): ಸಂ.6.50ಕ್ಕೆ, ಲಡ್ಕಿ (ಹಿಂ): ರಾ.9.15ಕ್ಕೆ.
- ಸ್ಕ್ರೀನ್ 3 ಗಾರ್ಗಿ (ಕ): ಮ.1.30ಕ್ಕೆ, 777 ಚಾರ್ಲಿ (ಕ): ರಾ.7.45ಕ್ಕೆ.
- ಸ್ಕ್ರೀನ್ 4 ದಿ ವಾರಿಯರ್ (ತೆ): ಬೆ.10.30ಕ್ಕೆ, ಸಂ.6.20ಕ್ಕೆ, ರಾ.9.20ಕ್ಕೆ, ಬೆಂಕಿ (ಕ): ಮ.1.30ಕ್ಕೆ, ಜುಡಾ ಹೊಕೆ ಬೈ (ಹಿಂ): ಸಂ.4ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357088
ಫೋರಂ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಬೈರಾಗಿ (ಕ): ಬೆ.10ಕ್ಕೆ, ಮ.12.15ಕ್ಕೆ, ಮ.1ಕ್ಕೆ, ರಾ.7.20ಕ್ಕೆ, ರಾ.10.15ಕ್ಕೆ, 777 ಚಾರ್ಲಿ (ಕ): ಮ.3.55ಕ್ಕೆ, ಸಂ.6.50ಕ್ಕೆ, ರಾ.10.15ಕ್ಕೆ, ಹರಿಕಥೆ ಅಲ್ಲ ಗಿರಿಕಥೆ (ಕ): ಸಂ.4.05ಕ್ಕೆ, ತ್ರಿವಿಕ್ರಮ (ಕ): ಮ.12.50ಕ್ಕೆ, ಮಿನಿಯನ್ಸ್ (3ಡಿ)(ಇಂ): ಬೆ.10.05ಕ್ಕೆ, ಮ.3.30ಕ್ಕೆ, ಸಂ.5.40ಕ್ಕೆ, ರಾ.7.50ಕ್ಕೆ, ರಾ.10ಕ್ಕೆ, ರಾಷ್ಟ್ರ ಕವಚ ಓಂ(ಹಿಂ): ಬೆ.9.40ಕ್ಕೆ, ಮ.12.40ಕ್ಕೆ, ರಾ.7ಕ್ಕೆ, ರಾ.10.10ಕ್ಕೆ, ಜಗ್‌ಜಗ್ ಜೀಯೊ (ಹಿಂ): ಮ.12.15ಕ್ಕೆ, ಪಕ್ಕ ಕಮರ್ಷಿಯಲ್ (ತೆ): ಬೆ.9ಕ್ಕೆ, ಸಂ.4.40ಕ್ಕೆ, ಸಂ.6.55ಕ್ಕೆ, ರಾ.10ಕ್ಕೆ, ರಾಕೆಟ್ರಿ (ತ): ಮ.3.10ಕ್ಕೆ, ವಿಕ್ರಂ (ತ): ರಾ.9.45ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ವಾರಿಯರ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಚಾರ್ಲಿ–777 (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಇಲ್ಲಿಂದ ಆರಂಭವಾಗಿದೆ (ಕ)	1 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಖುದಾಫಿಸ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಪೆಟ್ರೋಮ್ಯಾಕ್ಸ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಪೆಟ್ರೋಮ್ಯಾಕ್ಸ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಗಾರ್ಗಿ (ಕ)	4 ಪ್ರದರ್ಶನಗಳು
ಸಂಗಂ	
ಬೈರಾಗಿ (ಕ)	4 ಪ್ರದರ್ಶನಗಳು
ಲಿಡೋ	
ಬೆಂಕಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ದಿ ವಾರಿಯರ್ (ತ)	4 ಪ್ರದರ್ಶನಗಳು
ಸ್ಟರ್ಲಿಂಗ್	
ಓ ಮೈ ಲವ್ (ಕ)	4 ಪ್ರದರ್ಶನಗಳು
ಸ್ಕೈಲೈನ್	
ಅಂಜನ (ಕ)	4 ಪ್ರದರ್ಶನಗಳು
ಪ್ರಭಾ	
ಶುಗರ್‌ಲೆಸ್, ತೂತುಮಡಿಕೆ (ಕ)	2 ಪ್ರದರ್ಶನಗಳು

ಒಂದೇ ನಂಬರ್‌ನ 2 ಬೈಕ್‌ಗಳು ಪತ್ತೆ

1 ಬೈಕ್ ವಶ, ಪ್ರಕರಣ ದಾಖಲು





ಹೆಚ್.ಡಿ.ಕೋಟೆ, ಜು.15– ಒಂದೇ ನಂಬರ್‌ನ ಎರಡು ಬೈಕ್‌ಗಳು ಪಟ್ಟಣದಲ್ಲಿ ಪತ್ತೆಯಾಗಿದ್ದು, ದಾಖಲೆ ಇಲ್ಲದ ಒಂದು ಬೈಕನ್ನು ಹೆಚ್.ಡಿ.ಕೋಟೆ ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಪಟ್ಟಣದ ಮೊದಲನೇ ಮುಖ್ಯರಸ್ತೆಯಲ್ಲಿರುವ ರಾಯಪ್ಪ ವರ್ಕ್‌ಶಾಪ್‌ನಲ್ಲಿ ಸ್ಥಳೀಯರೊಬ್ಬರು ಹೀರೋ ಹೋಂಡಾ ಫ್ಯಾಷನ್ ಪ್ರೊ ಬೈಕ್(ಕೆಎ.10, ಕೆ.2919) ಅನ್ನು ರಿಪೇರಿಗಾಗಿ ನಿಲ್ಲಿಸಿದ್ದರು. ಅದರ ಪಕ್ಕದಲ್ಲೇ ಅದೇ ನಂಬರ್‌ನ ಮತ್ತೊಂದು ಹೀರೋ ಹೋಂಡಾ ಬೈಕ್ ರಿಪೇರಿಗಾಗಿ ನಿಂತಿತ್ತು. ಇದನ್ನು ಕಂಡು ಆಶ್ಚರ್ಯಗೊಂಡ ವ್ಯಕ್ತಿಯೋರ್ವ ಈ ಸಂಬಂಧ ಪಟ್ಟಣ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಈ ವೇಳೆ ಸ್ಥಳಕ್ಕಾಗಮಿಸಿ ಪರಿಶೀಲಿಸಿದ ಪೊಲೀಸರು ತಕ್ಷಣ ದಾಖಲೆ ಇಲ್ಲದ ಹೀರೋ ಹೋಂಡಾ ಫ್ಯಾಷನ್ ಪ್ರೊ ಬೈಕ್ ಅನ್ನು ವಶಪಡಿಸಿಕೊಂಡಿದ್ದಾರೆ.

ದಾಖಲೆ ಇಲ್ಲದ ಬೈಕ್ ಬಗ್ಗೆ ವರ್ಕ್‌ಶಾಪ್ ಮಾಲೀಕ ರಾಯಪ್ಪ ಅವರನ್ನು ವಿಚಾರಣೆಗೊಳಪಡಿಸಿದಾಗ ಬೈಕ್ ಅನ್ನು ಕೇರಳ ಮೂಲದ ವ್ಯಕ್ತಿ ರಿಪೇರಿಗಾಗಿ ಬಿಟ್ಟು ಹೋಗಿದ್ದು, 3 ತಿಂಗಳಾದರೂ ಬೈಕ್ ಪಡೆಯಲು ಬಂದಿಲ್ಲ ಎಂದು ತಿಳಿಸಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಲಕ್ಷ ರೂ. ನಗದು, ಚಿನ್ನಾಭರಣ ಕಳವು

ಹೆಚ್.ಡಿ.ಕೋಟೆ, ಜು.15– ಮನೆ ಕಿಟಕಿ ಮುರಿದು ಒಳನುಗ್ಗಿರುವ ದುಷ್ಕರ್ಮಿಗಳು ಲಕ್ಷ ರೂ. ನಗದು, ಚಿನ್ನಾಭರಣ ದೋಚಿರುವ ಘಟನೆ ಪಟ್ಟಣದ ಬೆಳಗನಹಳ್ಳಿ ರಸ್ತೆಯಲ್ಲಿ ನಡೆದಿದೆ.

ಪಟ್ಟಣದ ಬೆಳಗನಹಳ್ಳಿ ರಸ್ತೆ ನಿವಾಸಿ ಕೆಂಪಯ್ಯ ಎಂಬುವರ ಮನೆಯಲ್ಲೇ ಕಳ್ಳತನ ನಡೆದಿದೆ. ಗುರುವಾರ ಮನೆಯಲ್ಲಿ ಯಾರೂ ಇಲ್ಲದ ವೇಳೆ ಮನೆ ಕಿಟಕಿ ಮುರಿದು ಒಳ ನುಗ್ಗಿರುವ ಕಳ್ಳರು 20 ಗ್ರಾಂ ತೂಕದ 2 ಚಿನ್ನದ ಸರ ಹಾಗೂ ಲಕ್ಷ ರೂ. ನಗದನ್ನು ದೋಚಿ ಪರಾರಿಯಾಗಿದ್ದಾರೆ. ಈ ಸಂಬಂಧ ಮನೆ ಮಾಲೀಕರು ಪಟ್ಟಣದ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಸ್ಥಳಕ್ಕೆ ಅಪರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನಂದಿನಿ ಮತ್ತು ವೃತ್ತ ನಿರೀಕ್ಷಕ ಬಸವರಾಜು, ಸಿಬ್ಬಂದಿ ಶುಕ್ರವಾರ ಭೇಟಿ ನೀಡಿ ಪರಿಶೀಲಿಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಥೈರಾಯಿಡ್ ಸಮಸ್ಯೆಗೆ ಚಿಕಿತ್ಸಾ ಶಿಬಿರ

ಮೈಸೂರು, ಜು. 15– ಮೈಸೂರಿನ ಲಲಿತಾದ್ರಿಪುರ ರಸ್ತೆಯಲ್ಲಿರುವ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಜು. 15 ರಿಂದ 30 ರವರೆಗೆ ಥೈರಾಯಿಡ್ ಸಮಸ್ಯೆಗೆ ಚಿಕಿತ್ಸೆ ಮತ್ತು ಸಕ್ಕರೆ ಕಾಯಿಲೆಯಿಂದಾದ ನರಗಳ ತೊಂದರೆಗೆ ಚಿಕಿತ್ಸಾ ಶಿಬಿರ ಏರ್ಪಡಿಸಲಾಗಿದೆ. ಶಿಬಿರವು ಬೆಳಗ್ಗೆ 9.30 ರಿಂದ ಸಂಜೆ 4.30 ರವರೆಗೆ ನಡೆಯಲಿದೆ. ಮಾಹಿತಿಗೆ ಮೊ. 9741513392, ದೂ. 0821–2548231 ಸಂಪರ್ಕಿಸಬಹುದು.





